**ದಿನಾಂಕ:29.02.2020 ರಂದು ಬೆಳಿಗ್ಗೆ 11.00 ಗಂಟೆಗೆ ಶ್ರೀ ಎಂ.ಎಸ್.ಶ್ರೀಕರ್ ಭಾ.ಆ.ಸೇ ಆಯುಕ್ತರು ವಾಣಿಜ್ಯ ತೆರಿಗೆ ಇಲಾಖೆ ಬೆಂಗಳೂರು ಹಾಗೂ ಜಿಲ್ಲಾ ಉಸ್ತವಾರಿ ಕಾರ್ಯದರ್ಶಿ, ಬಳ್ಳಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾಧಿಕಾರಿ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪ್ರಗತಿ ಪರಿಶೀಲನಾ ( ವಿಡಿಯೋ ಕಾನ್ಫರೆನ್ಸ್ ) ಸಭೆಯ ನಡುವಳಿಗಳು**

ಮಾನ್ಯ ಜಿಲ್ಲಾಧಿಕಾರಿಗಳು ಬಳ್ಳಾರಿ ರವರು ಜಿಲ್ಲಾ ಮಟ್ಟದ ಪ್ರಗತಿ ಪರಿಶಿಲನಾ ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಮಾನ್ಯ ಆಯುಕ್ತರು ವಾಣಿಜ್ಯ ತೆರಿಗೆ ಇಲಾಖೆ ಬೆಂಗಳೂರು ಹಾಗೂ ಜಿಲ್ಲಾ ಉಸ್ತವಾರಿ ಕಾರ್ಯದರ್ಶಿ, ಬಳ್ಳಾರಿ ರವರಿಗೆ ಸಬೆಯನ್ನು ನಡೆಸಿಕೊಡಲು ಕೋರಿದರು, ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯದ ಕುರಿತು ಪರಿಶೀಲನಾ ಸಭೆ ನಡೆಸಲಾಯಿತು.

ಜಿಲ್ಲಾಧಿಕಾರಿಗಳು ಪ್ರವಾಹದ ಕುರಿತು ಈ ಕೆಳಕಂಡ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು

**1}ಜಿಲ್ಲಾಧಿಕಾರಿಗಳು ಪ್ರವಾಹದ ಕುರಿತು ಈ ಕೆಳಕಂಡ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು,**

1) ಪ್ರವಾಹದಿಂದ ಹಾನಿಯಾದ "ಬಿ" ವರ್ಗದ 95 ಮನೆಗಳ ತಳಪಾಯ ಹಂತದ ಜಿ.ಪಿ.ಎಸ್. ಮಾಡುವ ಕಾರ್ಯ ಪ್ರಗತಿಯಲ್ಲಿದ್ದು ಈವರೆಗೆ 46 ಮನೆಗಳ ಜಿ.ಪಿ.ಎಸ್. ಕಾರ್ಯ ಮುಗುದಿದ್ದು ತಹಶೀಲ್ದಾರರು ಅನುಮೋದನೆ ನೀಡಿರುತ್ತಾರೆ ಎಂದು ತಿಳಿಸಿದರು.
2) ಪ್ರವಾಹದಿಂದ ಸೆಪ್ಟಂಬರ್ ಮತ್ತು ಅಕ್ಟೋಬರ್ 2019ರ ತಿಂಗಳಲ್ಲಿ ಹಾನಿಯಾದ ಬೆಳೆಗಳ ಡೇಟಾ ಎಂಟ್ರಿ ಕಾರ್ಯ ಪೂರ್ಣಗೊಳಿಸಲಾಗಿದೆ ಎಂದು ತಿಳಿಸಿದರು.
3) ಪ್ರವಾಹದಿಂದ ಹಾನಿಯಾದ ಶಾಲೆ ಮತ್ತು ಅಂಗನವಾಡಿ ಕಟ್ಟಡಗಳ ಸಂಬಂಧ ಒಟ್ಟು 69 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ಇವುಗಳ ಪೈಕಿ 53 ಕಾಮಗಾರಿಗಳು ಪೂರ್ಣಗೊಂಡಿವೆ ಎಂದು ತಿಳಿಸಿದರು.
4) ಜಿಲ್ಲೆಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಟ್ಯಾಂಕರ್ ಮುಖಾಂತರ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿಲ್ಲ ಎಂದು ತಿಳಿಸಿದರು.
5) ಪ್ರಸ್ತುತ ಜಿಲ್ಲೆಯಲ್ಲಿ ಯಾವುದೇ ಮೇವು ಬ್ಯಾಂಕ್ ಮತ್ತು ಗೋಶಾಲೆಗಳು ಕಾರ್ಯನಿರ್ವಹಿಸುತ್ತಿಲ್ಲ ಎಂದು ತಿಳಿಸಿದರು.
6) ಮುಂಬರುವ ದಿನಗಳಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರು ತೊಂದರೆ ಉಂಟಾಗುವ ಗ್ರಾಮಗಳನ್ನು ಗುರುತಿಸಲಾಗಿದೆ ಮತ್ತು ಟ್ಯಾಂಕರ್ ಮುಖಾಂತರ ನೀರು ಸರಬರಾಜು ಮಾಡಲು ಟ್ಯಾಂಡರ್ ಕರೆಯಲು ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

**ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ ಈ ಕೆಳಕಂಡ ಸೂಚನೆಗಳನ್ನು ನೀಡಿದರು,**

1) ಹಡಗಲಿ ತಾಲ್ಲೂಕಿನಲ್ಲಿ 81 ಮನೆಗಳು, ಹರಪನಹಳ್ಳಿ ತಾಲ್ಲೂಕಿನಲ್ಲಿ 41 ಮನೆಗಳು, ಸಿರುಗುಪ್ಪ ತಾಲ್ಲೂಕಿನಲ್ಲಿ 05 ಮನೆಗಳು ಮತ್ತು ಬಳ್ಳಾರಿ ತಾಲ್ಲೂಕಿನಲ್ಲಿ 05 ಮನೆಗಳ ಸ್ಥಳ ಪರಿಶೀಲನ ವರದಿ ಕೂಡಲೇ ಸಲ್ಲಿಸಿ ನಿಯಮಾನುಸಾರ ಪರಿಹಾರ ನೀಡಲು ಕ್ರಮ ವಹಿಸುವಂತೆ ಸೂಚಿಸಿದರು.
2) ಪ್ರವಾಹದಿಂದ ಹಾನಿಯಾದ "ಬಿ" ವರ್ಗದ ಮನೆಗಳ ತಳಪಾಯ ಹಂತದ ಜಿ.ಪಿ.ಎಸ್. ಮಾಡುವ ಕಾರ್ಯವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸೂಚಿಸಿದರು.
3) ಸರ್ಕಾರದ ಸುತ್ತೋಲೆ ನಂ.ಕಂಇ: 89:ಟಿಎನ್‌ಆರ್:2020, ದಿನಾಂಕ: 26.2.2020 ರಲ್ಲಿ ಸೂಚಿಸಿದಂತೆ 2019–20 ನೇ ಸಾಲಿನಲ್ಲಿ ಪ್ರವಾಹದಿಂದ ಉಂಟಾದ ಬೆಳೆ ಹಾನಿಗೆ ನೀಡಲಾಗಿರುವ ಇನ್‌ಪುಟ್ ಸಬ್ಸಿಡಿ ಕುರಿತು ಭೂಮಿ ಉಸ್ತುವಾರಿ ಕೇಂದ್ರದಿಂದ ತಾಲ್ಲೂಕುವಾರು ಮತ್ತು ರೈತರವಾರು ತಯಾರಿಸಿ ಕಳುಹಿಸಿರುವ ಪಟ್ಟಿಯಲ್ಲಿನ ಪ್ರಕರಣಗಳ ಬಗ್ಗೆ ಕಂದಾಯ ಇಲಾಖೇತರ ಅಧಿಕಾರಿಗಳ ನೇತೃತ್ವದಲ್ಲಿ

ತಂಡ ರಚಿಸಿ, ನಿಯಮಾನುಸಾರ ಪರಿಶೀಲಿಸಿ, ಕೂಡಲೇ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದರು.

4) ಜಿಲ್ಲೆಯಲ್ಲಿ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡುವ ಸಮಯದಲ್ಲಿ ಸರ್ಕಾರದಿಂದ ಹೊಸದಾಗಿ ಹೊರಡಿಸಿದ "Mobile Tanker App" ಮುಖಾಂತರವೆ ನಿರ್ವಹಿಸಲು ಕ್ರಮ ವಹಿಸುವಂತೆ ಸೂಚಿಸಿದರು.

5) ಎಸ್.ಡಿ.ಆರ್.ಎಫ್. ನಿಧಿಯಡಿ ಕೈಗೊಂಡ ಅಂಗನವಾಡಿ ಮತ್ತು ಶಾಲೆಗಳ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಿ ಆರ್ಥಿಕ ಪ್ರಗತಿ ಸಾಧಿಸಲು ಸೂಚಿಸಿದರು.

## 2} ಬಳ್ಳಾರಿ ಜಿಲ್ಲೆಯ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ವಿವರಗಳು

ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 73 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿದ್ದು 73 ಯೋಜನೆಗಳ ಪೈಕಿ 67 ಯೋಜನೆಗಳು ಪೂರ್ಣಗಂಡಿದ್ದು ಇನ್ನೂಳಿದ 6 ಯೋಜನೆಗಳು ಪ್ರಗತಿಯಲ್ಲಿರುತ್ತವೆ,

**ಸದರಿ 6 ಯೋಜನೆಗಳ ವಿವರಗಳು:**

1. **ನೆಲ್ಲುಡಿ ಮತ್ತು ಇತರೆ 6 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ:** ಸದರಿ ಯೋಜನೆಯು ಹಲವು ಕಾರಣಗಳಿಂದ ಪೂರ್ಣಗೊಂಡಿರುವುದಿಲ್ಲ ಆದ್ದರಿಂದ ಟೆಂಡರ್‌ನ್ನು ರದ್ದುಗೊಳಿಸಿ ಉಳಿದ Component ಗಳಿಗೆ ಪರಿಷ್ಕೃತ ಅಂದಾಜು ಪಟ್ಟಿ ತಯಾರಿಸುವ ಹಂತದಲ್ಲಿದ್ದು, ಅನುಮೋದನೆ ಪಡೆದು ಟೆಂಡರ್ ಕರೆಯಲಾಗುವುದು.
2. **ಬುಕ್ಕಸಾಗರ ಮತ್ತು ಇತರೆ 3 ಗ್ರಾಮಗಳಿಗೆ**
3. **ದೇವಸಮುದ್ರ ಮತ್ತು ಇತರೆ 3 ಗ್ರಾಮಗಳಿಗೆ:**

   ಸದರಿ ಯೋಜನೆಗಳ ಎಲ್ಲಾ Component ಗಳು ಪೂರ್ಣಗೊಂಡಿದ್ದು 2.00 ಕಿ.ಮೀ ರಷ್ಟು ಉದ್ದದ ಪೈಪ್‌ಲೈನ್ ಕಾಮಗಾರಿ ಬಾಕಿ ಇರುತ್ತದೆ, ಸದರಿ 2.00 ಕಿ.ಮೀ ಅರಣ್ಯ ವಲಯದಲ್ಲಿರುವುದರಿಂದ ಅರಣ್ಯ ಇಲಾಖೆಯ (Stage-2) ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.ಅನುಮೋದನೆ ದೊರೆತ ತಕ್ಷಣ ಕಾಮಗಾರಿಯನ್ನು ಪೂರ್ಣಗೊಳಿಸಿ ಕಾರ್ಯಗತಗೊಳಿಸಲಾಗುವುದು.
4. **ಉಜ್ಜನಿ ಮತ್ತು ಇತರೆ 216 ಗ್ರಾಮಗಳಿಗೆ:** ಸದರಿ ಯೋಜನೆಗಳ ಎಲ್ಲಾ Component ಗಳು ಪೂರ್ಣಗೊಂಡಿದ್ದು, ಪಾವಗಡ DBOT ಯೋಜನೆಯೊಂದಿಗೆ ಸಂಯುಕ್ತಗೊಳಿಸಿ ರೂಪುರೇಖೆಯಲ್ಲಿ ಬದಲಾವಣೆ ಮಾಡಿ ಅನುಮೋದನೆ ಪಡೆಯಲಾಗಿದೆ, ಕಾಮಗಾರಿಯನ್ನು ಪೂರ್ಣಗೊಳಿಸಿ ಕಾರ್ಯಗತಗೊಳಿಸಲಾಗುವುದು.
5. **ಹರಕನಾಳು ಮತ್ತು ಇತರೆ 29 ಗ್ರಾಮಗಳಿಗೆ:** ಸದರಿ ಯೋಜನೆಗಳ ಎಲ್ಲಾ Component ಗಳು ಪೂರ್ಣಗೊಂಡಿದ್ದು, Trial Run ಪ್ರಗತಿಯಲ್ಲಿರುತ್ತದೆ.
6. **ತೆಲಿಗಿ ಮತ್ತು ಇತರೆ 56 ಗ್ರಾಮಗಳಿಗೆ:** ಸದರಿ ಯೋಜನೆಗಳ ಎಲ್ಲಾ Component ಗಳು ಪೂರ್ಣಗೊಂಡಿದ್ದು 2 GLSR ಕಾಮಗಾರಿ ಬಾಕಿ ಇರುತ್ತದೆ, ಸದರಿ GLSR ಸ್ಥಳವು ಅರಣ್ಯ ವಲಯದಲ್ಲಿರುವುದರಿಂದ ಅರಣ್ಯ ಇಲಾಖೆಯಿಂದ (Stage-2) ಅನುಮೋದನೆ ಪಡೆಯಲಾಗಿದೆ. ಕರಾರು ಒಪ್ಪಂದ ಮಾಡಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಿ ಕಾರ್ಯಗತಗೊಳಿಸಲಾಗುವುದು.

**ಈಗಾಗಲೇ 67 ಯೋಜನೆಗಳನ್ನು ಕಾರ್ಯಗತಗೊಳಿಸಿದ್ದು, ಅದರಲ್ಲಿ 3 ಯೋಜನೆಗಳು ಸುಸ್ಥಿತಿಯಲ್ಲಿರುವುದಿಲ್ಲ,**

**ಸದರಿ 3 ಯೋಜನೆಗಳ ವಿವರಗಳು:**

**1) ಬಳ್ಳಾರಿ ತಾಲೂಕಿನ ಚೇಳಗುರ್ಕಿ ಮತ್ತು ಇತರೆ 7 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆ:–**

ಸದರಿ ಯೋಜನೆಯ ಕೆರೆಯ ತಳಭಾಗದಲ್ಲಿ ಸೋರಿಕೆಯಾಗುತ್ತಿರುವುದರಿಂದ ಗ್ರಾಮಗಳಿಗೆ ಕೆರೆಯ ಸೋರಿಕೆಯನ್ನು ತಡೆಯಲು ಕೆರೆ ಸುಧಾರಣೆ ಕಾಮಗಾರಿಯನ್ನು (Improvements to IR) 2019–20ನೇ ಸಾಲಿನ ಎನ್.ಆರ್.ಡಿ.ಡಬ್ಲ್ಯೂ.ಪಿ ಕ್ರಿಯಾ ಯೋಜನೆಯಲ್ಲಿ ಅಂದಾಜು ಮೊತ್ತ ರೂ.381.50 ಲಕ್ಷಗಳಿಗೆ ಅಳವಡಿಸಿಕೊಳ್ಳಲಾಗಿದೆ, ಅಂದಾಜು ಪಟ್ಟಿ ತಯಾರಿಕೆಗಾಗಿ ಖಾಸಗಿ ಸಂಸ್ಥೆಗೆ ವಹಿಸಿಕೊಡಲಾಗಿದ್ದು, ಸದರಿ ಡಿ.ಪಿ.ಆರ್ ತಯಾರಿಕೆ ಅಂತಿಮ ಹಂತದಲ್ಲಿದ್ದು, ಸಕ್ಷಮ ಪ್ರಾಧಿಕಾರದಿಂದ ತಾಂತ್ರಿಕ ಅನುಮೋನೆ ಪಡೆದು ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗುವುದು.

2) **ಹೊಸಪೇಟೆ ತಾಲೂಕಿನ ಹಂಪದೇವನಹಳ್ಳಿ ಮತ್ತು ಇತರೆ 2 ಗ್ರಾಮಗಳು ಹಾಗೂ ಜವುಕು ಮತ್ತು ಇತರೆ 3 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು:–** ಸದರಿ 2 ಯೋಜನೆಗಳ ಕೆರೆಗಳ ಸೋರಿಕೆಯಿಂದಾಗಿ ಹಾಗೂ ಗ್ರಾಮಗಳಿಗೆ ನೀರು ಸರಬರಾಜು ಮಾಡಲು ಆಗುತ್ತಿರುವುದಿಲ್ಲ. ಸದರಿ ಯೋಜನೆಗಳ ಕೆರೆಗಳ ಸುಧಾರಣೆಗಾಗಿ ಹಾಗೂ ಇತರೆ ದುರಸ್ಥಿಗಾಗಿ ಅಂದಾಜು ಪಟ್ಟಿಯನ್ನು ತಯಾರಿಸಲು ಖಾಸಗಿ ಸಂಸ್ಥೆಗೆ ವಹಿಸಲಾಗಿದೆ, ಡಿ.ಪಿ.ಆರ್ ತಯಾರಿಸಿದ ತಕ್ಷಣ ಸದರಿ ಯೋಜನೆಯ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗುವುದು.

**3} 2019–20 ನೇ ಸಾಲಿನಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯ ಸಾದನೆಯ ವಿವರ.**

1) 2019–20 ನೇ ಸಾಲಿನಲ್ಲಿ ಜಿಲ್ಲೆಯ ಎಲ್ಲಾ 8 ತಾಲ್ಲೂಕುಗಳು ತೀವ್ರ ಬರವನ್ನು ಎದುರಿಸುತ್ತಿರುವ ಹಿನ್ನಲೆಯಲ್ಲಿ ಬೆಳೆ ನಷ್ಟ ಹೊಂದಿದ ರೈತರು ಮತ್ತು ಕೂಲಿ ಆಧರಿಸಿದ ಕುಟುಂಬಗಳು ಉದ್ಯೋಗಕ್ಕಾಗಿ ಹಾಗೂ ದೈನಂದಿನ ಜೀವನ ಸಾಗಿಸಲು ಬೇರೆ ಕಡೆ ಗುಳೆ ಹೋಗದಂತೆ ತಡೆಯುವ ನಿಟ್ಟಿನಲ್ಲಿ ಹಾಗೂ ಜಿಲ್ಲೆಯಲ್ಲಿ ಮಣ್ಣು ಮತ್ತು ನೀರು ಸಂರಕ್ಷಣಾ ಕಾಮಗಾರಿಗಳನ್ನು ಹಾಗೂ ಹೆಚ್ಚಾಗಿ ಅರಣ್ಯ ಇಲಾಖೆಯಡಿ ಅರಣ್ಯ ಪ್ರದೇಶದಲ್ಲಿ, ಸರ್ಕಾರಿ ಕಟ್ಟಡಗಳ ಆವರಣದಲ್ಲಿ, ರಸ್ತೆಬದಿಗಳಲ್ಲಿ ಹಾಗೂ ರೈತರ ಹೊಲಗಳಲ್ಲಿ ಗಿಡಗಳನ್ನು ನೆಡುವುದು ಮತ್ತು ಅರಣ್ಯ ಪ್ರದೇಶದಲ್ಲಿ ಮಣ್ಣು ಮತ್ತು ನೀರು ಸಂರಕ್ಷಣಾ ಕಾಮಗಾರಿಗಳ ಅನುಷ್ಠಾನ ಕಾರ್ಯಕ್ರಮಗಳನ್ನು ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಗ್ರಾಮ ಪಂಚಾಯತಿಗಳಲ್ಲಿ ಅಭಿಯಾನದ ಮೂಲಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ. **ಈ ಎಲ್ಲಾ ಕಾಮಗಾರಿಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವುದರಿಂದ ಭಾರತ ಸರ್ಕಾರವು 2019ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಉತ್ತಮವಾಗಿ ಅನುಷ್ಠಾನದ ಜಿಲ್ಲೆ ಎಂದು ರಾಷ್ಟ್ರಮಟ್ಟದ ಪ್ರಶಸ್ತಿಯನ್ನು ಸಹ ನೀಡಲಾಗಿರುತ್ತದೆ.**

2) 2019–20 ನೇ ಸಾಲಿನಲ್ಲಿ ಜಿಲ್ಲೆಗೆ 82 ಲಕ್ಷ ಮಾನವ ದಿನಗಳ ಸೃಜನೆಯ ಗುರಿಯು ನಿಗದಿಪಡಿಸಿದ್ದು 75.05 ಲಕ್ಷ ಮಾನವ ದಿನಗಳನ್ನು ಸೃಜಿಸಿ ಶೇ 92 ರಷ್ಟು ಸಾಧನೆ ಮಾಡಿ ರಾಜ್ಯದಲ್ಲಿ 8 ನೇ ಸ್ಥಾನದಲ್ಲಿದೆ.

3) 4644 ಕುಟುಂಬಗಳಿಗೆ 150 ಮಾನವ ದಿನಗಳು, 2839 ಕುಟುಂಬಗಳಿಗೆ 100 ಮಾನವದಿನಗಳು ಹಾಗೂ 25036 ಕುಟುಂಬಗಳು 81 ದಿನಕ್ಕಿತ ಹೆಚ್ಚಿಗೆ ಮಾನವ ದಿನಗಳು, 10505 ಕುಟುಂಬಗಳಿಗೆ 70 ದಿನಕ್ಕಿಂತ ಹೆಚ್ಚಿನ ಮಾನವದಿನಗಳ ಕೂಲಿಕೆಲಸವನ್ನು ನೀಡಲಾಗಿದ್ದು ಒಟ್ಟು 145227

ಕುಟುಂಬಗಳಿಗೆ ಕೆಲಸವನ್ನು ನೀಡಲಾಗಿದ್ದು ಇದರಲ್ಲಿ 151503 ಜನ ಮಹಿಳೆಯರು ಶೇ 52 ರಷ್ಟು ನರೇಗಾ ಯೋಜನೆಯಡಿ ಕೆಲಸವನ್ನು ನಿರ್ವಹಿಸಿರುತ್ತಾರೆ.

4) ರೈತರ ಜಮೀನುಗಳಲ್ಲಿ ಕಿರುಜಲಾನಯನ (ಮಣ್ಣು ಮತ್ತು ನೀರು ಸಂರಕ್ಷಣೆ ಉದ್ದೇಶದಿಂದ ಸದರಿ ಕಿರು ಜಲಾನಯನ ಪ್ರದೇಶದ ವ್ಯಾಪ್ತಯಲ್ಲಿ ಬರುವ ಎಲ್ಲಾ ಫಲಾನುಭವಿಗಳ ಹೊಲಗಳಲ್ಲಿ ಕಂದಕ ಮತ್ತು ಬದು ನಿರ್ಮಾಣ) 12000 ಹಕ್ಟೇರ್ ಪ್ರದೇಶದಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

5) ಅಂತರ್ಜಲಮಟ್ಟ ಹೆಚ್ಚಿಸುವ ಸಲುವಾಗಿ 1457 ರೈತರ ಜಮೀನುಗಳಲ್ಲಿ ಕೃಷಿ ಹೊಂಡ ಕಾಮಗಾರಿಗಳನ್ನು ನಿರ್ಮಾಣ ಮಾಡಲಾಗಿದೆ.

6) ರೈತರ ಹೊಲಗಳಲ್ಲಿರುವ 2354 ವೈಯಕ್ತಿಕ ಬೋರ್‌ವೆಲ್‌ಗಳಿಗೆ ನೀರು ಮರುಪೂರಣ ಘಟಕಗಳನ್ನು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ..

7) 2019-20 ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನಡಿ ಅರಣ್ಯ ಇಲಾಖೆಯ ಮೂಲಕ ಒಟ್ಟು 186 ಕಿ.ಮೀ ರಸ್ತೆ ಬದಿ ಗಿಡಗಳನ್ನು ನೆಡಲಾಗಿದೆ. ಹಾಗೂ ಅರಣ್ಯ ಪ್ರದೇಶದಲ್ಲಿ ಮಣ್ಣು ಮತ್ತು ತೇವಾಂಶ ಸಂರಕ್ಷಣೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

8) ತೋಟಗಾರಿಕೆ ಇಲಾಖೆಯ ಮುಖಾಂತರ ತೋಟಗಾರಿಕೆ ಪ್ರದೇಶ ವಿಸ್ತರಣೆಯ ಉದ್ದೇಶದಿಂದ ನರೇಗಾ ಯೋಜನೆಯಡಿ **"ರೈತಸಿರಿ"** ಎಂಬ ಉಪಯೋಜನೆಯನ್ನು ಜಾರಿಗೆ ತಂದು ಅದರಲ್ಲಿ 1036 ಹೆಕ್ಟೇರ್ ಹೊಸ ಪ್ರದೇಶ ವಿಸ್ತರಣೆ ಮಾಡಲಾಗಿದೆ.

9) ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕೃಷಿ ಇಲಾಖೆಯ ಮೂಲಕ 2400 ಎರೆಹುಳುತೊಟ್ಟಿಗಳನ್ನು ನಿರ್ಮಾಣ ಮಾಡಿ ರೈತರಿಗೆ ಎರೆಹುಳುಗಳನ್ನು ನೀಡಿ ಗೊಬ್ಬರವನ್ನು ತಯಾರುಮಾಡುವ ಕುರಿತು ತರಬೇತಿಯನ್ನು ನೀಡಲಾಗುತ್ತಿದೆ.

10) ಅಂತರ್ಜಲಮಟ್ಟವನ್ನು ಹೆಚ್ಚಿಸುವುದಕ್ಕಾಗಿ ಭೂವಿಜ್ಞಾನಿಗಳಿಂದ ಸ್ಥಳ ಆಯ್ಕೆಮಾಡಿ ಸರ್ವೆಯನ್ನು ಮಾಡಿಸಿ 94 ಮಲ್ಟಿ ಆರ್ಚ್‌ಚೆಕ್ ಡ್ಯಾಂಗಳನ್ನು ಗಳನ್ನು ನಿರ್ಮಾಣ ಮಾಡಲಾಗಿದೆ. 48 ಚೆಕ್ ಡ್ಯಾಂಗಳು ಪ್ರಗತಿಯಲ್ಲಿವೆ.

11) ರೇಷ್ಮೆ ಇಲಾಖೆಯ ಮೂಲಕ ರೇಷ್ಮೆ ಹಿಪ್ಪುನೇರಳೆ ತೋಟದ 354 ಹೆಕ್ಟೇರ್ ಹೊಸ ಪ್ರದೇಶ ವಿಸ್ತರಣೆಯನ್ನು ಮಾಡಲಾಗಿದೆ.

12) 2135 ಕೆರೆ, ಗೋಕಟ್ಟೆ, ಕಲ್ಯಾಣಿ ಮತ್ತು ಚೆಕ್ ಡ್ಯಾಂಗಳ ಹೂಳುತೆಗೆದು ಪುನಶ್ಚೇತನಗೊಳಿಸಲು ಕ್ರಮವಹಿಸಲಾಗಿದೆ.

13) ಇಂಜೆಕ್ಷನ್ ವೆಲ್ (ಇಂಗುಬಾವಿ) ಹಾಗೂ ಕೊಳವೆಬಾವಿಗಳ ಮರುಪೂರಣ ಘಟಕಗಳನ್ನು ಅನುಪಯುಕ್ತ ಬೋರ್‌ವೆಲ್‌ಗಳಿಗೆ ಹಾಗೂ ನಲಾಗಳಲ್ಲಿ ಹರಿದು ಹೋಗುವಂತಹ ಮಳೆ ನೀರನ್ನು ಅಲ್ಲಿಯೇ ಇಂಗಿಸುವಂತಹ 570 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

**14) ಬಳ್ಳಾರಿ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿಗೆ 2 ಗ್ರಾಮ ಪಂಚಾಯತಿಗಳಲ್ಲಿ ಮಾದರಿಯಾಗಿ ಎಕೋ ಪಾರ್ಕ (ಗ್ರಾಮೀಣ ಉದ್ಯಾನವನ) ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ (2ಎಕರೆ ಮೇಲ್ಪಟ್ಟ ಸರ್ಕಾರಿ ಜಾಗದಲ್ಲಿ) ಉದಾ:- ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕರಿಗಾಗಿ ಆರೋಗ್ಯಕರವಾದಂತಹ, ನೆಮ್ಮದಿ ದೊರೆಯುವಂತಹ, ಒಳ್ಳೆಯ ವಾಯುವಿಹಾರ ವಾತಾವರಣ ಸೃಷ್ಟಿ ಮಾಡುವಂತಹ ಹಾಗೂ ಶುದ್ಧಗಾಳಿ, ವಿಶ್ರಾಂತಿ, ಇನ್ನಿತರೆ ತೆರೆದ ವ್ಯಾಯಾಮ ಕೇಂದ್ರವನ್ನು ಸಹ ಸದರಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದ್ದು, 16 ಕಡೆ ಕಾಮಗಾರಿಗಳು ಪ್ರಗತಿಯಲ್ಲಿವೆ.** (ಉದಾ: ಒಳ್ಳೆಯ ಪಾದಚಾರಿ ಮಾರ್ಗ, ಮೆಕ್ಸಿಕನ್ ಹುಲ್ಲಿನ ಲ್ಯಾನ್ ಮಾಡುವುದು, ದುರಂತಾ ಗಿಡದ ಹೆಡ್ಜಗಳ ನಿರ್ಮಾಣ ಹೂವಿನ ಗಿಡಗಳ ಮಡಿಗಳ ನಿರ್ಮಾಣ (ಶ್ರಬ್ಸ್), ರಾಯಲ್ ಪಾಮ್ಸ್ ಅಲಂಕಾರಿಕ ಗಿಡಗಳನ್ನು ಮುಖ್ಯ ರಸ್ತೆಯ ಎರಡು ಬದಿಯಲ್ಲಿ ನೆಡುವುದು, ವಿವಿಧ ಹಣ್ಣಿನ ಗಿಡಗಳ ತಾಕಿನ ನಿರ್ಮಾಣ, ಇತರೆ ತೋಟಗಾರಿಕೆ ಗಿಡಗಳ ಸಾಮಾನ್ಯ ತೌಕಿನ ನಿರ್ಮಾಣ ಮಾಡುವುದು, ಮಾನ್ಸೂನ್ ನೆಡುತೋಪು ನಿರ್ಮಾಣ (ಟ್ರೀ ಪ್ಲಾಂಟೇಶನ್) ಔಷದೀಯ ಗುಣಗಳನ್ನು ಹೊಂದಿರುವ ಸಸಿಗಳನ್ನು ಬೆಳೆಸುವುದು (ಅಶ್ವಗಂಧ, ಬಿಲ್ವಿ ಪತ್ರಿ, ಬನ್ನಿ ಪತ್ರಿ, ಬೇಲದಹಣ್ಣು, ನೇರಳೆಹಣ್ಣು, ಬೇವು, ಇತ್ಯಾದಿ ಗಿಡಗಳು)

4}ಸ್ವಚ್ಛ ಭಾರತ್ ಮಿಷನ್(ಗ್ರಾಮೀಣ)

ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯಡಿಯಲ್ಲಿ ಘನ ಮತ್ತುದ್ರವತ್ಯಾಜ್ಯ ನಿರ್ವಹಣೆಯಕುರಿತು ಅನುಷ್ಠಾನ ಮಾಡಲಾಗುತ್ತಿದ್ದು, ಜಿಲ್ಲೆಯಒಟ್ಟು 8 ತಾಲ್ಲೂಕಿನ 237 ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನ ಮಾಡಲಾಗುತ್ತಿದ್ದು ಸ್ವಚ್ಛ ಭಾರತ್ ಮಿಷನ್ಅಡಿಯಲ್ಲಿಒಟ್ಟು ರೂ.20.00 ಲಕ್ಷಗಳವರಗೆ ಪ್ರತಿಗ್ರಾಮ ಪಂಚಾಯತಿಗೆ ಸರ್ಕಾರದಿಂದ ನೀಡಲಾಗುತ್ತಿದ್ದು, ಅದರಲ್ಲಿ ಘನ ತ್ಯಾಜ್ಯ ನಿರ್ವಹಣಾಘಟಕ ನಿರ್ಮಾಣಕ್ಕೆ, ಸಂಗ್ರಹಣ ವಾಹನ ಖರೀದಿಗೆ, ಮನೆ ಮನೆ ಕಸ ಬುಟ್ಟಿ ವಿತರಣೆಗೆ, ಹಾಗೂ ಕಸ ಸಂಗ್ರಹಕರಿಗೆ ವಿವಿಧರೀತಿಯ ಸುರಕ್ಷಿತ ಪರಿಕರಗಳನ್ನು ವ್ಯವಸ್ಥೆ ಮಾಡಿಕೊಳ್ಳಲು ಬಳಸಿಕೊಳ್ಳಬಹುದಾಗಿದೆ,ಹಾಗೂ ಮಹಾತ್ಮಗಾಂಧಿರಾಷ್ಟ್ರೀಯಗ್ರಾಮೀಣಉದ್ಯೋಗಖಾತ್ರಿಯೋಜನೆಯಡಿ, NLRM ಯೋಜನೆಯಡಿತರಬೇತಿಗಾಗಿ, 14ನೇ ಹಣಕಾಸುಯೋಜನೆಯಡಿ ಹಾಗೂ ಗ್ರಾಮ ಪಂಚಾಯತಿಇತರೆಅನುದಾನವನ್ನು ಬಳಸಿಕೊಂಡು ಗ್ರಾಮೀಣ ಪ್ರದೇಶದಲ್ಲಿ ಸುರಕ್ಷಿತ ಕಸ ಸಂಗ್ರಣೆಗೆ ಹೆಚ್ಚಿನ ಆಸಕ್ತಿ ತೋರಿಸಲಾಗುತ್ತಿದೆ.

ಬಳ್ಳಾರಿ ಜಿಲ್ಲೆಯಒಟ್ಟು 237 ಗ್ರಾಮ ಪಂಚಾಯತಿಗಳಲ್ಲು ಘನ ತ್ಯಾಜ್ಯ ನಿರ್ವಹಣಾಕುರಿತುಕಾರ್ಯಕ್ರಮವನ್ನು ಅನುಷ್ಠಾನ ಮಾಡಲುಕ್ರಮವಹಿಸಲಾಗಿದೆ, ಈಗಾಗಲೇ 146 ಗ್ರಾಮ ಪಂಚಾಯತಿಗಳಲ್ಲಿ ಸ್ಥಳವನ್ನು ಗುರುತಿಸಿ ವಿಸ್ತೃತಯೋಜನಾ ವರದಿ ತಯಾರಿಸಲು ಸಂಬಂಧಿಸಿದ ಗ್ರಾಮ ಪಂಚಾಯತಿಗಳಿಗೆ ತರಬೇತಿ ನೀಡಲಾಗಿದ್ದು, ಗ್ರಾಮ ಪಂಚಾಯತಿ ಮಟ್ಟದಲ್ಲಿ ಸರ್ಕಾರಿ ಸ್ಥಳವನ್ನು ಗುರುತಿಸಿ ಮಾನ್ಯ ತಹಶಿಲ್ದಾರ್ ರವರಿಗೆ ಪತ್ರ ಬರೆಯಲಾಗಿದ್ದು ಸ್ಥಳ ಮಂಜೂರಾದ ನಂತರ ಸರ್ಕಾರದಿಂದಅನುಮೋದನೆಕೋರಿ ವಿಸ್ತೃತಯೋಜನಾ ವರದಿ

ಸಲ್ಲಿಸಲಾಗುವುದು, ಪ್ರಸ್ತುತ 100 ಗ್ರಾಮ ಪಂಚಾಯತಿಗಳಲ್ಲಿ ಸೂಕ್ತ ಸ್ಥಳವನ್ನು ಗುರುತಿಸಿ 98 ಗ್ರಾಮ ಪಂಚಾಯತಿಗಳಿಗೆ ಸರ್ಕಾರದಿಂದಅನುಮೋದನೆ ಪಡೆಯಲಾಗಿದ್ದು, ಅವುಗಳಲ್ಲಿ ಮೊದಲನೇ ಹಂತದಲ್ಲಿಅನುಮೋದನೆ ಪಡೆದ 16 ಗ್ರಾಮ ಪಂಚಾಯತಿಗೆ ವಾಹನಗಳನ್ನು ಖರೀದಿಸಲಾಗಿದ್ದುಎರಡನೇ ಹಂತದಲ್ಲಿ 80 ಗ್ರಾಮ ಪಂಚಾಯತಿಗಳಿಗೆ ವಾಹನಗಳನ್ನು ಸಂಬಂಧಿಸಿದ ಗ್ರಾಮ ಪಂಚಾಯತಿಗಳಿಗೆ ಖರೀದಿಸಲಾಗಿದೆ.ಮುಂದಿನ ಹಂತದಲ್ಲಿ ಬಾಕಿ ಇರುವಗ್ರಾಮ ಪಂಚಾಯತಿಗಳಲ್ಲಿ ಕ್ಲಸ್ಟರ್ ಮಾಡುವ ಮೂಲಕ ಅನುಷ್ಠಾನ ಗೊಳಿಸಲಾಗುವುದು.

ಸ್ವಚ್ಚ ಭಾರತ್ ಮಿಷನ್
ಘನ ತ್ಯಾಜ್ಯ ನಿರ್ವಹಣೆ ಘಟಕಗಳ ಪ್ರಗತಿ ಪರಿಶೀಲನೆ

| ಕ್ರ.ಸಂ | ತಾಲ್ಲೂಕಿನ ಹೆಸರು | ಒಟ್ಟು ಗ್ರಾಮ ಪಂಚಾಯತಿಗಳ ಸಂಖ್ಯೆ | . ಸ್ಥಳ ಗುರುತಿಸಿದ ಗ್ರಾ.ಪಂಗಳ ಸಂಖ್ಯೆ | ಸರ್ಕಾರದಿಂದ ಅನುಮೋದನೆಯಾದ ಕ್ರಿಯಾ ಯೋಜನೆಗಳ ಸಂಖ್ಯೆ | ಸರ್ಕಾರದಿಂದ ಅನುಮೋದನೆ ಬಾಕಿ ಇರುವ ಸಂಖ್ಯೆ | ಸರ್ಕಾರದ ಅನುಮೋದನೆಗೆ ಕ್ರಿಯಾ ಯೋಜನೆ ಸಲ್ಲಿಸಬೇಕಾದ ಗ್ರಾ.ಪಂ ಗಳ ಸಂಖ್ಯೆ | ಒಟ್ಟು | ಇನ್ನೂ ಬಾಕಿ DPR ತಯಾರಿಸಬೇಕಾದ ಗ್ರಾ.ಪಂಗಳ ಸಂಖ್ಯೆ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| 1 | ಬಳ್ಳಾರಿ | 39 | 22 | 12 | 0 | 0 | 12 | 27 |
| 2 | ಹಡಗಲಿ | 26 | 8 | 4 | 0 | 0 | 4 | 22 |
| 3 | ಹ.ಬೋ ಹಳ್ಳಿ | 24 | 11 | 8 | 0 | 0 | 8 | 16 |
| 4 | ಹೊಸಪೇಟೆ | 22 | 22 | 16 | 0 | 0 | 16 | 6 |
| 5 | ಕೂಡ್ಲಿಗಿ | 36 | 36 | 31 | 0 | 1 | 32 | 4 |
| 6 | ಸಂಡೂರು | 26 | 12 | 5 | 0 | 1 | 6 | 20 |
| 7 | ಸಿರುಗುಪ್ಪ | 27 | 13 | 11 | 0 | 0 | 11 | 16 |
| 8 | ಹರಪನಹಳ್ಳಿ | 37 | 22 | 11 | 0 | 0 | 11 | 26 |
| ಒಟ್ಟು | | 237 | 146 | 98 | 0 | 2 | 100 | 137 |

**ಈ ಮೇಲೆ ಸೂಚಿಸಿದ ಅಂಶಗಳಿಗೆ ಸಂಬಂದಿಸಿದಂತೆ ಸಂಬಂಸದೊಟ್ಟ ಅಧಿಕಾರಿಗಳು ಸರ್ಕಾರದ ನಿಗಧಿ ಪಡಿಸಿದ ಅವಧಿಯೊಳಗೆ ವಹಿಸಲಾದ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು ಹಾಗೂ ಪೂರ್ಣಗೊಳಿಸಿದ ಬಗ್ಗೆ ಅನುಪಾನಾ ವರದಿಯನ್ನು ತಯಾರಿಸಿ ಈ ಕಾರ್ಯಾಲಯಕ್ಕೆ ಕಡ್ಡಾಯವಾಗಿ ಸಲ್ಲಿಸಲು ಸೂಚಿಸಲಾಯಿತು.**

**ಈ ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಗೊಳಿಸಲಾಯಿತು**

ಎಂ.ಎಸ್.ಶ್ರೀಕರ್ ಭಾ.ಆ.ಸೇ
ಆಯುಕ್ತರು ವಾಣಿಜ್ಯ ತೆರಿಗೆ ಇಲಾಖೆ ಬೆಂಗಳೂರು
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು
ಬಳ್ಳಾರಿ.

ಪ್ರತಿಯನ್ನು :-

1.ಜಿಲ್ಲಾಧಿಕಾರಿಗಳು ಬಳ್ಳಾರಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

2.ಮುಖ್ಯ ಕಾರ್ಯನಿವಾರ್ಹಣಾಧಿಕಾರಿಗಳು ಜಿಲ್ಲಾ ಪಂಚಾಯತ್ ಬಳ್ಳಾರಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

3.ಸಂಬಂದ ಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ

<u>ನಮೂನೆ</u>

<u>ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ</u>

| ಕ್ರ. ಸಂ. | ಅಂಶಗಳು | |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಬಳ್ಳಾರಿ. |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಹೆಸರು | ಶ್ರೀ ಎಂ.ಎಸ್. ಶ್ರೀಕರ್ |
| 3 | ಪ್ರವಾಸ ಕೈಗೊಂಡ ದಿನಾಂಕ | 29-02-2020 (ವಿಡಿಯೋ ಕಾನ್ಫರೆನ್ಸ್) |
| A | **ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ** | |
| a) | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | ಪ್ರವಾಹ ಕುರಿತ ಈ ಕೆಳಕಂಡ ಮಾಹಿತಿ<br>1. ಪ್ರವಾಹದಿಂದ ಹಾನಿಯಾದ "ಬಿ" ವರ್ಗದ 95 ಮನೆಗಳ ತಳಪಾಯ ಹಂತದ ಜಿ.ಪಿ.ಎಸ್ ಮಾಡುವ ಕಾರ್ಯ ಪ್ರಗತಿಯಲ್ಲಿ 49 ಮನೆಗಳ ಜಿ.ಪಿ.ಎಸ್ ಕಾರ್ಯದಲ್ಲಿ ತಹಶೀಲ್ದಾರರ ಅನುಮೋದನೆ ಪಡೆಯದೇ ಇರುವುದು.<br>2. ಪ್ರವಾಹದಿಂದ ಹಾನಿಯಾದ ಶಾಲೆ ಮತ್ತು ಅಂಗನವಾಡಿ ಕಟ್ಟಡಗಳ ಸಂಬಂಧ ಒಟ್ಟು 69 ಕಾಮಗಾರಿಗಳಲ್ಲಿ ಇನ್ನು 16 ಕಾಮಗಾರಿ ಬಾಕಿ ಇರುವುದು.<br>3. ಜಿಲ್ಲೆಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಟ್ಯಾಂಕರ್ ಮುಖಾಂತರ ಕುಡಿಯುವ ನೀರು ಸರಬರಾಜು ಮಾಡದೇ ಇರುವುದು.<br>4. ಪ್ರಸ್ತುತ ಜಿಲ್ಲೆಯಲ್ಲಿ ಯಾವುದೇ ಮೇವು ಬ್ಯಾಂಕ್ ಮತ್ತು ಗೋಶಾಲೆಗಳು ಕಾರ್ಯನಿರ್ವಹಿಸದೇ ಇರುವುದು.<br><br>ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 73 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿದ್ದು 73 ಯೋಜನೆಗಳ ಪೈಕಿ 67 ಯೋಜನೆಗಳು ಪೂರ್ಣಗೊಂಡಿರುವುದು ಹಾಗೂ ಪ್ರಗತಿಯಲ್ಲಿರುವ ಇನ್ನುಳಿದ 6 ಯೋಜನೆಗಳು. |

| | | |
|---|---|---|
| | | 1. ನೆಲ್ಲುಡಿ ಮತ್ತು ಇತರೆ 6 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ.<br>2. ಬುಕ್ಕಸಾಗರ ಮತ್ತು ಇತರೆ 3 ಗ್ರಾಮಗಳು<br>3. ದೇವಸಮುದ್ರ ಮತ್ತು ಇತರೆ 3 ಗ್ರಾಮಗಳು<br>4. ಉಜ್ಜನಿ ಮತ್ತು ಇತರೆ 216 ಗ್ರಾಮಗಳು<br>5. ಹರಕನಾಳು ಮತ್ತು ಇತರೆ 29 ಗ್ರಾಮಗಳು<br>6. ತೆಲಿಗಿ ಮತ್ತು ಇತರೆ 56 ಗ್ರಾಮಗಳು<br><br>ಪೂರ್ಣಗೊಂಡಿರುವ ಬಹುಗ್ರಾಮ ಕುಡಿಯುವ ನೀರಿನ 67 ಯೋಜನೆಗಳಲ್ಲಿ ಸುಸ್ಥಿತಿಯಲ್ಲಿರದ ಈ ಕೆಳಕಂಡ 3 ಯೋಜನೆಗಳು<br><br>1. ಬಳ್ಳಾರಿ ತಾಲ್ಲೂಕಿನ ಚೇಳಗುರ್ಕಿ ಮತ್ತು ಇತರೆ 7 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆ<br>2. ಹೊಸಪೇಟೆ ತಾಲ್ಲೂಕಿನ ಹಂಪದೇವನಹಳ್ಳಿ ಮತ್ತು ಇತರೆ 2 ಗ್ರಾಮಗಳು<br>3. ಜವುಕು ಮತ್ತು ಇತರೆ 3 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು |

| | | |
|---|---|---|
| b) | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | • ಹಡಗಲಿ ತಾಲ್ಲೂಕಿನಲ್ಲಿ 81 ಮನೆಗಳು, ಹರಪನಹಳ್ಳಿ ತಾಲ್ಲೂಕಿನಲ್ಲಿ 41 ಮನೆಗಳು, ಸಿರುಗುಪ್ಪ ತಾಲ್ಲೂಕಿನಲ್ಲಿ 05 ಮನೆಗಳು ಮತ್ತು ಬಳ್ಳಾರಿ ತಾಲ್ಲೂಕಿನಲ್ಲಿ 05 ಮನೆಗಳ ಸ್ಥಳ ಪರಿಶೀಲನ ವರದಿ ಕೂಡಲೇ ಸಲ್ಲಿಸಿ ನಿಯಮಾನುಸಾರ ಪರಿಹಾರ ನೀಡಲು ಕ್ರಮ ವಹಿಸುವಂತೆ ಸೂಚಿಸಿದರು..<br>• ಪ್ರವಾಹದಿಂದ ಹಾನಿಯಾದ "ಬಿ" ವರ್ಗದ ಮನೆಗಳ ತಳಪಾಯ ಹಂತದ ಜಿ.ಪಿ.ಎಸ್. ಮಾಡುವ ಕಾರ್ಯವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ತಿಳಿಸಿರುತ್ತಾರೆ.<br>• ಸರ್ಕಾರದ ಸುತ್ತೋಲೆ ನಂ.ಕಂಇ: 89:ಟಿಎನ್‌ಆರ್:2020, ದಿನಾಂಕ: 26.2.2020 ರಲ್ಲಿ ಸೂಚಿಸಿದಂತೆ 2019-20 ನೇ ಸಾಲಿನಲ್ಲಿ ಪ್ರವಾಹದಿಂದ ಉಂಟಾದ ಬೆಳೆ ಹಾನಿಗೆ ನೀಡಲಾಗಿರುವ ಇನ್‌ಪುಟ್ ಸಬ್ಸಿಡಿ ಕುರಿತು ಭೂಮಿ ಉಸ್ತುವಾರಿ ಕೇಂದ್ರದಿಂದ ತಾಲ್ಲೂಕುವಾರು ಮತ್ತು ರೈತರವಾರು ತಯಾರಿಸಿ ಕಳುಹಿಸಿರುವ ಪಟ್ಟಿಯಲ್ಲಿನ ಪ್ರಕರಣಗಳ ಬಗ್ಗೆ ಕಂದಾಯ ಇಲಾಖೇತರ ಅಧಿಕಾರಿಗಳ ನೇತೃತ್ವದಲ್ಲಿ ತಂಡ ರಚಿಸಿ, ನಿಯಮಾನುಸಾರ ಪರಿಶೀಲಿಸಿ, ಕೂಡಲೇ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ತಿಳಿಸಿರುತ್ತಾರೆ.<br>• ಜಿಲ್ಲೆಯಲ್ಲಿ ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡುವ ಸಮಯದಲ್ಲಿ ಸರ್ಕಾರದಿಂದ ಹೊಸದಾಗಿ ಹೊರಡಿಸಿದ "Mobile Tanker App" ಮುಖಾಂತರವೆ ನಿರ್ವಹಿಸಲು ಕ್ರಮ ವಹಿಸುವಂತೆ ಸೂಚಿಸಿದರು.<br>• ಎಸ್.ಡಿ.ಆರ್.ಎಫ್. ನಿಧಿಯಡಿ ಕೈಗೊಂಡ ಅಂಗನವಾಡಿ ಮತ್ತು ಶಾಲೆಗಳ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಿ ಆರ್ಥಿಕ ಪ್ರಗತಿ ಸಾಧಿಸಲು ಸೂಚಿಸಿದರು. |

ಶ್ರೀಕರ್. ಎಂ.ಎಸ್., ಭಾ.ಆ.ಸೇ..
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.
ಬಳ್ಳಾರಿ ಜಿಲ್ಲೆ ಉಸ್ತುವಾರಿ
ಕಾರ್ಯದರ್ಶಿಗಳು

ಟಿ.ಕೆ. ಅನಿಲ್ ಕುಮಾರ್, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ಸರ್ಕಾರ

ಕರ್ನಾಟಕ
ಒಂದು ರಾಜ್ಯ. ಹಲವು ಜಗತ್ತುಗಳು.

ಅ.ಸ.ಪ.ಸಂಖ್ಯೆ: ಪ್ರಇ 41 ಪ್ರಕಾ 2020

ದಿನಾಂಕ:03.03.2020

ಮಾನ್ಯರೆ,

ವಿಷಯ: ಫೆಬ್ರವರಿ 2020ನೇ ಮಾಹೆಯಲ್ಲಿ ಪ್ರವಾಸೋದ್ಯಮ ಇಲಾಖೆಯಲ್ಲಿ ಕೈಗೊಂಡ ಚಟುವಟಿಕೆಗಳ ಮಾಹಿತಿ ಒದಗಿಸುವ ಬಗ್ಗೆ.

*****

ದಿನಾಂಕ 01-02-2020ರಿಂದ 29-02-2020ರವರೆಗೆ, ಪ್ರವಾಸೋದ್ಯಮ ಇಲಾಖೆಗೆ ಸಂಬಂಧಿಸಿದಂತೆ ಕೈಗೊಂಡಿರುವ ಚಟುವಟಿಕೆಗಳ ವಿವರ ಈ ಕೆಳಕಂಡಂತಿದೆ:

| | | |
|---|---|---|
| 1. | ಫೆಬ್ರವರಿ ತಿಂಗಳಿನಲ್ಲಿ ತೆಗೆದುಕೊಳ್ಳಲಾದ ಮುಖ್ಯ ಚಟುವಟಿಕೆಗಳು | ➢ ಡೆಕ್ಕನ್ ಹೆರಿಟೇಜ್ ಸರ್ಕ್ಯೂಟ್ ಅಭಿವೃದ್ಧಿ ಕುರಿತು ಚರ್ಚೆ<br>➢ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ 2020-21ನೇ ಸಾಲಿನ ಆಯವ್ಯಯ KTVG & Tourism Task Force ಪೂರ್ವಾಭಾವಿ ಚರ್ಚೆ.<br>➢ ಮಾನ್ಯ ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯಲ್ಲಿ 2020-21ನೇ ಸಾಲಿನ ಆಯವ್ಯಯ ಪೂರ್ವಾಭಾವಿ ಚರ್ಚೆ.<br>➢ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ Governing Council Meeting.<br>➢ ಮಾನ್ಯ ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವತಿಯಿಂದ 4 ಸ್ಟಾರ್ ಹೋಟೆಲ್‌ಗಳ ಟೆಂಡರ್ ಪ್ರಕ್ರಿಯೆ ಬಗ್ಗೆ ಹಾಗೂ ಪ್ರಸಾದ್ ಯೋಜನೆ ಕುರಿತು ಚರ್ಚೆ.<br>➢ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆಡಳಿತ ಮಂಡಳಿ ಸಭೆ.<br>➢ ಮಾನ್ಯ ಪ್ರವಾಸೋದ್ಯಮ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯದಲ್ಲಿ ಇ-ಟ್ಯಾಕ್ಸಿ ಯೋಜನೆಯನ್ನು ಪರಿಚಯಿಸುವ ಬಗ್ಗೆ<br>➢ FCI BoG ಸಭೆ.<br>➢ ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ ಕುರಿತು ಚರ್ಚೆ<br>➢ ರಾಜ್ಯದ 20 ಪ್ರವಾಸಿ ತಾಣಗಳನ್ನು ಕೇಂದ್ರಗಳನ್ನು ವಿಶ್ವ ದರ್ಜೆಯ ಪ್ರವಾಸಿ ತಾಣಗಳಾಗಿ ಅಭಿವೃದ್ಧಿ ಪಡಿಸುವ ಕುರಿತು ಚರ್ಚೆ |

ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಕಛೇರಿ
ಟಪಾಲು / ಪತ್ರ / ಮನವಿ ಸ್ವೀಕರಿಸಲಾಗಿದೆ
ದಿನಾಂಕ: 04/03/2020

ಕೊಠಡಿ ಸಂಖ್ಯೆ 5, ನೆಲಮಹಡಿ, ವಿಕಾಸ ಸೌಧ, ಬೆಂಗಳೂರು – 560 001, ಕರ್ನಾಟಕ, ಭಾರತ
ದೂ: +91 80 22255482, 22034338, 22034007 ಫ್ಯಾಕ್ಸ್ : +91 80 22253732, E-mail: acs-tour@karnataka.gov.in Website: www.karnatakatourism.org

| | | |
|---|---|---|
| | | ➢ ಎಂ.ಎಂ.ಆರ್.<br>➢ ಮಾನ್ಯ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ FMS/LMS ಹಾಗೂ ಸಕಾಲ ಕುರಿತು ಸಭೆ.<br>➢ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಕೆ.ಡಿ.ಪಿ. ಪರಿಶೀಲನಾ ಹಾಗೂ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಯವರ ಸಭೆ.<br>➢ ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ, ಭೂಮಿ & ಯುಪಿಓಆರ್) ಪ್ರಭಾರ ಕಾರ್ಯನಿರ್ವಹಣೆ. |
| 2. | ತೆಗೆದುಕೊಳ್ಳಲಾದ ಸುಧಾರಣಾ ಕ್ರಮಗಳು | ಫೆಬ್ರವರಿ 2020ನೇ ಮಾಹೆಯಲ್ಲಿ ಕಡತ ವಿಲೇವಾರಿಯಲ್ಲಿ ಒಟ್ಟಾರೆ ಶೇ.90.41ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ **(ಅನುಬಂಧ-1)**. |
| 3. | ಆಯೋಜಿಸಲಾದ ಮುಖ್ಯ ಸಮ್ಮೇಳನ/ಕಾರ್ಯಾಗಾರ/ ವಿಚಾರ ಗೋಷ್ಠಿಗಳು | ➢ **ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಪ್ರವಾಸಿ ಟ್ಯಾಕ್ಸಿ ವಿತರಣೆ ಕಾರ್ಯಕ್ರಮದಲ್ಲಿ ಭಾಗವಹಿಸಲಾಯಿತು.** |
| 4. | ಪ್ರವಾಸದ ಮೇಲಿದ್ದ ದಿನಗಳು (ಅ)ಜಿಲ್ಲೆಗಳು (ಆ)ರಾಜ್ಯದಿಂದ ಹೊರಗೆ | ➢ ದಿನಾಂಕ 04-02-2020ರಿಂದ 06-02-2020ರವರೆಗೆ ಯಾದಗಿರಿ ಹಾಗೂ ರಾಯಚೂರು ಜಿಲ್ಲೆಗಳಿಗೆ ಭೇಟಿ ನೀಡಿ ಯಾದಗಿರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಜಿಲ್ಲಾ ಮಟ್ಟದ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆ ಹಾಗೂ ರಾಯಚೂರಿನಲ್ಲಿ Revision of Electrol Roll ಕುರಿತು ಸ್ಥಳ ಪರಿಶೀಲನೆ. |
| 5. | ಫೆಬ್ರವರಿ ತಿಂಗಳಿನಲ್ಲಿ ಸಾಧಿಸಿದ ಮುಖ್ಯ ಆರ್ಥಿಕ ಮತ್ತು ಭೌತಿಕ ಪ್ರಗತಿ | ಫೆಬ್ರವರಿ 2020ನೇ ಮಾಹೆಯಲ್ಲಿ ಪ್ರವಾಸೋದ್ಯಮ ಇಲಾಖೆಯಲ್ಲಿ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಬಿಡುಗಡೆಗೊಳಿಸಿರುವ ಅನುದಾನದ ವಿವರಗಳನ್ನು **ಅನುಬಂಧ-2**ರಲ್ಲಿ ಲಗತ್ತಿಸಿದೆ. |

ಆದರಗಳೊಂದಿಗೆ,

ತಮ್ಮ ವಿಶ್ವಾಸಿ,

(ಟಿ.ಕೆ.ಅನಿಲ್ ಕುಮಾರ್)

**ಶ್ರೀ ಟಿ.ಎಂ. ವಿಜಯ ಭಾಸ್ಕರ್., ಭಾ.ಆ.ಸೇ.**
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು,
ವಿಧಾನ ಸೌಧ,
ಬೆಂಗಳೂರು.

ಅನುಬಂಧ-1.

# FILES DISPOSAL REPORT

Period : 01/02/2020 to 29/02/2020

Department : TOURISM SEC

Nature : P/E

| S.No. | Section(s) | Files Created | Files Received | Files Disposed (Closed/Parked/Forwarded) | % of Disposal | Average Response Time (Day hh:mm:ss) |
|---|---|---|---|---|---|---|
| 1 | O/o DEPUTY SECRETARY-TOR | 0 | 95 | 95 | 100 | 0 days 15:01:28 |
| 2 | O/o UNDER SECRETARY-TOR | 0 | 413 | 364 | 88.14 | 2 days 09:47:44 |
| 3 | SECTION-TOR | 138 | 1169 | 1017 | 77.81 | 1 days 23:07:53 |
| 4 | O/o Principal Secretary | 0 | 146 | 132 | 90.41 | 2 days 03:01:24 |

- *% of Disposal= Files Disposed / (Files Received + Files Created) *100*
- *Average Response Time= Time Taken for(Closed/Parked/Forwarded) / Files Disposed*

Generated from eOffice by NASEEM BI, Date - Mar 3, 2020 11:40 AM

ಅನುಬಂಧ-2

### 3452-5452-TOURISM BUDGET GRANT & EXPD FOR THE YEAR 2019-20 as on 29.02.2020. (Rs in Crores)

| Sl. No | 3452-TOURISM | Budget 2019-20 | Revised Estimate 2019-20 | Total 1, 2, 3, 4th Quarter Gr Release | Expd at end of Jan-2020 | Expd at end of FEB-2020 | Bills in Treasury | Bills in accts | Upload | TOTAL EXPD (6+10) | RE Budget Balance (4-11) | 4th Quarter Release Balance (5-11) | % Revised Budget (11/4) | % Release grant (11/5) |
|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |
| 1 | 3452-01-101-0-04-200-Maintenance | 11.47 | 5.74 | 5.73 | | 2.87 | | 2.86 | | 5.73 | 0.01 | 0.00 | 100% | 100% |
| 2 | 3452-80-001-0-01 -Salary & other expd | 4.35 | 4.54 | 4.36 | 3.16 | 0.14 | | | | 3.30 | 1.24 | 1.06 | 73% | 76% |
| 3 | 3452-80-104-0-01 -Salary & other expd | 2.26 | 2.26 | 2.22 | 1.51 | 0.03 | | | | 1.54 | 0.72 | 0.68 | 68% | 69% |
| | 3452-80-104-0-01-051-General Expenses | 21.62 | 13.62 | 13.62 | 6.11 | 0.57 | 0.53 | 4.38 | | 11.59 | 2.03 | 2.03 | 85% | 85% |
| | 3452-80-104-0-01-059-Other Expenses | 35.26 | 33.81 | 33.81 | 17.99 | 2.55 | 5.12 | | 8.15 | 33.81 | 0.00 | 0.00 | 100% | 100% |
| | 3452-80-104-0-01-422-SCSP | 8.99 | 6.74 | 6.74 | 6.74 | | | | | 6.74 | 0.00 | 0.00 | 100% | 100% |
| | 3452-80-104-0-01-423-TSP | 3.75 | 2.81 | 2.81 | 2.81 | | | | | 2.81 | 0.00 | 0.00 | 100% | 100% |
| 4 | 3452-80-104-0-04-059-Other Expenses | 12.00 | 12.00 | 12.00 | 9.00 | 1.75 | | | | 10.75 | 1.25 | 1.25 | 90% | 90% |
| | 3452-80-104-0-04-106 Subsidies | 18.00 | 18.00 | 18.00 | 9.55 | 0.10 | | | 3.55 | 13.20 | 4.80 | 4.80 | 73% | 73% |
| A | 3452-Revenue Total | 117.70 | 99.52 | 99.29 | 56.87 | 8.01 | 5.65 | 7.24 | 11.70 | 89.47 | 10.05 | 9.82 | 90% | 90% |
| 5 | 5452-01-800-0-10-436-NABARD ROAD WORKS | 38.39 | 10.53 | 9.60 | 5.58 | 0.68 | | 0.16 | | 6.42 | 4.11 | 3.18 | 61% | 67% |
| 6 | 5452-01-800-0-14-059-Other Expenses | 7.00 | 0.00 | 0.00 | 0.00 | | | | | 0.00 | 0.00 | 0.00 | 0% | 0% |
| | 5452-01-800-0-14-132-Capital Expenses | 224.44 | 224.44 | 168.33 | 99.91 | 15.51 | 1.84 | 2.30 | 9.31 | 128.87 | 95.57 | 39.46 | 57% | 77% |
| 7 | 5452-01-800-0-16-059-Other Expenses Mysuru Haat | 10.00 | 2.50 | 2.50 | 2.50 | | | | | 2.50 | 0.00 | 0.00 | 100% | 100% |
| 8 | 5452-03-101-0-05-132-Capital Outaly KTVG | 100.00 | 50.00 | 8.51 | 9.91 | | 0.13 | 7.50 | | 17.54 | 32.46 | 32.46 | 35% | 35% |
| | 5452-01-101-0-05-132-Capital Outaly KTVG | | | 41.49 | | | | | | | | | | |
| B | 5452-Capital Total | 379.83 | 287.47 | 230.43 | 117.90 | 16.19 | 1.97 | 9.96 | 9.31 | 155.33 | 132.14 | 75.10 | 54% | 67% |
| | A + B = TOTAL | 497.53 | 386.99 | 329.72 | 174.77 | 24.20 | 7.62 | 17.20 | 21.01 | 244.80 | 142.19 | 84.92 | 63% | 74% |

**ಡಾ॥ ಎನ್.ನಾಗಾಂಬಿಕಾದೇವಿ, ಭಾ.ಆ.ಸೇ., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 28.02.2020 ರಂದು ಬೆಳಿಗ್ಗೆ 11:30 ಗಂಟೆಗೆ ಜಿಲ್ಲಾಧಿಕಾರಿಗಳ ಸಭಾಂಗಣ, ಜಿಲ್ಲಾಡಳಿತ ಭವನದಲ್ಲಿ ನಡೆಸಲಾದ ಚಿಕ್ಕಬಳ್ಳಾಪುರ ಜಿಲ್ಲೆಯ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ನಡಾವಳಿಗಳು.**

********

**ಅಧ್ಯಕ್ಷತೆ: ಡಾ॥ ಎನ್.ನಾಗಾಂಬಿಕಾದೇವಿ, ಭಾ.ಆ.ಸೇ.,**
**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,**
**ಸಹಕಾರ ಇಲಾಖೆ ಹಾಗೂ ಚಿಕ್ಕಬಳ್ಳಾಪುರ**
**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.**

**ಸಭೆಯಲ್ಲಿ ಹಾಜರಿದ್ದವರು :**

1) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಜಿಲ್ಲೆ.
2) ಅಪರ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ.
3) ಉಪಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಜಿಲ್ಲೆ.
4) ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ.
5) ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ.
6) ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ.
7) ಜಿಲ್ಲಾ ಅಧಿಕಾರಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ.
8) ಹಿರಿಯ ಸಹಾಯಕ ನಿರ್ದೇಶಕರು, ವಾರ್ತ ಮತ್ತು ಪ್ರಚಾರ ಇಲಾಖೆ, ಚಿಕ್ಕಬಳ್ಳಾಪುರ.
9) ಉಪನಿರ್ದೇಶಕರು, ರೇಷ್ಮೆ ಇಲಾಖೆ, ಚಿಕ್ಕಬಳ್ಳಾಪುರ.
10) ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ.
11) ಉಪನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಚಿಕ್ಕಬಳ್ಳಾಪುರ.
12) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ.
13) ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಚಿಕ್ಕಬಳ್ಳಾಪುರ.
14) ಕಾರ್ಯಪಾಲಕ ಅಭಿಯಂತರರು, ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕಬಳ್ಳಾಪುರ.
15) ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳು ಚಿಕ್ಕಬಳ್ಳಾಪುರ ಜಿಲ್ಲೆ.
16) ಜಿಲ್ಲೆಯ ಎಲ್ಲಾ ಕಾರ್ಯನಿರ್ವಾಹಣಾಧಿಕಾರಿಗಳು, ಚಿಕ್ಕಬಳ್ಳಾಪುರ.
17) ಇತರೆ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಡಾ॥ ಎನ್.ನಾಗಾಂಬಿಕಾ ದೇವಿ, ಭಾ.ಆ.ಸೇ., ರವರಿಗೆ ಅಪರ ಜಿಲ್ಲಾಧಿಕಾರಿಗಳು ಸ್ವಾಗತ ಕೋರಿ ಜಿಲ್ಲೆಯ ಎಲ್ಲಾ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ಕೋರಿದರು. ನಂತರ ಸಭೆಯನ್ನು ಪ್ರಾರಂಭಿಸಿ ಈ ಕೆಳಕಂಡ ಇಲಾಖೆಗಳ ಬಗ್ಗೆ ಪ್ರಗತಿ ಪರಿಶೀಲನೆಯನ್ನು ನಡೆಸಲಾಯಿತು.

**ಇಲಾಖಾವಾರು ಪ್ರಗತಿ ಪರಿಶೀಲನೆ:-**

**1) ಕುಡಿಯುವ ನೀರು:-**

ಯೋಜನಾ ನಿರ್ದೇಶಕರು ಮಾತನಾಡಿ, ನಗರ ಪ್ರದೇಶದ ವ್ಯಾಪ್ತಿಗೆ ಸಂಬಂಧಿಸಿದಂತೆ, ಚಿಂತಾಮಣಿ ನಗರ ಸ್ಥಳೀಯ ಸಂಸ್ಥೆಯಲ್ಲಿ 20 ವಾರ್ಡ್‌ಗಳಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿರುತ್ತದೆ. ಉಳಿದ ನಗರಸಭೆಗಳಲ್ಲಿ ಯಾವುದೇ ತೊಂದರೆ ಇರುವುದಿಲ್ಲ. ಮುಂದಿನ ದಿನಗಳಲ್ಲಿ ಗೌರಿಬಿದನೂರು ಮತ್ತು ಬಾಗೇಪಲ್ಲಿ ನಗರಗಳಲ್ಲಿ ನೀರಿನ ಅಭಾವ ಕಂಡುಬರುವ ಸಂಭವವಿರುತ್ತದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶೀಗಳು, ಮಾತನಾಡಿ, ಇಸ್ರೋ ಕಂಪನಿಯಿಂದ ವೈಜ್ಞಾನಿಕವಾಗಿ ತಯಾರಿಸಿರುವ ನಕ್ಷೆಯನ್ನಾಧರಿಸಿ ನೀರು ಲಭ್ಯ ಇರುವ ಸ್ಥಳದಲ್ಲಿ ಬೋರ್‌ವೆಲ್ ಕೊರೆಯಲು ಹಾಗೂ ನಗರ ಸಂಸ್ಥೆಯಿಂದ 01 ಕಿ.ಮೀ. ದೂರವಾದರು ನೀರು ಇರುವ ಕಡೆ ಕೊಳವೆಬಾವಿ ಕೊರೆಸಲು ಕ್ರಮವಹಿಸುವಂತೆ ಸೂಚಿಸಿದರು.

- ಹಿಂದಿನ ಸಭೆಯಲ್ಲಿ ನಿರ್ದೇಶಿಸಿರುವಂತೆ, ಚಿಕ್ಕಬಳ್ಳಾಪುರ ಜಿಲ್ಲೆಯಿಂದ ಅಧಿಕಾರಿಗಳ ಒಂದು ತಂಡವನ್ನು ಗದಗ ಜಿಲ್ಲೆಗೆ ಭೇಟಿ ಮಾಡಿ ಅಲ್ಲಿ ಅಭಿವೃದ್ಧಿ ಪಡಿಸಿರುವ ಸ್ಮಶಾನ ವಿಕ್ಷಣೆ ಮಾಡಿಸಲಾಗಿದೆ. ಅದರಂತೆ ಸ್ಥಳೀಯ ಸಂಸ್ಥೆಗಳಲ್ಲಿ ಸ್ಮಶಾನ ಅಭೀವೃದ್ಧಿ ಪಡಿಸಲು 50 ಲಕ್ಷದ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿಲಾಗಿದೆ ಎಂದು ತಿಳಿಸಿದರು. ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲುವಂತೆ ಸೂಚಿಸಿದರು.

2) <u>ಕೃಷಿ ಇಲಾಖೆ :-</u>

ಜಂಟಿ ನಿರ್ದೇಶಕರು, ಕೃಷಿ ಇಲಾಖೆ ರವರು ಮಾತನಾಡಿ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಜನವರಿ ಫೆಬ್ರವರಿ ಮಾಹೆಯಲ್ಲಿ ಮಳೆಯಾಗಿರುವುದಿಲ್ಲ. ಇದರಿಂದ –92 ರಷ್ಟು ಮಳೆ ಕೊರತೆಯಾಗಿದೆ. ಹಿಂಗಾರು ಹಂಗಾಮಿನಲ್ಲಿ ನೀರಾವರಿ ಪ್ರದೇಶದಲ್ಲಿ ರಾಗಿ, ಹೈ.ಮು.ಜೋಳ, ಹುರಳಿ ಬೆಳೆಗಳು ಬಿತ್ತನೆಯಾಗಿರುತ್ತದೆ ಎಂದು ತಿಳಿಸಿದರು.

- ಬೆಳೆ ಸಮೀಕ್ಷೆ ಕಾರ್ಯವು ಜಿಲ್ಲೆಯಲ್ಲಿ 100% ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ ಹಾಗೂ ಹಿಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಕಾರ್ಯವು 92% ರಷ್ಟು ಸಾಧಿಸಲಾಗಿದೆ ಎಂದು ತಿಳಿಸಿದರು. ಬಾಕಿ ಇರುವ 8% ರಷ್ಟನ್ನು ದಿನಾಂಕ:29/02/2020 ರೊಳಗಾಗಿ ಬೆಳೆ ಸಮೀಕ್ಷೆಯನ್ನು ಮುಗಿಸಲು ಸರ್ಕಾರವು ನಿಗಧಿಪಡಿಸಿರುವುದರಿಂದ 100% ರಷ್ಟು ಪ್ರಗತಿ ಸಾಧಿಸಲು ಸೂಚಿಸಿದರು.
- 2018–19ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ವಿಮೆಯನ್ನು ಒಟ್ಟು 22514 ರೈತರಿಗೆ ಒಟ್ಟು 3762.77 ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ಈ ಪೈಕಿ ಬಾಕಿ 18884 ರೈತರಿಗೆ ರೂ, 3114.51 ಲಕ್ಷಗಳು ವಿಮೆ ಮೊತ್ತವನ್ನು ಪಡೆದಿರುತ್ತಾರೆ. 2019–20ನೇ ಸಾಲಿನಲ್ಲಿ ಒಟ್ಟು 10449 ಫಲಾನುಭವಿಗಳು ನೊಂದಣಿಯಾಗಿರುವುದಾಗಿ ತಿಳಿಸಿದರು.
- ಜಿಲ್ಲಾ ಉಸ್ತವಾರಿ ಕಾರ್ಯದರ್ಶಿಗಳು ಮಾತನಾಡಿ, ಬೆಳೆ ಸಮೀಕ್ಷೆಯಲ್ಲಿ ಲೋಪದೋಷಗಳು ಉಂಟಾಗುತ್ತಿದ್ದು, ರೈತರು ಸರ್ಕಾರದ ಯೋಜನೆಗಳ ಸೌಲಭ್ಯವನ್ನು ಪಡೆದುಕೊಳ್ಳಲು ತೊಂದರೆಗಳು ಆಗುತ್ತಿರುವುದರಿಂದ ರೈತರು ಆಕ್ಷೇಪಣೆಗಳನ್ನು ಮಾಡುತ್ತಿರುತ್ತಾರೆ. ಆದ್ದರಿಂದ ರೈತರು ಬೆಳೆದ ಬೆಳೆಯನ್ನು ನೇರವಾಗಿ ಇ–ಕ್ರಾಂಪ್ ತಂತ್ರಾಂಶದಲ್ಲಿ ನೇರವಾಗಿ ಅಪ್‌ಲೋಡ್ ಮಾಡುವಂತೆ ರೈತರಿಗೆ ಅರಿವು ಮೂಡಿಸಿ ರೈತರು ಆಪ್‌ಲೋಡ್ ಮಾಡಲು ಕ್ರಮವಹಿಸಲು ಸೂಚಿಸಿದರು.
- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ಕೃಷಿ ಮೇಳ–2020 ಅದ್ಭುತವಾಗಿ ಮೂಡಿಬಂದಿದ್ದು, ಯಶಸ್ವಿಯಾಗಿ ಕಾರ್ಯಕ್ರಮವನ್ನು ನಡೆಸಿಕೊಟ್ಟ ಜಿಲ್ಲಾಡಳಿತಕ್ಕೂ ಮತ್ತು ಅಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು.
- ರೇಷ್ಮೆ ಉತ್ಪಾದನೆಯಿಂದ ಕೈಮಗ್ಗ ಮತ್ತು ಕರಕುಶಲ ಸೊಸೈಟಿ ಮೂಲಕ ವಸ್ತುಗಳ ಉತ್ಪಾದನೆ ಮಾಡಿ ಆನ್‌ಲೈನ್ ಮಾರ್ಕೆಟಿಂಗ್ ಮಾಡಲಾಗುತ್ತಿರುತ್ತದೆ ಎಂದು ಉಪನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ರವರು ತಿಳಿಸಿದರು. ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ ಸಹಕಾರ ಸಂಘಗಳ ಅಧಿಕಾರಿಯು ಸೊಸೈಟಿಗಳಿಗೆ ಭೇಟಿ ಮಾಡಿ ಸರ್ಕಾರದಿಂದ ದೊರೆಯುವ ಸೌಲಭ್ಯವನ್ನು ಮತ್ತು ಪ್ರೋತ್ಸಾಹ ನೀಡಿ ಉತ್ಪಾದನೆಯನ್ನು ದ್ವಿಗುಣ ಮಾಡುವಂತೆ ಕ್ರಮವಹಿಸಲು ಹಾಗೂ ದಾಖಲೆಗಳನ್ನು ಸಿದ್ಧಪಡಿಸಲು ಮತ್ತು ವರದಿಯನ್ನು ಸಲ್ಲಿಸಲು ಸೂಚಿಸಿದರು.

* ಕೈಮಗ್ಗ & ಕರಕುಶಲ ಉತ್ಪಾದನೆ ಮಾಡುತಿರುವ ಸೊಸೈಟಿಗೆ ನಿವೇಶನ ಮಂಜೂರು ಮಾಡುವಂತೆ ಉಪನಿರ್ದೇಶಕರು ಕೋರಿದರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಚಿಂತಾಮಣಿ ನಗರದಲ್ಲಿ "ಸಿಎ" ಸೈಟನ್ನು ಮಂಜೂರು ಮಾಡಲು ಆಯುಕ್ತರು, ನಗರಸಭೆ ಚಿಂತಾಮಣಿ ರವರಿಗೆ ಸೂಚಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಮತ್ತು ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಸಹಕಾರ ಸಂಘಗಳ ಉಪನಿಬಂಧಕರು, ಸಹಕಾರ ಇಲಾಖೆ, ಆಯುಕ್ತರು, ನಗರಸಭೆ ಚಿಂತಾಮಣಿ)**

3) **ತೋಟಗಾರಿಕಾ ಇಲಾಖೆ:-**

ತೋಟಾಗಾರಿಕೆ ಇಲಾಖೆ ಅಧಿಕಾರಿ ಚಿಕ್ಕಬಳ್ಳಾಪುರ ರವರು ಮಾತನಾಡಿ, ತೋಟಾಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ, ಯೋಜನೆಗಳಾದ ಪಿ.ಎಮ್.ಕೆ.ಎಸ್.ವೈ (ಸೂಕ್ಷ್ಮ ನೀರಾವರಿ), ರಾಷ್ಟೀಯ ತೋಟಾಗಾರಿಕೆ ಮಿಷನ್, ರಾಷ್ಟೀಯ ಕೃಷಿ ವಿಕಾಸ ಯೋಜನೆ, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ, ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಶೇ 95% ರಷ್ಟು ಪ್ರಗತಿ ಸಾಧಿಸಲಾಗಿದೆಯೆಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ತೋಟಗಾರಿಕೆ ಬೆಳೆಗಳ ವಿಸ್ತೀರ್ಣವನ್ನು ವಿಸ್ತರಿಸಲು ಹಾಗೂ ಬೆಳೆದ ಬೆಳೆಗಳಿಗೆ ಉತ್ತಮ ಮಾರುಕಟ್ಟೆಯ ಸೌಲಭ್ಯವನ್ನು ಕಲ್ಪಿಸಲು ಕ್ರಮವಹಿಸಲು ಸೂಚಿಸಲಾಯಿತು.

**(ಕ್ರಮ: ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ, ಚಿಕ್ಕಬಳ್ಳಾಪುರ)**

4) **ರೇಷ್ಮೆ ಇಲಾಖೆ:-**

ಉಪನಿರ್ದೇಶಕರು, ರೇಷ್ಮೆ ಇಲಾಖೆ, ಚಿಕ್ಕಬಳ್ಳಾಪುರ ರವರು ಮಾತನಾಡಿ, ರೇಷ್ಮೆ ಬೆಳೆಯು ಉತ್ತಮ ಇಳುವರಿ ಇರುವುದಾಗಿ ಹಾಗೂ ರೇಷ್ಮೆ ಇಲಾಖೆಯ ವಿವಿಧ ಕಾರ್ಯಕ್ರಮಗಳಲ್ಲಿ ಶೇ96%ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ರೇಷ್ಮೆ ಬೆಳೆಯಿಂದ ಉತ್ಪಾದನೆ ಮಾಡುವ ವಸ್ತುಗಳನ್ನು ಉತ್ತಮ ಗುಣಮಟ್ಟದಿಂದ ಕೂಡಿರುವಂತೆ ಹಾಗೂ ಉತ್ಪಾದನೆ ಮಾಡಿದ ವಸ್ತುಗಳನ್ನು ಪ್ರವಾಸಿ ತಾಣಗಳಲ್ಲಿ, ವಿಮಾನ ನಿಲ್ದಾಣಗಳಲ್ಲಿ ಮಳಿಗೆಗಳನ್ನು ತೆರೆದು ಮಾರಾಟ ಮಾಡಿ ಆದಾಯವನ್ನು ಹೆಚ್ಚಿಸುವಂತೆ ಕ್ರಮವಹಿಸಲು ಸೂಚಿಸಿದರು.

* Skill Development ರವರ ಸಹಯೋಗದೊಂದಿಗೆ ಸ್ಥಳೀಯರಿಗೆ ರೇಷ್ಮೆ ಬೆಳೆಯಿಂದ ಉತ್ಪಾದನೆ ಮಾಡುವ ವಸ್ತುಗಳ ಬಗ್ಗೆ ತರಬೇತಿಯನ್ನು ನೀಡಿ ಆದಾಯವನ್ನು ಹೆಚ್ಚಿಸುವ ಹಾಗೂ ಸ್ಥಳಿಯರಿಗೆ ಕೆಲಸವನ್ನು ಸೃಷ್ಟಿಸುವ ಕಾರ್ಯವನ್ನು ಕೈಗೊಳ್ಳಲು ಸೂಚಿಸಿದರು.
* ಸರ್ಕಾರಿ ಕಾರ್ಯಕ್ರಮಗಳಲ್ಲಿ ಪ್ಲಾಸ್ಟಿಕ್ ಬೊಕ್ಕೆಗಳನ್ನು ಬಳಸುವ ಬದಲು ರೇಷ್ಮೆಯಿಂದ ತಯಾರಿಸರುವ ವಸ್ತುಗಳನ್ನು ಬಳಸಲು ಹಾಗೂ ರಾಜ್ಯ ಮಟ್ಟದ ಕಾರ್ಯಕ್ರಮಗಳಿಗೆ ಬಳಸುವಂತೆ ಕ್ರಮ ಕೈಗೊಳ್ಳಲು ಕೋರಿದೆ.

**(ಕ್ರಮ: ರೇಷ್ಮೆ ಉಪನಿರ್ದೇಶಕರು, ಚಿಕ್ಕಬಳ್ಳಾಪುರ)**

5) **ಕುಡಿಯುವ ನೀರಿನ ಸರಬರಾಜು ಕುರಿತು:-**

ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಚಿಕ್ಕಬಳ್ಳಾಪುರ ರವರು ಮಾತನಾಡಿ, ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು 73 ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದ್ದು, 20 ಗ್ರಾಮಗಳಲ್ಲಿ ಟ್ಯಾಂಕರ್‌ಗಳ ಮೂಲಕ ಮತ್ತು 53 ಗ್ರಾಮಗಳಲ್ಲಿ ಖಾಸಗಿ ಕೊಳವೆಬಾವಿಗಳ ಮುಖಾಂತರ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆಯೆಂದು ತಿಳಿಸಿದರು.

- ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲು ಮತ್ತು ಶುದ್ಧ ನೀರಿನ ಘಟಕಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.
- ಕುಡಿಯುವ ನೀರು ಮುಂದಿನ ದಿನಗಳಲ್ಲಿ ತೊಂದರೆಯಾಗದಂತೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಲು ಮತ್ತು ನೀರು ಸರಬರಾಜು ಮಾಡಿದವರಿಗೆ ಬಿಲ್‌ನ್ನು ಬಾಕಿ ಉಳಿಸಿಕೊಳ್ಳದೇ ಪಾವತಿ ಮಾಡಲು ಕ್ರಮವಹಿಸಲು ಸೂಚಿಸಿದರು.
- ಜಿಲ್ಲೆಯ ಎಲ್ಲಾ ಶಾಲೆಗಳಿಗೆ, ವಸತಿ ನಿಲಯಗಳ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಲು ಸೂಚಿಸಲಾಯಿತು.

**(ಕ್ರಮ: ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ/ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು, ಜಿಲ್ಲಾ ಪಂಚಾಯಿತಿ/ ಜಿಲ್ಲಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ/ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಜಿಲ್ಲೆಯ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು)**

## 6) ನರೇಗಾ ಯೋಜನೆ:-

ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಮಾತನಾಡಿ, ಪ್ರಾಜೆಕ್ಟ್-100 ಎಂಬ ಕಾರ್ಯಕ್ರಮದಡಿ 1077 ಕಾಮಗಾರಿಗಳನ್ನು ಅನುಮೋದಿಸಿದ್ದು, 773 ಕಾಮಗಾರಿಗಳು ಪ್ರಗತಿಯಲ್ಲಿವುದರಿಂದ ಮಾನವ ದಿನಗಳು ಸೃಜನೆಯಾಗಿರುತ್ತದೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ 2019-20 ನೇ ಸಾಲಿನಲ್ಲಿ ಶೇ. 110.40 ರಷ್ಟು ಗುರಿಗಿಂತ ಹೆಚ್ಚಿನ ಪ್ರಗತಿಯನ್ನು ಸಾಧಿಸಲಾಗಿದೆಯೆಂದು ತಿಳಿಸಿದರು.

ಸ್ವಚ್ಛ ಭಾರತ್ ಮಿಷನ್ ಅಡಿ ಸಾಲಿಡ್ ವೆಸ್ಟ್ ಮ್ಯಾನೇಜ್‌ಮೆಂಟ್‌ಗಾಗಿ ಒಟ್ಟು 157 ಗ್ರಾಮ ಪಂಚಾಯಿತಿಗಳಲ್ಲಿ 82 ಅನುಮೋದನೆಯಾಗಿದ್ದು, 75 ಗ್ರಾಮಪಂಚಾಯಿತಿಗಳಲ್ಲಿ ಬಾಕಿ ಉಳಿದಿರುತ್ತದೆ.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಉಳಿದಂತ ಎಲ್ಲಾ ಕಡೆ ಸಾಲಿಡ್ ವೆಸ್ಟ್ ಮ್ಯಾನೇಜ್‌ಮೆಂಟ್ ಕಾರ್ಯವನ್ನು ಪ್ರಾರಂಭಿಸಬೇಕೆಂದು ತಿಳಿಸಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ)**

## 7) ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ:-

ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆ ಇಲಾಖೆ, ರವರು ಮಾತನಾಡಿ, ಮುಂಗಾರು ಹಂಗಾಮಿನಲ್ಲಿ ಉತ್ತಮ ರಾಗಿ ಬೆಳೆ ಬೆಳೆದಿರುವುದರಿಂದ ರೈತರ ಬಳಿ ಲಭ್ಯವಿರುವ ಮೇವು ಮುಂದಿನ 30 ವಾರಗಳ ಅವಧಿಗೆ ಸಾಕಾಗುತ್ತದೆ ಎಂದು ತಿಳಿಸಿದರು.

- ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಜಾನುವಾರಿಗಳಿಗೆ ಮೇವಿನ ಕೊರತೆಯಾಗದಂತೆ ಮುಂಜಾಗ್ರತೆ ಕ್ರಮ ಕೈಗೊಳ್ಳಲು ಸೂಚಿಸಿದರು.
- ಹಾಲು ಉತ್ಪಾದನೆಯನ್ನು ಹೆಚ್ಚಿಸಿ ರೈತರ ಆದಾಯವನ್ನು ದ್ವಿಗುಣ ಮಾಡುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಚಿಕ್ಕಬಳ್ಳಾಪುರ)**

## 8) ಕಂದಾಯ ಇಲಾಖೆ

- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬಾಕಿಯಿರುವ ಪಹಣಿ ಕಾಲಂ 3 & 9ಕ್ಕೂ ತಾಳೆಯಿಲ್ಲದ ಒಟ್ಟು 4104 ಪ್ರಕರಣಗಳಿದ್ದು, ಸದರಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ವಿಶೇಷ ಕಾರ್ಯಗಾರವನ್ನು ಹಮ್ಮಿಕೊಳ್ಳುವುದರ ಮೂಲಕ ಎಲ್ಲಾ ತಹಶೀಲ್ದಾರ್‌ಗಳು ತುರ್ತಾಗಿ ವಿಲೇವಾರಿಗೊಳಿಸಲು ಸೂಚಿಸಲಾಯಿತು.
- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 94ಸಿ ಯೋಜನೆಯಡಿಯಲ್ಲಿ ಒಟ್ಟು 8537 ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ 8218 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, ಬಾಕಿ 313 ಅರ್ಜಿಗಳು ಇರುತ್ತವೆ. ಬಾಕಿ ಉಳಿಸಿಕೊಂಡಿರುವ ಚಿಕ್ಕಬಳ್ಳಾಪುರ, ಗೌರಿಬಿದನೂರು, ಶಿಡ್ಲಘಟ್ಟ ತಾಲ್ಲೂಕು ತಹಶೀಲ್ದಾರ್ ರವರುಗಳು ಒಂದು ವಾರದಲ್ಲಿ ವಿಲೇವಾರಿ ಮಾಡಿ ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ವಿತರಣೆ ಮಾಡಲು ಕ್ರಮ ಕೈಗೊಳ್ಳಲು ಸೂಚಿಸಿದರು.

- ಜಿಲ್ಲೆಯಲ್ಲಿ 18 ಗ್ರಾಮಗಳಿಗೆ ರುದ್ರಭೂಮಿ ಸೌಲಭ್ಯವಿಲ್ಲದಿರುವುದು ಕಂಡು ಬಂದಿದ್ದು, 09 ಗ್ರಾಮಗಳಿಗೆ ಗುರುತಿಸಿರುವ ಜಮೀನುಗಳು ಗುಂಡುತೋಪು ಆಗಿರುವ ಕಾರಣ ಮಂಜೂರಾತಿಗಾಗಿ ಸರ್ಕಾರದ ಮಟ್ಟದಲ್ಲಿ ಬಾಕಿ ಇರುತ್ತದೆ. 05 ಗ್ರಾಮಗಳಿಗೆ ಕ.ಭೂ.ಅಧಿನಿಯಮ 1964ಕಲಂ 68(1)ರಡಿಯಲ್ಲಿ ಪ್ರಕ್ರಿಯೆಗಳನ್ನು ನಡೆಸಲು ಚಾಲ್ತಿಯಲ್ಲಿರುತ್ತದೆ. 04 ಗ್ರಾಮಗಳಿಗೆ ತಹಶೀಲ್ದಾರ್ ರವರಲ್ಲಿ ಬಾಕಿ ಇದ್ದು, ಎಲ್ಲಾ ಗ್ರಾಮಗಳಲ್ಲಿ ರುದ್ರಭೂಮಿ ಸೌಲಭ್ಯವನ್ನು ಒದಗಿಸಿ, ಅಭಿವೃದ್ಧಿಪಡಿಸಲು ಸೂಚಿಸಿದರು.
- ಸಾಮಾಜಿಕ ಭದ್ರತಾ ಯೋಜನೆಯಡಿಯಲ್ಲಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳಿಗೆ ಆಧಾರ್ ಜೋಡಣೆಯಲ್ಲಿ ಶೇ90% ರಷ್ಟು ಪ್ರಗತಿ ಸಾಧಿಸಿದ್ದು, ಬಾಕಿ ಇರುವ 10% ರಷ್ಟು ಪೂರ್ಣ ಪ್ರಮಾಣದಲ್ಲಿ ಆಧಾರ್ ಜೋಡಣೆ ಮಾಡಿ ಶೇ 100%ರಷ್ಟು ಸಾಧಿಸಲು ಸೂಚಿಸಿದರು.
- ಹಿಂದಿನ ಸಭೆಯಲ್ಲಿ ನಿರ್ದೇಶಿಸಿರುವಂತೆ, ಫಲಾನುಭವಿಗಳಿಗೆ ಪಿಂಚಣಿ ಸರಿಯಾದ ರೀತಿಯಲ್ಲಿ ಫಲಾನುಭವಿಗಳಿಗೆ ತಲುಪುತ್ತಿರುವ ಬಗ್ಗೆ ಪರಿಶೀಲನೆ ಮಾಡಲು ತಿಳಿಸಿರುವಂತೆ ಪರಿಶೀಲನೆ ಮಾಡಲಾಗಿ ನಮ್ಮ ಜಿಲ್ಲೆಯಲ್ಲಿ ಫಲಾನುಭವಿಗಳಿಗೆ ನೇರವಾಗಿ ಅವರ ಬ್ಯಾಂಕ್ ಖಾತೆಗೆ ಜಮಾ ಆಗುತ್ತದೆ. ಎಂದು ತಿಳಿಸಿದರು.
- ಸಾಮಾಜಿಕ ಭದ್ರತಾ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲಪಿಸುವ ಕ್ರಮವನ್ನು ಕೈಗೊಳ್ಳಲು ಸೂಚಿಸಿದರು.
- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪೈಕಿ ಪಹಣಿಗಳನ್ನು ಒಟ್ಟುಗೂಡಿಸುವಲ್ಲಿ ಒಟ್ಟು 12610 ಪ್ರಕರಣಗಳು ಬಾಕಿ ಇದ್ದು, ಈ ಪ್ರಕರಣಗಳನ್ನು ತುರ್ತಾಗಿ ವಿಲೇವಾರಿಗೊಳಿಸಲು ಕ್ರಮ ಕೈಗೊಳ್ಳಲು ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ರವರಿಗೆ ತಿಳಿಸಿದರು.
- ಅಪರ ಜಿಲ್ಲಾಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ಒತ್ತುವರಿ ತೆರವುಗೊಳಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.
- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನೀಲಗಿರಿ ಮರಗಳನ್ನು ತೆರವುಗೊಳಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಈಗಾಗಲೇ ಖಾಸಗಿ ಜಮೀನಿನಲ;ಲಿ 732-29 ಎಕರೆ ಜಮೀನಿನಲ್ಲಿ ಮರಗಳನ್ನು ತೆರವುಗೊಳಿಸಲಾಗಿದೆ. ಸರ್ಕಾರಿ ಜಮೀನಿನಲ್ಲಿರುವ ಮರಗಳನ್ನುತೆರವುಗೊಳಿಸಲು ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ ಎಂದು ತಿಳಿಸಿದರು. ಈ ಬಗ್ಗೆ ತುರ್ತಾಗಿ ನೀಲಗಿರಿ ಮರಗಳನ್ನು ತೆರವುಗೊಳಿಸಲು ಸೂಚಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಹಾಗೂ ಜಿಲ್ಲೆಯ ಎಲ್ಲಾ ತಹಶೀಲ್ದಾರ್, ಚಿಕ್ಕಬಳ್ಳಾಪುರ ಜಿಲ್ಲೆ.)**

**9) <u>ಭೂದಾಖಲೆಗಳ ಇಲಾಖೆ:-</u>**

- ಉಪನಿರ್ದೇಶಕರು ಮಾತನಾಡಿ, ಜಿಲ್ಲೆಯಲ್ಲಿ ಭೂಮಾಪಕರ ಪ್ರಗತಿ ತಿಂಗಳಿಗೆ ಸರಾಸರಿ 20ರಷ್ಟು ಇರುತ್ತದೆ. ಹಾಗೂ ಇಲಾಖೆಯಲ್ಲಿ ವ್ಯವಸ್ಥಿತವಾಗಿ ಕಾರ್ಯ ನಡೆಯುತ್ತಿರುತ್ತದೆ ಎಂದು ತಿಳಿಸಿದರು.
- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸರ್ವೇ ದಾಖಲೆಗಳಲ್ಲಿ ಸಾರ್ವಜನಿಕರಿಗೆ ಕಾಲಕಾಲಕ್ಕೆ ಅಳತೆ ಕಾರ್ಯನಡೆಯುತ್ತಿದೆ ಎಂಬುದರ ಬಗ್ಗೆ ಪರೀಸಲಿಸಲು ಅಪರ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.
- ಮುಂದಿನ ಸಭೆಗೆ ಭೂದಾಖಲೆಯ ಇಲಾಖೆಯ ಸಂಪೂರ್ಣ ವರದಿ ಹಾಗೂ ಪ್ರಗತಿಯನ್ನು ಮಂಡಿಸಲು ಸೂಚಿಸಿದರು.

**(ಉಪನಿರ್ದೇಶಕರು, ಭೂದಾಖಲೆಗಳ ಇಲಾಖೆ, ಚಿಕ್ಕಬಳ್ಳಾಪುರ)**

**10) <u>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:-</u>**

ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮಾತನಾಡಿ, ಪ್ರತಿ ಗ್ರಾಮ ಪಂಚಾಯಿತ್ತಿಯ ಬಾಪೂಜಿ ಸೇವಾ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ 178647 ಆರೋಗ್ಯ ಕಾರ್ಡ್‌ನ್ನು

ವಿತರಿಸಲಾಗುತ್ತಿದ್ದು, ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದಾಗಿ ತಿಳಿಸಿದರು.

- ಜನನಿ ಸುರಕ್ಷಾ ಯೋಜನೆ ಮತ್ತು ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮಗಳಲ್ಲಿ ಉತ್ತಮ ಪ್ರಗತಿ ಸಾಧಿಸಲು ಸೂಚಿಸಿದರು.
- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಅಗತ್ಯವಿರುವ ವೈದ್ಯಾಧಿಕಾರಿಗಳನ್ನು ಕಾಲ-ಕಾಲಕ್ಕೆ ನೇಮಿಸಿಕೊಳ್ಳಲು ಸೂಚಿಸಲಾಯಿತು.
- ಸಾರ್ವಜನಿಕರೆಲ್ಲರೂ ಸಂಜೀವಿನಿ ಯೋಜನೆ ಬೇಕು ಎಂದು ಹಲವಾರು ಮನವಿಗಳು ಸ್ವೀಕೃತವಾಗುತ್ತಿದ್ದು, ಆದ್ದರಿಂದ ಆಯುಷ್ಮಾನ್ ಭಾರತ್ ಯೋಜನೆ ಹಾಗೂ ಸಂಜೀವಿನಿ ಯೋಜನೆಗೆ ಇರುವ ವ್ಯತ್ಯಾಸಗಳ ಬಗ್ಗೆ ಟಿಪ್ಪಣಿಯನ್ನು ತಮ್ಮ ಕಛೇರಿಗೆ ಸಲ್ಲಿಸಲು ಸೂಚಿಸಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾಪಂಚಾಯತ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ)**

## 11) ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ:-

ಉಪನಿರ್ದೇಶಕರು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ ರವರು ಮಾತನಾಡಿ, ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ ಉತ್ತಮ ಫಲಿತಾಂಶಕ್ಕಾಗಿ, ವಿಶೇಷ ತರಗತಿಗಳನ್ನು ಆರಂಭಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, 100% ರಷ್ಟು ಫಲಿತಾಂಶ ಬರುವಂತೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು.

- ಮಕ್ಕಳ ಕಲಿಕಾ ಮಟ್ಟವನ್ನು ಹೆಚ್ಚಿಸಲು ಕ್ರಮ ವಹಿಸಲು ಸೂಚಿಸಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾಪಂಚಾಯತ್ ಹಾಗೂ ಉಪನಿರ್ದೇಶಕರು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ)**

## 12) ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ:-

ಜಿಲ್ಲಾ ಅಧಿಕಾರಿಗಳು ಮಾತನಾಡಿ, ಬಾಗೇಪಲ್ಲಿ ತಾಲ್ಲೂಕಿನಲ್ಲಿ 01 ನಿವೇಶನ ಮಂಜೂರು ಮಾಡಲು ಬಾಕಿ ಇರುತ್ತದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ತಹಶೀಲ್ದಾರ್, ಬಾಗೇಪಲ್ಲಿ ತಾಲ್ಲೂಕು ರವರಿಂದ ಬಂದಿರುವ ಪ್ರಸ್ತಾವನೆಯನ್ನು ಪರಿಶೀಲನೆ ಮಾಡಿ ತುರ್ತಾಗಿ ಜಮೀನು ಮಂಜೂರು ಮಾಡಲು ಸೂಚಿಸಿದರು. ಸೂಚಿಸಲಾಯಿತು.

ವಸತಿ ನಿಲಯದಲ್ಲಿರುವ ಮಕ್ಕಳು 100% ರಷ್ಟು ಫಲಿತಾಂಶ ಬರುವಂತೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು.

**(ಕ್ರಮ: ಜಿಲ್ಲಾ ಅಧಿಕಾರಿಗಳು, ಸಮಾಜ/ಹಿಂದುಳಿದ/ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ)**

## 13) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ:-

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಮಾತನಾಡಿ, ಜಿಲ್ಲೆಯಲ್ಲಿ ಅಂಗನವಾಡಿ ಮಕ್ಕಳಿಗೆ ಬಿಸಿಯೂಟ ಯೋಜನೆ, ಮಾತೃ ಪೂರ್ಣ ಯೋಜನೆ, ಮಾತೃವಂದನಾ ಮಾತೃಶ್ರೀ ಯೋಜನೆಗಳು ವ್ಯವಸ್ಥಿತವಾಗಿ ನಡೆಯುತ್ತಿದೆಯೆಂದು ತಿಳಿಸಿದರು.

- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಅಂಗನವಾಡಿ ಕಟ್ಟಡ ನಿರ್ಮಿಸಲು ಬಾಕಿ ಇರುವ ಸ್ಥಳಗಳಲ್ಲಿ ಶಾಲಾ ಆವರಣ ಅಥವಾ ಶಾಲಾ ಕಟ್ಟಡದ ಮೇಲ್ಭಾಗದಲ್ಲಿ ಕಟ್ಟಡಗಳನ್ನು ತುರ್ತಾಗಿ ನಿರ್ಮಿಸಲು ಸೂಚಿಸಿದರು.
- ಮಕ್ಕಳ ಅಪೌಷ್ಠಿಕತೆ ಮಟ್ಟವನ್ನು ಹಿಂದಿನ ಸಭೆಯಲ್ಲಿ 156 ರಿಂದ 139 ಕ್ಕೆ ಕಡಿಮೆ ಮಾಡಲಾಗಿದೆ ಅಪೌಷ್ಠಿಕತೆ ಮಕ್ಕಳನ್ನು ಆರೋಗ್ಯ ಕೇಂದ್ರದಲ್ಲಿ ಸೇರ್ಪಡೆ ಮಾಡಿ ಅವರ ಪೌಷ್ಠಿಕ ಮಟ್ಟವನ್ನು ಸುಧಾರಿಸುವ ಕಾರ್ಯವನ್ನು ಮಾಡಲಾಗುತ್ತಿದೆ ಎಂದು ತಿಳಿಸಿದರು.

* ಇಲಾಖೆ ಯೋಜನೆಗಳನ್ನು ಉತ್ತಮ ಪ್ರಗತಿ ಸಾಧಿಸಲು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ)**

ಈ ಮೇಲ್ಕಂಡ ಇಲಾಖೆಗಳ ಬಗ್ಗೆ ಪ್ರಗತಿ ಪರಿಶೀಲನೆಯನ್ನು ನಡೆಸಿ ನೀಡಿದ ನಿರ್ದೇಶನಗಳಂತೆ ಅಗತ್ಯ ಕ್ರಮಗಳನ್ನು ಕೈಗೊಂಡು ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೂ ಅನುಪಾಲನಾ ವರದಿಯನ್ನು ಸಲ್ಲಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ಅಪರ ಜಿಲ್ಲಾಧಿಕಾರಿಗಳು ರವರು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**(ಡಾ॥ ಎನ್.ನಾಗಾಂಬಿಕಾದೇವಿ, ಭಾ.ಆ.ಸೇ.)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಹಕಾರ ಇಲಾಖೆ ಮತ್ತು
ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ,
ಕರ್ನಾಟಕ ಸರ್ಕಾರ, ಬೆಂಗಳೂರು.

<u>ಪ್ರತಿಯನ್ನು:</u>

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
4. ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ರವಾನಿಸುತ್ತಾ ಸಭಾ ನಡಾವಳಿಗೆ ಅನುಪಾಲನ ವರದಿಯನ್ನು ಸಲ್ಲಿಸಲು ಸೂಚಿಸಿದೆ.
5. ಜಿಲ್ಲೆಯ ಎಲ್ಲಾ ಆಯುಕ್ತರು, ನಗರ ಸಭೆ / ಪೌರಾಯುಕ್ತರು ಪುರಸಭೆ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
6. ಹೆಚ್ಚುವರಿ ಪ್ರತಿ.

# ಜಿಲ್ಲಾಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರ.ಸಂ | ಅಂಶಗಳು | |
|---|---|---|
| 1 | ಉಸ್ತುವಾರಿಜಿಲ್ಲೆಯ ಹೆಸರು | ಬೆಂಗಳೂರು ನಗರಜಿಲ್ಲೆ |
| 2 | ಜಿಲ್ಲಾಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಸನ್ಮಾನ್ಯತುಷಾರ್‌ಗಿರಿನಾಥ್.ಭಾ.ಅ.ಸೇ.ರವರು. |
| 3 | ಪ್ರವಾಸಕ್ಕೈಗೊಂಡ ದಿನಾಂಕ | 26–02–2020 |

| | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ | |
|---|---|---|
| 4 | ಜಿಲ್ಲಾಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | 1. ಕುಂಬಳಗೋಡು ಗ್ರಾಮದ ಬಳಿಯಲ್ಲಿ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ವತಿಯಿಂದ 110 ಲಕ್ಷ.ರೂಗಳ ವೆಚ್ಚದಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ನಿರ್ಮಾಣವಾಗಿರುವ ಸೇತುವೆ ಮತ್ತು ಸಂಪರ್ಕ ರಸ್ತೆ ಕಾಮಗಾರಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವ ಫಲಕವನ್ನು ಹಾಕಿಸದೆ ಇರುವ ಅಂಶವನ್ನು ಗಮನಿಸಿದರು.<br>2. ಅಜ್ಜನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಬ್ಯಾಲಾಳು ಗ್ರಾಮದಲ್ಲಿ ಮಾಗಡಿ ಅಭಿವೃದ್ಧಿ ಪ್ರಾಧಿಕಾರದ ಅನುದಾನದಿಂದ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಅನುಷ್ಠಾನಗೊಂಡಿರುವ ಅಭಿವೃದ್ಧಿ ಕಾಮಗಾರಿ ಬಗ್ಗೆ ಮಾಹಿತಿ ನೀಡುವ ಫಲಕವನ್ನು ಹಾಕಿಸದೆ ಇರುವ ಅಂಶವನ್ನು ಗಮನಿಸಿದರು.<br>3. ಚುಂಚನಕುಪ್ಪೆ ಗ್ರಾಮ ಪಂಚಾಯಿತಿ ಕಛೇರಿಗೆ ಭೇಟಿ ನೀಡಿ ಅಲ್ಲಿನ ದಾಖಲೆಗಳ ನಿರ್ವಹಣೆಯನ್ನು ಗಮನಿಸಿದರು.<br>4. ಹೊನ್ನಿಗಾನಹಟ್ಟಿಯಲ್ಲಿರುವ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗೆ ಭೇಟಿ ನೀಡಿದ ಮಾನ್ಯರು ಮೊದಲ ಚಾವಣಿಯ ಮೇಲ್ಭಾಗದಲ್ಲಿ ಅಡ್ಡಗೋಡೆಯನ್ನು ನಿರ್ಮಿಸದೆ ಇರುವ ವಿಚಾರವನ್ನು ಗಮನಿಸಿದರು.<br>5. ಚನ್ನೇನಹಳ್ಳಿ ಗ್ರಾಮದಲ್ಲಿ ಪ್ರಧಾನಮಂತ್ರಿಯವರ ಆದರ್ಶ ಗ್ರಾಮ ಯೋಜನೆಯಡಿ ನಿರ್ಮಾಣ ಆಗಿರುವ ರಸ್ತೆ ಕಾಮಗಾರಿಯ ಗುಣಮಟ್ಟವನ್ನು ಗಮನಿಸಿದರು.<br>6. ತಾವರೆಕೆರೆ ಗ್ರಾಮದಲ್ಲಿ ಅನುಷ್ಠಾನಗೊಂಡಿರುವ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಪರಿಶೀಲಿಸಿದರು. |
| 5 | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | 1. ಮೇಲ್ಕಂಡ ಕ್ರಮ ಸಂಖ್ಯೆ 1 ಮತ್ತು 2 ರ ಕಾಮಗಾರಿಗಳ ಸ್ಥಳದಲ್ಲಿ ಕಾಮಗಾರಿಯ ಬಗ್ಗೆ ಮಾಹಿತಿ ನೀಡುವ ಫಲಕವನ್ನು ಅಳವಡಿಸುವಂತೆ ಸೂಚಿಸಿದರು.<br>2. ಹೊನ್ನಿಗಾನಹಟ್ಟಿ ಕರ್ನಾಟಕ ಪಬ್ಲಿಕ್ ಶಾಲೆಯ ಮೊದಲನೇ ಚಾವಣಿಯ ಮೇಲ್ಭಾಗದಲ್ಲಿ ಕಿರುಗೋಡೆಯನ್ನು ಶೀಘ್ರವಾಗಿ ಮಕ್ಕಳ |

| | | |
|---|---|---|
| | | ಹಿತದೃಷ್ಟಿಯಿಂದ ಕಟ್ಟಿಸಬೇಕೆಂದು ನಿರ್ದೇಶಿಸಿದರು.<br>3. ಸಂಸದ್ ಆದರ್ಶ ಗ್ರಾಮ ಯೋಜನೆಯಡಿ ಅನಧಿಕೃತ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು ಸೂಕ್ತವಲ್ಲ ಎಂದು ತಿಳಿಯಪಡಿಸಿದರು.<br>4. ಕೆರೆಯ ದಂಡೆಯಿಂದ 90 ಅಡಿಗಳವರೆಗೆ ಬಫರ್ ಜೋನ್ ಜಾಗವಿದ್ದು ಈ ಅಂತರದ ನಂತರದಲ್ಲಿ ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡುವಂತೆ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ನಿರ್ದೇಶನ ನೀಡಿದರು. |
| | ಕ್ಷೇತ್ರ ವೀಕ್ಷಣೆ | -- |

| ಕ್ರಮ ಸಂಖ್ಯೆ | ಭೇಟಿ ನೀಡಿದತಾಲ್ಲೂಕು/ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
|---|---|---|---|
| 6 | ಬೆಂಗಳೂರು ದಕ್ಷಿಣ ತಾಲ್ಲೂಕು<br>ಹಳ್ಳಿಗಳು:-<br>1. ಕುಂಬಳಗೂಡು<br>2. ತಾವರೆಕೆರೆ<br>3. ಅಜ್ಜನಹಳ್ಳಿ<br>4. ಚುಂಚನಕುಪ್ಪೆ<br>5. ಚನ್ನೇನಹಳ್ಳಿ<br>6. ಹೊನ್ನಿಗಾನಹಟ್ಟಿ<br>7. ಬ್ಯಾಲಾಳು<br>ಈ ಗ್ರಾಮಗಳಿಗೆ ಭೇಟಿ ನೀಡಿದರು. | 1. ಕುಂಬಳಗೂಡು ಗ್ರಾಮ ಪಂಚಾಯಿತಿ.<br>2. ಬ್ಯಾಲಾಳು ಗ್ರಾಮ.<br>3. ಚುಂಚನಕುಪ್ಪೆ ಗ್ರಾಮ ಪಂಚಾಯಿತಿ.<br>4. ಹೊನ್ನಿಗಾನಹಟ್ಟಿ ಗ್ರಾಮದ ಸಾರ್ವಜನಿಕ ಶಾಲೆ.<br>5. ಚನ್ನೇನಹಳ್ಳಿ ಗ್ರಾಮ ಪಂಚಾಯಿತಿ ಕೇಂದ್ರ.<br>6. ತಾವರೆಕೆರೆ ಗ್ರಾಮದ ಕೆರೆ. | 1. ಕುಂಬಳಗೂಡಿನಲ್ಲಿ ಅನುಷ್ಠಾನಗೊಂಡಿರುವ ಮತ್ತು ಬ್ಯಾಲಾಳು ಕೆರೆ ಕಾಮಗಾರಿಗಳ ಬಗ್ಗೆ ವಿವರ ನೀಡುವ ಫಲಕವನ್ನು ಅಳವಡಿಸದಿರುವ ಅಂಶವನ್ನು ಗಮನಿಸಿದರು.<br>2. ಹೊನ್ನಿಗಾನಹಟ್ಟಿ ಸಾರ್ವಜನಿಕ ಶಾಲೆಯ ಭೋದನೆಯ ಗುಣಮಟ್ಟ ಮತ್ತು ಎಸ್.ಎಸ್.ಎಲ್.ಸಿ ಫಲಿತಾಂಶ ಇತ್ಯಾದಿಗಳನ್ನು ಗಮನಿಸಿದರು.<br>3. ಚನ್ನೇನಹಳ್ಳಿ ಗ್ರಾಮದಲ್ಲಿ ನಿರ್ಮಾಣವಾಗಿರುವ ಟಾರ್ ರಸ್ತೆ ಗುಣಮಟ್ಟವನ್ನು ಪರಿಶೀಲಿಸಿದರು.<br>4. ತಾವರೆಕೆರೆ ಗ್ರಾಮದ ಕೆರೆ ಅಭಿವೃದ್ಧಿಯನ್ನು ಗಮನಿಸಿದರು. |
| 7 | ಇತರೆ ವಿಷಯಗಳು | - | - |

(ತುಷಾರ್ ಗಿರಿ ನಾಥ್)

**ದಿನಾಂಕ: 26-02-2020 ರಂದು ಮಾನ್ಯ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಶ್ರೀ ತುಷಾರ್ ಗಿರಿನಾಥ್ ಭಾ.ಆ.ಸೇ., ರವರ ಅಧ್ಯಕ್ಷತೆಯಲ್ಲಿ ಜರುಗಿದ ಬೆಂಗಳೂರು ನಗರ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭಾ ನಡವಳಿ.**

**ಹಾಜರಿದ್ದವರು: ಅನುಬಂಧ -1ರಲ್ಲಿ ಲಗತ್ತಿಸಿದೆ.**

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಅಧ್ಯಕ್ಷರು, ಬೆಂಗಳೂರು ಜಲ ಮಂಡಳಿ ಹಾಗೂ ಬೆಂಗಳೂರು ನಗರ ಜಿಲ್ಲೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಸಭೆಯನ್ನು ಪ್ರಾರಂಭಿಸಿದರು.

**ಕಂದಾಯ ಇಲಾಖೆ:**

**1 2019-20 ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಅನುದಾನದಡಿ ಕುಡಿಯುವ ನೀರಿನ ಪುನಶ್ಚೇತನ ಕಾಮಗಾರಿಗಳಿಗೆ ಅನುಮೋದನೆ ನೀಡಿದ ಹಾಗೂ ಪ್ರಗತಿಯ ಕುರಿತು:**

ಒಟ್ಟು 66 ಕಾಮಗಾರಿಗಳನ್ನು ಪೂರ್ಣಗೊಳಿಸಲು ಈಗಾಗಲೇ ಶೇಕಡಾ 50ರಷ್ಟು ಹಣವನ್ನು ಬಿಡುಗಡೆ ಮಾಡಿದ್ದು, ಪ್ರಗತಿಯಲ್ಲಿದ್ದ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಬಳಕೆ ಪ್ರಮಾಣ ಪತ್ರವನ್ನು(Utilization Certificate) ಜಿಲ್ಲಾಧಿಕಾರಿಗಳ ಕಛೇರಿಗೆ ಸಲ್ಲಿಸುವಂತೆಯೂ, ಉಳಿದ ಶೇಕಡಾ 50ರಷ್ಟು ಮೊತ್ತವನ್ನು ಮಾರ್ಚ್-2020 ರ ಮೊದಲ ವಾರದಲ್ಲಿ ಬಿಡುಗಡೆ ಮಾಡುವಂತೆಯೂ ಅಪರ ಜಿಲ್ಲಾಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಲಾಯಿತು.

(ಕ್ರಮ: ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಹಾಗೂ ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ)

**2 Fodder Availability:**

ಬರುವ ಬೇಸಿಗೆ ಕಾಲಕ್ಕೆ ನೀರಿನ ಸಮಸ್ಯೆ ಎದುರಾಗಬಹುದಾದ ಸಾಧ್ಯತೆ ಇರುವುದರಿಂದ ಸರ್ಕಾರದಿಂದ ಬರ ಪರಿಹಾರಕ್ಕೆಂದು ಬಿಡುಗಡೆಯಾದ ಅನುದಾನದ ಉಳಿದ ಹಣವನ್ನು ಬಳಸಿಕೊಳ್ಳುವಂತೆ ಸೂಚಿಸಲಾಯಿತು.

(ಕ್ರಮ: ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾಧಿಕಾರಿಗಳು)

**3 Fodder Bank:**

ಕಳೆದ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಉಳಿದಿರುವ 2.38 ಟನ್ ಮೇವನ್ನು ಸುತ್ತ ಮುತ್ತ ಜಿಲ್ಲೆಗಳಿಗೆ ಪತ್ರ ಬರೆದು ಅವರಿಗೆ ಅವಶ್ಯಕತೆ ಇದ್ದಲ್ಲಿ ನೀಡುವಂತೆ ಸೂಚಿಸಿದ ಮೇರೆಗೆ ಉಳಿದ ಜಿಲ್ಲೆಗಳಿಗೆ ಪತ್ರ ಬರೆದಿದ್ದು, ಅವರಿಂದ ಯಾವುದೇ ಬೇಡಿಕೆ ಪತ್ರ ಬಾರದೆ ಇರುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು.

**4 ಬೆಂಗಳೂರು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯ ಅನುದಾನದ ಬಗ್ಗೆ:**

ಆನೇಕಲ್ ಪುರಸಭೆಗೆ ಕನಿಷ್ಟ 6.75 ಎಂ.ಎಲ್.ಡಿ. ನೀರಿನ ಬೇಡಿಕೆ ಇದ್ದು, ಬಿ.ಡಬ್ಲ್ಯೂಎಸ್.ಎಸ್.ಬಿ.ಯಿಂದ ಕೇವಲ 2 ಎಂಎಲ್‌ಡಿ ಸರಬರಾಜು ಆಗುತ್ತಿದ್ದು, ಇನ್ನು ಹೆಚ್ಚಿನ ಎಂಎಲ್‌ಡಿ ಸರಬರಾಜು ಮಾಡಬೇಕೆಂದು ಸಭೆಯನ್ನು ಕೋರಿದರು.

ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸುವ ಕುರಿತು ಈಗ ಮಾಡಿಕೊಂಡಿರುವ ವ್ಯವಸ್ಥೆಯ ಬಗ್ಗೆ ಹಾಗೂ ಮುಂದಿನ ಮೂರು ತಿಂಗಳಲ್ಲಿ ಕುಡಿಯುವ ನೀರಿನ ಕೊರತೆಯನ್ನು ನೀಗಿಸಲು ಮಾಡಬಹುದಾದ ಯೋಜನೆಗಳ ಕುರಿತು ಒಂದು ಕ್ರಿಯಾ ಯೋಜನೆಯನ್ನು ರೂಪಿಸಿಕೊಂಡು, ಜಿಲ್ಲಾಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿ, ಅನುದಾನದ ಕೊರತೆ ಇದ್ದಲ್ಲಿ ಬರಪರಿಹಾರ ನಿಧಿಯಿಂದ ಬಳಸಬಹುದೆಂದು ಮಾನ್ಯ ಅಧ್ಯಕ್ಷರು ಸೂಚಿಸಿದರು.

(ಕ್ರಮ: ಡಿಯುಡಿಸಿ ಅಧಿಕಾರಿಗಳು, ಎಲ್ಲಾ ಪುರಸಭೆ/ನಗರಸಭೆ ಅಧಿಕಾರಿಗಳು ಹಾಗೂ ಅಪರ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು)

**5 ಸ್ಥಳೀಯ ಸಂಸ್ಥೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ನಿರ್ವಹಿಸಲಾಗುತ್ತಿರುವ ಟ್ಯಾಂಕರ್‌ಗಳ ಮಾಹಿತಿ:**

ಸೂರ್ಯಸಿಟಿಗೆ ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಸರಬರಾಜು ಮಾಡುವ/ಮಾಡುತ್ತಿರುವ 15 ಎಂಎಲ್‌ಡಿಯಿಂದ ಸದ್ಯಕ್ಕೆ ಚಂದಾಪುರ, ಬೊಮ್ಮಸಂದ್ರ ಇವರಿಗೆ ಸರಬರಾಜು ಮಾಡುವ ಬಗ್ಗೆ ಹಾಗೂ ಹೆಬ್ಬಗೋಡಿ ನಗರಸಭೆಗೆ 1 ಎಂಎಲ್‌ಡಿಯನ್ನು ನೀಡುವಂತೆಯೂ ಹಾಗೂ ಇದನ್ನು ನೇರವಾಗಿ ಹೆಬ್ಬಗೋಡಿ ಪೊಲೀಸ್ ಠಾಣೆಯ ಪಕ್ಕದಲ್ಲಿ ಒಂದು ಡಯಾಮೀಟರ್ ಅಳವಡಿಸುವಂತೆ ಸಭೆಯನ್ನು ಕೋರಿದರು.

**6. ನಗರ ಸ್ಥಳೀಯ ಸಂಸ್ಥೆಯಲ್ಲಿ ಉಳಿದ ಯೋಜನೆಗಳಡಿ ಆಗಿರುವ ಪ್ರಗತಿ ವಿವರಗಳು ಈ ಕೆಳಕಂಡಂತಿರುತ್ತವೆ:**

1) ಎಸ್‌ಬಿಎಂ ಯೋಜನೆಯಲ್ಲಿ 63,69 ಲಕ್ಷಗಳ ಅನುದಾನವಿದ್ದು, ಇದರಲ್ಲಿ 54.29 ಲಕ್ಷಗಳು ಖರ್ಚಾಗಿದ್ದು, ಪ್ರಗತಿಯು ಶೇಕಡ 85.11 ಸರಾಸರಿಯಾಗಿರುತ್ತದೆ.

2) ಸ್ವಚ್ಛ ಭಾರತ ಯೋಜನೆಯಡಿ ಒಟ್ಟು 622 ಶೌಚಾಲಯಗಳ ನಿರ್ಮಾಣದ ಗುರಿ ಇದ್ದು, ಇದರಲ್ಲಿ 581 ಪೂರ್ಣಗೊಂಡಿದ್ದು, 19 ಕಾಮಗಾರಿ ಪ್ರಗತಿಯಲ್ಲಿದ್ದು,14 ಕಾಮಗಾರಿಗಳನ್ನು ರದ್ದುಪಡಿಸಲು ಕ್ರಮ ವಹಿಸಲಾಗಿದ್ದು, ಇನ್ನು 8 ಕಾಮಗಾರಿಗಳು ಪ್ರಾರಂಭವಾಗಬೇಕಾಗಿದ್ದು, ಒಟ್ಟಾರೆ ಶೇಕಡಾ 93.40 ರಷ್ಟು ಪ್ರಗತಿ ಸಾಧಿಸಿದೆ.

3) ಜಲಶಕ್ತಿ ಅಭಿಯಾನದ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ನಗರಸಭೆ/ಪುರಸಭೆಗಳಿಗೆ ಅವಶ್ಯವಿರುವ ಒಟ್ಟು 61.50 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರಿಗೆ ಪತ್ರ ಬರೆದಿರುವುದಾಗಿ ಸಭೆಗೆ ತಿಳಿಸಿದರು.

4) ನಗರೋತ್ಥಾನ ಯೋಜನೆಯಡಿ 81 ಕಾಮಗಾರಿಗಳ ಭೌತಿಕ ಗುರಿ ನಿಗಧಿಯಾಗಿದ್ದು, 69 ಪೂರ್ಣಗೊಂಡಿದ್ದು, 12 ಪ್ರಗತಿಯಲ್ಲಿದ್ದು, ಒಟ್ಟಾರೆ ಶೇಕಡಾ 98ರಷ್ಟು ಪ್ರಗತಿ ಸಾಧಿಸಿರುವುದಾಗಿ ತಿಳಿಸಿದರು.

5) ಎಸ್‌ಎಫ್‌ಸಿ ಯೋಜನೆಯಡಿ 2019-20ನೇ ಸಾಲಿನಲ್ಲಿ ಶೇಕಡಾ76.40 ಪ್ರಗತಿ ಸಾಧಿಸಿರುವುದನ್ನು ಸಭೆಯಲ್ಲಿ ಗಮನಿಸಲಾಯಿತು.

6) ಮುಂದುವರೆದು ಆನೇಕಲ್ ಪುರಸಭಾ ವ್ಯಾಪ್ತಿಯಲ್ಲಿ ಒಂದು ಇಂದಿರಾ ಕ್ಯಾಂಟೀನ್ ಇದ್ದು ಇದು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡಿದರು.

7 **ಸಾಮಾಜಿಕ ಭದ್ರತಾ ಯೋಜನೆಗಳು:**

**ಅ) ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ:**

ಈ ಯೋಜನೆಗಳಡಿ ಬಂದಿರುವ ಅರ್ಜಿಗಳನ್ನು ಸಕಾಲದಡಿ ವಿಧಿಸಿರುವ ಕಾಲಮಿತಿಗಿಂತ ಮೊದಲೇ ಅಂದರೆ 15 ದಿನಗಳೊಳಗಾಗಿ ಬಂದ ಅರ್ಜಿಗಳನ್ನು ಬಿಟ್ಟು, ಉಳಿದವುಗಳನ್ನು ವಿಲೇವಾರಿ ಮಾಡಲು ಸೂಚಿಸಲಾಯಿತು.

ತಹಶೀಲ್ದಾರ್, ಉತ್ತರ ತಾಲ್ಲೂಕು ಇವರು ದಿನಾಂಕ:29/02/2020ರೊಳಗಾಗಿ ಇತ್ತೀಚೆಗೆ 15 ದಿನಗಳೊಳಗಾಗಿ ಬಂದ ಅರ್ಜಿಗಳನ್ನು ಉಳಿಸಿಕೊಂಡು, ವಿವಿಧ ಯೋಜನೆಗಳಡಿ ಬಾಕಿ ಇರುವ ಹಳೆಯ ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡುವಂತೆ ಜವಾಬ್ದಾರಿಯನ್ನು ನೀಡಿ, ಈ ಬಗ್ಗೆ ಮೇಲುಸ್ತುವಾರಿ ವಹಿಸುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

ಶ್ರೀ ಮಹೇಂದ್ರ, ತಹಶೀಲ್ದಾರ್ (ಗ್ರೇಡ್-2)ಇವರು ಪದೇ ಪದೇ ಕಛೇರಿಗೆ ಗೈರುಹಾಜರಾಗುವುದನ್ನು ಉಪವಿಭಾಗಾಧಿಕಾರಿಗಳು, ಉತ್ತರ ಉಪವಿಭಾಗ ಇವರು ಸಭೆಯಲ್ಲಿ ತಿಳಿಸಿದಾಗ, ಅವರ ಗೈರು ಹಾಜರಿ ಬಗ್ಗೆ ಜಿಲ್ಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಬೇಕೆಂದು, ಈ ಬಗ್ಗೆ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಲಾಯಿತು.

(ಕ್ರಮ: ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು, ಉಪವಿಭಾಗಾಧಿಕಾರಿಗಳು, ಉತ್ತರ ಉಪವಿಭಾಗ ಮತ್ತು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ)

**ಆ) ಸಂಧ್ಯಾ ಸುರಕ್ಷಾ ಯೋಜನೆ, ಮನಸ್ವಿನಿ ಯೋಜನೆ, ಮೈತ್ರಿ ಯೋಜನೆ, ಆದರ್ಶ ವಿವಾಹ ಯೋಜನೆ ಮತ್ತು ರೈತ ಪತ್ನಿ ವಿಧವಾ ವೇತನ, ಆಸಿಡ್ ದಾಳಿಗೆ ಒಳಗಾದ ಮಹಿಳೆ/ಹೆಣ್ಣುಮಕ್ಕಳ ಸಹಾಯಧನ ಯೋಜನೆ:**

ಮೇಲ್ಕಂಡ ವಿವಿಧ ಯೋಜನೆಗಳಡಿ ಉಳಿದಿರುವ ಬಾಕಿ ಅರ್ಜಿಗಳನ್ನು ದಿನಾಂಕ:29/02/2020 ರೊಳಗಾಗಿ ವಿಲೇವಾರಿ ಮಾಡುವಂತೆ ಎಲ್ಲಾ ತಾಲ್ಲೂಕು ತಹಶೀಲ್ದಾರ್‌ಗಳಿಗೆ ತಿಳಿಸುತ್ತಾ, ಈ ಬಗ್ಗೆ ಮೇಲುಸ್ತುವಾರಿ ವಹಿಸುವಂತೆ ಎರಡು ಉಪವಿಭಾಗದ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು. 2020ರ ಮಾರ್ಚ್ ಮೊದಲ ವಾರದಲ್ಲಿ ಈ ಬಗ್ಗೆ ವರದಿ ನೀಡುವಂತೆ ಅಪರ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ನೀಡಲಾಯಿತು.

(ಕ್ರಮ: ಅಪರ ಜಿಲ್ಲಾಧಿಕಾರಿಗಳು, ಎಲ್ಲಾ ತಾಲ್ಲೂಕು ತಹಶೀಲ್ದಾರ್‌ಗಳು)

**ಇ) ಅಂತ್ಯ ಸಂಸ್ಕಾರ ಯೋಜನೆ**

ನಗರ ವ್ಯಾಪ್ತಿಯಲ್ಲಿ ಮರಣ ಹೊಂದಿದ ವ್ಯಕ್ತಿಗಳಿಗೆ ಬಿಬಿಎಂಪಿ ವತಿಯಿಂದ ನೀಡುವ ಮರಣ ಪ್ರಮಾಣ ಪತ್ರವನ್ನು ಪಡೆದು ಅದನ್ನು ತಾಲ್ಲೂಕು /ನಾಡ ಕಛೇರಿಯಲ್ಲಿರುವ ದಾಖಲೆಗಳನ್ನು ಪರಿಶೀಲಿಸಿ, ಲಿಂಕ್ ಮಾಡಿದಲ್ಲಿ ಮರಣಹೊಂದಿದ ವ್ಯಕ್ತಿಯು ಬಿಪಿಎಲ್ ಕಾರ್ಡ್‌ದಾರರ ವಿಳಾಸದಲ್ಲಿ ಕಂಡು ಬಂದಲ್ಲಿ, ಅವರ ಆಧಾರ ಸಂಖ್ಯೆಯನ್ನು, ಓಟರ್ ಕಾರ್ಡ್ ನಂಬರ್‌ನ್ನು ಹೊಂದಾಣಿಕೆ ಮಾಡಿಕೊಂಡು ಅಂತಹವರಿಗೆ

ಸರ್ಕಾರದಿಂದ ನೀಡಬಹುದಾದ ಅಂತ್ಯ ಸಂಸ್ಕಾರದ ಹಣವನ್ನು ಆರ್‌ಟಿಜಿಎಸ್ ಮುಖಾಂತರ ಅವರ ಬ್ಯಾಂಕ್ ಖಾತೆಗೆ ಪಾವತಿಸುವ ಬಗ್ಗೆ ಮುಂದಿನ ದಿನಗಳಲ್ಲಿ ಕ್ರಮ ವಹಿಸಬೇಕೆಂದು, ಈ ಬಗ್ಗೆ ಜಿಲ್ಲಾಧಿಕಾರಿಗಳು, ಎಲ್ಲಾ ತಾಲ್ಲೂಕು ಅಧಿಕಾರಿಗಳು ಬಿಬಿಎಂಪಿ ಅಧಿಕಾರಿಗಳೊಂದಿಗೆ ಸಮನ್ವಯ ಸಭೆಯನ್ನು ಕರೆದು ಪ್ರಗತಿಯನ್ನು ಸಾಧಿಸಬೇಕೆಂದು ಸೂಚಿಸಲಾಯಿತು.

( ಕ್ರಮ: ಎಲ್ಲಾ ತಹಶೀಲ್ದಾರ್, ಬಿಬಿಎಂಪಿ ಅಧಿಕಾರಿಗಳು, ಜಿಲ್ಲಾಧಿಕಾರಿಗಳು)

**ಈ) ರಾಷ್ಟ್ರೀಯ ಕುಟುಂಬ ನೆರವು ಯೋಜನೆ;**

ಈ ಯೋಜನೆಯಲ್ಲಿ ರೂ.28 ಲಕ್ಷಗಳು ಬಾಕಿ ಇದ್ದು, ಇದನ್ನು ಅಂತ್ಯ ಸಂಸ್ಕಾರ ಯೋಜನೆಯಲ್ಲಿ ಈಗಾಗಲೇ ನೀಡಿರುವಂತಹ ಸಲಹೆಗಳನ್ನು ಅಳವಡಿಸಿಕೊಂಡು, ಡೇಟಾ ಬೇಸ್ ಲಿಂಕಿಂಗ್ ಮಾಡುವಂತೆ ಸೂಚನೆಯನ್ನು ನೀಡಿದರು. ಇದರಿಂದ ಕುಟುಂಬಕ್ಕೆ ಆಧಾರ'ವಾಗಿದ್ದ ವ್ಯಕ್ತಿ ಮೃತಪಟ್ಟಲ್ಲಿ ಅಂತಹವರ ಪತ್ನಿಗೆ ವಿಧವಾ ವೇತನ ನೀಡುವ ಅವಕಾಶವಿದ್ದು, ಮುಂದಿನ ಸಭೆಯೊಳಗೆ ಈ ಸಲಹೆಗಳನ್ನು ಕಾರ್ಯಗತ ಮಾಡುವ ಬಗ್ಗೆ ಕ್ರಮ ವಹಿಸಬೇಕೆಂದು ಸೂಚಿಸಲಾಯಿತು.

(ಕ್ರಮ: ಎಲ್ಲಾ ತಹಶೀಲ್ದಾರ್, ಉಪವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು)

**7 ಬೆಂಗಳೂರು ನಗರ ಜಿಲ್ಲೆಯ ಆರ್.ಟಿ.ಸಿ.3 ಮತ್ತು 9 ಮಿಸ್‌ಮ್ಯಾಚ್:**

ದಿನಾಂಕ: 26/02/2020 ರವರೆಗೆ ಸುಮಾರು 21,106 ಅರ್ಜಿಗಳು ಬಾಕಿ ಇರುವುದನ್ನು ಗಮನಿಸಿ, ವಾರಕ್ಕೆ 100 ಪ್ರಕರಣಗಳನ್ನು ಕಡ್ಡಾಯವಾಗಿ ಮಾಡುವ ಗುರಿಯನ್ನು ನಿಗದಿಪಡಿಸುವಂತೆ, ಅದರಂತೆ ಅಗತ್ಯ ಕ್ರಮ ಕೈಗೊಳ್ಳಲು ಎಲ್ಲಾ ಉಪವಿಭಾಗಾಧಿಕಾರಿಗಳಿಗೆ ಸೂಚನೆ ನೀಡಲಾಯಿತು.

(ಕ್ರಮ: ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಮತ್ತು ದಕ್ಷಿಣ ಉಪವಿಭಾಗ)

**8 ಬೆಂಗಳೂರು ನಗರ ಜಿಲ್ಲೆಯ ಪೈಕಿ ಆರ್‌ಟಿಸಿ ಬಗ್ಗೆ:**

ಪೈಕಿ ಆರ್‌ಟಿಸಿಯಲ್ಲಿ ಎಲ್ಲಾ ತಹಶೀಲ್ದಾರ್‌ಗಳಿಗೆ ಗುರಿಯನ್ನು ನಿಗಧಿಪಡಿಸಲಾಗಿದ್ದು, ಈ ಮಾಹೆಯಲ್ಲಿ ಒಟ್ಟು 12442 ಮಾತ್ರ ಬಾಕಿ ಇರುವುದನ್ನು ಗಮನಿಸಿದ ಸಭೆಯು ಇವುಗಳನ್ನು ಸಹ ಆದ್ಯತೆಯ ಮೇರೆಗೆ ಕ್ರಮವಹಿಸುವಂತೆ ಸೂಚಿಸಲಾಯಿತು.

(ಕ್ರಮ: ಅಪರ ಜಿಲಾಧಿಕಾರಿಗಳು ಮತ್ತು ಎಲ್ಲಾ ತಹಶೀಲ್ದಾರ್‌ಗಳು, ಉಪವಿಭಾಗಾಧಿಕಾರಿಗಳು)

**9 ಬಾಕಿಯಿರುವ ಎಲ್ಲಾ ಪೋಡಿ ಪ್ರಕರಣಗಳ ವಿಲೇವಾರಿ:**

ಪೋಡಿ ಪ್ರಕರಣಗಳ ವಿಲೇವಾರಿಯ ಬಗ್ಗೆ ಪ್ರತಿ ಸರ್ವೇಯರ್ ತಿಂಗಳಲ್ಲಿ 26 ಪ್ರಕರಣಗಳನ್ನು ಮಾಡಲು ಸೂಚಿಸಲಾಯಿತು.

ತಾಲ್ಲೂಕಿನಲ್ಲಿ ಲಭ್ಯವಿರುವ ಸರ್ವೇಯರ್‌ಗಳಲ್ಲಿ ಇಬ್ಬರನ್ನು ತಹಶೀಲ್ದಾರ್‌ರವರು ಸೂಚಿಸುವ ಸರ್ವೆ ಕಾರ್ಯಗಳನ್ನು ಆದ್ಯತೆ ಮೇರೆಗೆ ನಿರ್ವಹಿಸುವಂತೆ ಸೂಚಿಸಲಾಯಿತು. ಮುಂದುವರೆದು ಈ ಬಗ್ಗೆ ಜಿಲ್ಲಾಧಿಕಾರಿಗಳು ಒಂದು ಆದೇಶವನ್ನು ಹೊರಡಿಸಬೇಕೆಂದು ಸಹ ತಿಳಿಸಲಾಯಿತು.

(ಕ್ರಮ: ಭೂ ದಾಖಲೆಗಳ ಉಪನಿರ್ದೇಶಕರು, ಜಿಲ್ಲಾಧಿಕಾರಿಗಳು)

ಸುಮಾರು 311 ಕೆರೆಗಳ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಈಗಾಗಲೇ ಸರ್ವೆ ಕಾರ್ಯ ಮುಗಿದಿದ್ದು, ಬೌಂಡರಿ ಗುರುತಿಸಿ, ಹದ್ದುಬಸ್ತು ಮಾಡುವ ವೇಳೆಯಲ್ಲಿ ತಹಶೀಲ್ದಾರ್ ಲಭ್ಯವಿಲ್ಲದೆ ಇದ್ದಲ್ಲಿ ಆಯಾ ಹೋಬಳಿಯ ರಾಜಸ್ವ ನಿರೀಕ್ಷಕರಾಗಲಿ, ಗ್ರಾಮ ಲೆಕ್ಕಿಗರಾಗಲಿ ಹಾಜರಿರುವ ಬಗ್ಗೆ ಕ್ರಮ

ವಹಿಸಬೇಕೆಂದು ಎಲ್ಲಾ ತಹಶೀಲ್ದಾರ್‌ಗಳಿಗೆ ಸಭೆಯಲ್ಲಿ ಸೂಚಿಸಲಾಯಿತು.

ಪ್ರತಿ ಮಾಹೆ ಒಟ್ಟು 10–15 ಕೆರೆಗಳ ಒತ್ತುವರಿಯನ್ನು ತಾಲ್ಲೂಕುವಾರು 2–3 ಕೆರೆಗಳನ್ನು ಗುರುತಿಸಿ, ಕೆರೆ ಒತ್ತುವರಿ ತೆರವುಗೊಳಿಸುವ ಕಾರ್ಯ ಕೈಗೊಳ್ಳಬೇಕೆಂದು ಜಿಲ್ಲಾ ಪಂಚಾಯತ್ ಅಧಿಕಾರಿಗಳಿಗೆ ಸಭೆಯಲ್ಲಿ ಸೂಚನೆ ನೀಡಲಾಯಿತು.

(ಕ್ರಮ: ಎಲ್ಲಾ ತಹಶೀಲ್ದಾರ್‌ಗಳು, ಜಿಲ್ಲಾ ಪಂಚಾಯತ್‌ನ ಸಂಬಂಧಪಟ್ಟ ಅಧಿಕಾರಿಗಳು)

10 **ಪರವಾನಗಿ ಹೊಂದಿದ ಭೂ ಮಾಪಕರಿಂದ ಮುಟೇಷನ್ ಸ್ಕೆಚ್ –11 ಇ:**

55 ಪರವಾನಗಿ ಹೊಂದಿದ ಭೂಮಾಪಕರಲ್ಲಿ ಯಾರು ಮೋಜಣಿ ಕರ್ತವ್ಯವನ್ನು ಮಂದಗತಿಯಲ್ಲಿ ಮಾಡುತ್ತಾರೋ ಅಂತಹ ಸರ್ವೇಯರ್‌ಗಳ ಮೂರು ತಿಂಗಳ ಕೆಲಸಗಳ ಸರಾಸರಿಯನ್ನು ಲೆಕ್ಕಾಚಾರ ಮಾಡಿ, ಅಂತಹವರ ಪರವಾನಗಿಯನ್ನು ರದ್ದುಗೊಳಿಸುವಂತೆ ಆಯುಕ್ತರಿಗೆ ಪತ್ರ ಬರೆಯಬೇಕೆಂದು, ಇದರಿಂದ ಮೋಜಣಿದಾರರ ಸಂಖ್ಯೆ ಕಡಿಮೆಯಾಗಿ ಕಾರ್ಯಕ್ಷಮತೆಯನ್ನು ಹೆಚ್ಚಿಸಬಹುದೆಂದು ಸಭೆಯಲ್ಲಿ ತಿಳಿಸಲಾಯಿತು.

ಉಪನಿರ್ದೇಶಕರು ಈ ಬಗ್ಗೆ ಕ್ರಮ ವಹಿಸುತ್ತಿರುವುದಾಗಿ ಸಭೆಗೆ ತಿಳಿಸಿದರು.

(ಕ್ರಮ: ಅಪರ ಜಿಲ್ಲಾಧಿಕಾರಿಗಳು ಮತ್ತು ಭೂ ದಾಖಲೆಗಳ ಉಪನಿರ್ದೇಶಕರು)

11 **ನ್ಯಾಯಾಲಯಗಳ ಪ್ರಕರಣಗಳ ಬಗ್ಗೆ:**

ಈಗಾಗಲೇ ನಿಗದಿಪಡಿಸಿರುವ ಗುರಿಯಂತೆ ಪ್ರಕರಣಗಳನ್ನು ಇತ್ಯರ್ಥಪಡಿಸಬೇಕೆಂದು ಹಾಗೂ ಹಲವಾರು ವರ್ಷಗಳಿಂದ ಬಾಕಿ ಇರುವ 79 ಎ ಬಿ ಪ್ರಕರಣಗಳನ್ನು ಆದ್ಯತೆ ಮೇರೆಗೆ ಕೈಗೆತ್ತಿಕೊಂಡು ಇತ್ಯರ್ಥಗೊಳಿಸುವ ಬಗ್ಗೆ ಕ್ರಮ ವಹಿಸಲು ಸೂಚಿಸಿದರು.

(ಕ್ರಮ: ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಉತ್ತರ/ದಕ್ಷಿಣ ಹಾಗೂ ಎಲ್ಲಾ ತಹಶೀಲ್ದಾರ್‌ಗಳು)

12 **ಸ್ವಚ್ಛ ಭಾರತ್ ಮಿಷನ್:**

ಈಗಾಗಲೇ 9 ಕಡೆಗಳಲ್ಲಿ ಜಾಗಗಳನ್ನು ನೀಡಿದ್ದು, ಉಳಿದ ಕಡೆಗಳಲ್ಲಿ 1 ತಿಂಗಳ ಒಳಗಾಗಿ ನೀಡಲು ಸಂಬಂಧಪಟ್ಟ ತಹಶೀಲ್ದಾರ್‌ರವರಿಗೆ ಸೂಚನೆ ನೀಡಿ, ಅವರಿಂದ ಪ್ರಸ್ತಾವನೆ ಬಂದ ತಕ್ಷಣ ಕಲಂ 71ರಡಿ ಜಾಗವನ್ನು ಕಾಯ್ದಿರಿಸುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಯಿತು.

(ಕ್ರಮ: ಎಲ್ಲಾ ತಹಶೀಲ್ದಾರ್‌ಗಳು, ಉಪವಿಭಾಗಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಅಪರ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು)

13 **ರಕ್ಷಣಾ ಇಲಾಖೆಗೆ ಭೂಮಿಯನ್ನು ನೀಡುವ ಬಗ್ಗೆ:**

ಈ ಬಗ್ಗೆ ಎಲ್ಲಾ ತಹಶೀಲ್ದಾರ್‌ಗಳು ರಕ್ಷಣಾ ಇಲಾಖೆಗೆ ಜಾಗವನ್ನು ನೀಡುವ ಬಗ್ಗೆ ರಕ್ಷಣಾ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯ ಮಾಡಿಕೊಂಡು, ಅವರಿಗೆ ಅವಶ್ಯವಿರುವ ಜಾಗವನ್ನು ಗುರುತಿಸಿ ನೀಡುವಲ್ಲಿ ಹೆಚ್ಚಿನ ಗಮನಹರಿಸಿ, ಪ್ರಸ್ತಾವನೆಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕೆಂದು ಸಭೆಯಲ್ಲಿ ಸೂಚಿಸಲಾಯಿತು.

(ಕ್ರಮ: ಎಲಾ ತಹಶೀಲ್ದಾರ್‌ಗಳು, ಜಿಲ್ಲಾಧಿಕಾರಿಗಳು)

14 **ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ:**

ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಅವಶ್ಯವಾದ 8 ನಿವೇಶಗಳನ್ನು ಗುರುತಿಸಿ, ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಎಲ್ಲಾ ತಹಶೀಲ್ದಾರ್‌ಗಳಿಗೆ ಸೂಚನೆಯನ್ನು ನೀಡಲಾಯಿತು.

ಮುಂದಿನ ಸಭೆಗೆ ಬಿಬಿಎಂಪಿಯ ಮುಖ್ಯ ಆರೋಗ್ಯಾಧಿಕಾರಿಗಳು ಹಾಜರಾಗುವಂತೆ ಕ್ರಮ ವಹಿಸಲು ಅಪರ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.

(ಕ್ರಮ: ಎಲ್ಲಾ ತಹಶೀಲ್ದಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮತ್ತು ಅಪರ ಜಿಲ್ಲಾಧಿಕಾರಿಗಳು)

**15 ಶಿಕ್ಷಣ ಇಲಾಖೆ:**

ಮುಂಬರಲಿರುವ ಪಿ.ಯು.ಸಿ.. ಮತ್ತು ಎಸ್.ಎಸ್.ಎಲ್.ಸಿ ಪರೀಕ್ಷೆಗಳ ಕುರಿತು ಸ್ಕ್ವಾಡ್‌ಗಳ ರಚನೆಯ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ, ವಿವಿಧ ಇಲಾಖೆಗಳ ಗ್ರೇಡ್–2 ಅಧಿಕಾರಿಗಳನ್ನು ಅಬ್‌ಸರ್ವರ್ ಆಗಿ ನೇಮಿಸುವ ಕುರಿತು ಕ್ರಮ ವಹಿಸುವಂತೆ ಹಾಗೂ ಮೊಬೈಲ್ ಸ್ಕ್ವಾಡ್‌ಗಳ ಕುರಿತು ನಿರ್ದಿಷ್ಟವಾದ ಕ್ರಮಗಳನ್ನು ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಲಾಯಿತು.

ಬೆಂಗಳೂರು ನಗರ ಜಿಲ್ಲೆಗೆ ಪಿ.ಯು.ಸಿ ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ ತರಲು ಶಿಕ್ಷಣ ಇಲಾಖೆಯವರಿಗೆ ಸೂಕ್ತ ಕ್ರಮವಹಿಸಲು ಸೂಚಿಸಲಾಯಿತು.

(ಕ್ರಮ: ಡಿಡಿಪಿಐ, ಉತ್ತರ ಮತ್ತು ದಕ್ಷಿಣ, ಶಿಕ್ಷಣ ಇಲಾಖೆ, ಅಪರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು)

ಅಂತಿಮವಾಗಿ ಮುಂದಿನ ಸಭೆಗೆ ಎಲ್ಲಾ ಜಿಲ್ಲಾ ಅಧಿಕಾರಿಗಳು ತಪ್ಪದೆ ಹಾಜರಾಗುವಂತೆ ಸೂಚಿಸಿ, ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

(ತುಷಾರ್ ಗಿರಿನಾಥ್)

**ಮಾನ್ಯ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು**
**ಮತ್ತು ಒಳಚರಂಡಿ ಮಂಡಳಿ ಹಾಗೂ**
**ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,**
**ಬೆಂಗಳೂರು ನಗರ ಜಿಲ್ಲೆ.**

# ಜಿಲ್ಲಾಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರ.ಸಂ | ಅಂಶಗಳು | |
|---|---|---|
| 1 | ಉಸ್ತುವಾರಿಜಿಲ್ಲೆಯ ಹೆಸರು | ಬೆಂಗಳೂರು ನಗರಜಿಲ್ಲೆ |
| 2 | ಜಿಲ್ಲಾಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಸನ್ಮಾನ್ಯತುಷಾರ್‌ಗಿರಿನಾಥ್.ಭಾ.ಆ.ಸೇ.ರವರು. |
| 3 | ಪ್ರವಾಸಕ್ಕೆಗೊಂಡ ದಿನಾಂಕ | 26–02–2020 |

| | | |
|---|---|---|
| | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ | |
| 4 | ಜಿಲ್ಲಾಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | 1. ಕುಂಬಳಗೋಡು ಗ್ರಾಮದ ಬಳಿಯಲ್ಲಿ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ವತಿಯಿಂದ 110 ಲಕ್ಷ.ರೂಗಳ ವೆಚ್ಚದಲ್ಲಿ ನರ್ಬಾಡ್ ಯೋಜನೆಯಡಿಯಲ್ಲಿ ನಿರ್ಮಾಣವಾಗಿರುವ ಸೇತುವೆ ಮತ್ತು ಸಂಪರ್ಕ ರಸ್ತೆ ಕಾಮಗಾರಿಗೆ ಸಂಬಂಧಿಸಿದಂತೆ ಮಾಹಿತಿ ನೀಡುವ ಫಲಕವನ್ನು ಹಾಕಿಸದೆ ಇರುವ ಅಂಶವನ್ನು ಗಮನಿಸಿದರು.<br>2. ಅಜ್ಜನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಬ್ಯಾಲಾಳು ಗ್ರಾಮದಲ್ಲಿ ಮಾಗಡಿ ಅಭಿವೃದ್ಧಿ ಪ್ರಾಧಿಕಾರದ ಅನುದಾನದಿಂದ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ ಅನುಷ್ಠಾನಗೊಂಡಿರುವ ಅಭಿವೃದ್ಧಿ ಕಾಮಗಾರಿ ಬಗ್ಗೆ ಮಾಹಿತಿ ನೀಡುವ ಫಲಕವನ್ನು ಹಾಕಿಸದೆ ಇರುವ ಅಂಶವನ್ನು ಗಮನಿಸಿದರು.<br>3. ಚುಂಚನಕುಪ್ಪೆ ಗ್ರಾಮ ಪಂಚಾಯಿತಿ ಕಛೇರಿಗೆ ಭೇಟಿ ನೀಡಿ ಅಲ್ಲಿನ ದಾಖಲೆಗಳ ನಿರ್ವಹಣೆಯನ್ನು ಗಮನಿಸಿದರು.<br>4. ಹೊನ್ನಿಗಾನಹಟ್ಟಿಯಲ್ಲಿರುವ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗೆ ಭೇಟಿ ನೀಡಿದ ಮಾನ್ಯರು ಮೊದಲ ಚಾವಣಿಯ ಮೇಲ್ಭಾಗದಲ್ಲಿ ಅಡ್ಡಗೋಡೆಯನ್ನು ನಿರ್ಮಿಸದೆ ಇರುವ ವಿಚಾರವನ್ನು ಗಮನಿಸಿದರು.<br>5. ಚನ್ನೇನಹಳ್ಳಿ ಗ್ರಾಮದಲ್ಲಿ ಪ್ರಧಾನಮಂತ್ರಿಯವರ ಆದರ್ಶ ಗ್ರಾಮ ಯೋಜನೆಯಡಿ ನಿರ್ಮಾಣ ಆಗಿರುವ ರಸ್ತೆ ಕಾಮಗಾರಿಯ ಗುಣಮಟ್ಟವನ್ನು ಗಮನಿಸಿದರು.<br>6. ತಾವರೆಕೆರೆ ಗ್ರಾಮದಲ್ಲಿ ಅನುಷ್ಠಾನಗೊಂಡಿರುವ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಪರಿಶೀಲಿಸಿದರು. |
| 5 | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ<br> | 1. ಮೇಲ್ಕಂಡ ಕ್ರಮ ಸಂಖ್ಯೆ 1 ಮತ್ತು 2 ರ ಕಾಮಗಾರಿಗಳ ಸ್ಥಳದಲ್ಲಿ ಕಾಮಗಾರಿಯ ಬಗ್ಗೆ ಮಾಹಿತಿ ನೀಡುವ ಫಲಕವನ್ನು ಅಳವಡಿಸುವಂತೆ ಸೂಚಿಸಿದರು.<br>2. ಹೊನ್ನಿಗಾನಹಟ್ಟಿ ಕರ್ನಾಟಕ ಪಬ್ಲಿಕ್ ಶಾಲೆಯ ಮೊದಲನೇ ಚಾವಣಿಯ ಮೇಲ್ಭಾಗದಲ್ಲಿ ಕಿರುಗೋಡೆಯನ್ನು ಶೀಘ್ರವಾಗಿ ಮಕ್ಕಳ |

| | | |
|---|---|---|
| | | ಹಿತದೃಷ್ಟಿಯಿಂದ ಕಟ್ಟಿಸಬೇಕೆಂದು ನಿರ್ದೇಶಿಸಿದರು.<br>3. ಸಂಸದ್ ಆದರ್ಶ ಗ್ರಾಮ ಯೋಜನೆಯಡಿ ಅನಧಿಕೃತ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಮಾಡುವುದು ಸೂಕ್ತವಲ್ಲ ಎಂದು ತಿಳಿಯಪಡಿಸಿದರು.<br>4. ಕೆರೆಯ ದಂಡೆಯಿಂದ 90 ಅಡಿಗಳವರೆಗೆ ಬಫರ್ ಜೋನ್ ಜಾಗವಿದ್ದು ಈ ಅಂತರದ ನಂತರದಲ್ಲಿ ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡುವಂತೆ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ನಿರ್ದೇಶನ ನೀಡಿದರು. |
| | ಕ್ಷೇತ್ರ ವೀಕ್ಷಣೆ | -- |

| ಕ್ರಮ ಸಂಖ್ಯೆ | ಭೇಟಿ ನೀಡಿದತಾಲ್ಲೂಕು/ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
|---|---|---|---|
| 6 | ಬೆಂಗಳೂರು ದಕ್ಷಿಣ ತಾಲ್ಲೂಕು<br>ಹಳ್ಳಿಗಳು:-<br>1. ಕುಂಬಳಗೂಡು<br>2. ತಾವರೆಕೆರೆ<br>3. ಅಜ್ಜನಹಳ್ಳಿ<br>4. ಚುಂಚನಕುಪ್ಪೆ<br>5. ಚನ್ನೇನಹಳ್ಳಿ<br>6. ಹೊನ್ನಿಗಾನಹಟ್ಟಿ<br>7. ಬ್ಯಾಲಾಳು<br>ಈ ಗ್ರಾಮಗಳಿಗೆ ಭೇಟಿ ನೀಡಿದರು. | 1. ಕುಂಬಳಗೂಡು ಗ್ರಾಮ ಪಂಚಾಯಿತಿ.<br>2. ಬ್ಯಾಲಾಳು ಗ್ರಾಮ.<br>3. ಚುಂಚನಕುಪ್ಪೆ ಗ್ರಾಮ ಪಂಚಾಯಿತಿ.<br>4. ಹೊನ್ನಿಗಾನಹಟ್ಟಿ ಗ್ರಾಮದ ಸಾರ್ವಜನಿಕ ಶಾಲೆ.<br>5. ಚನ್ನೇನಹಳ್ಳಿ ಗ್ರಾಮ ಪಂಚಾಯಿತಿ ಕೇಂದ್ರ.<br>6. ತಾವರೆಕೆರೆ ಗ್ರಾಮದ ಕೆರೆ. | 1. ಕುಂಬಳಗೂಡಿನಲ್ಲಿ ಅನುಷ್ಟಾನಗೊಂಡಿರುವ ಮತ್ತು ಬ್ಯಾಲಾಳು ಕೆರೆ ಕಾಮಗಾರಿಗಳ ಬಗ್ಗೆ ವಿವರ ನೀಡುವ ಫಲಕವನ್ನು ಅಳವಡಿಸದಿರುವ ಅಂಶವನ್ನು ಗಮನಿಸಿದರು.<br>2. ಹೊನ್ನಿಗಾನಹಟ್ಟಿ ಸಾರ್ವಜನಿಕ ಶಾಲೆಯ ಭೋದನೆಯ ಗುಣಮಟ್ಟ ಮತ್ತು ಎಸ್.ಎಸ್.ಎಲ್.ಸಿ ಫಲಿತಾಂಶ ಇತ್ಯಾದಿಗಳನ್ನು ಗಮನಿಸಿದರು.<br>3. ಚನ್ನೇನಹಳ್ಳಿ ಗ್ರಾಮದಲ್ಲಿ ನಿರ್ಮಾಣವಾಗಿರುವ ಟಾರ್ ರಸ್ತೆ ಗುಣಮಟ್ಟವನ್ನು ಪರಿಶೀಲಿಸಿದರು.<br>4. ತಾವರೆಕೆರೆ ಗ್ರಾಮದ ಕೆರೆ ಅಭಿವೃದ್ಧಿಯನ್ನು ಗಮನಿಸಿದರು. |
| 7 | ಇತರೆ ವಿಷಯಗಳು | - | - |

(ತುಷಾರ್ ಗಿರಿ ನಾಥ್)

**ದಿನಾಂಕ: 26-02-2020 ರಂದು ಮಾನ್ಯ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಶ್ರೀ ತುಷಾರ್ ಗಿರಿನಾಥ್ ಭಾ.ಆ.ಸೇ., ರವರ ಅಧ್ಯಕ್ಷತೆಯಲ್ಲಿ ಜರುಗಿದ ಬೆಂಗಳೂರು ನಗರ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭಾ ನಡವಳಿ.**

**ಹಾಜರಿದ್ದವರು: ಅನುಬಂಧ -1ರಲ್ಲಿ ಲಗತ್ತಿಸಿದೆ.**

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಅಧ್ಯಕ್ಷರು, ಬೆಂಗಳೂರು ಜಲ ಮಂಡಳಿ ಹಾಗೂ ಬೆಂಗಳೂರು ನಗರ ಜಿಲ್ಲೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಸಭೆಯನ್ನು ಪ್ರಾರಂಭಿಸಿದರು.

**ಕಂದಾಯ ಇಲಾಖೆ:**

1 2019-20 ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಅನುದಾನದಡಿ ಕುಡಿಯುವ ನೀರಿನ ಪುನಶ್ಚೇತನ **ಕಾಮಗಾರಿಗಳಿಗೆ ಅನುಮೋದನೆ ನೀಡಿದ ಹಾಗೂ ಪ್ರಗತಿಯ ಕುರಿತು:**

ಒಟ್ಟು 66 ಕಾಮಗಾರಿಗಳನ್ನು ಪೂರ್ಣಗೊಳಿಸಲು ಈಗಾಗಲೇ ಶೇಕಡಾ 50ರಷ್ಟು ಹಣವನ್ನು ಬಿಡುಗಡೆ ಮಾಡಿದ್ದು, ಪ್ರಗತಿಯಲ್ಲಿದ್ದ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಬಳಕೆ ಪ್ರಮಾಣ ಪತ್ರವನ್ನು(Utilization Certificate) ಜಿಲ್ಲಾಧಿಕಾರಿಗಳ ಕಛೇರಿಗೆ ಸಲ್ಲಿಸುವಂತೆಯೂ, ಉಳಿದ ಶೇಕಡಾ 50ರಷ್ಟು ಮೊತ್ತವನ್ನು ಮಾರ್ಚ್-2020 ರ ಮೊದಲ ವಾರದಲ್ಲಿ ಬಿಡುಗಡೆ ಮಾಡುವಂತೆಯೂ ಅಪರ ಜಿಲ್ಲಾಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಲಾಯಿತು.

(ಕ್ರಮ: ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಹಾಗೂ ಅಪರ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ)

## 2 Fodder Availability:

ಬರುವ ಬೇಸಿಗೆ ಕಾಲಕ್ಕೆ ನೀರಿನ ಸಮಸ್ಯೆ ಎದುರಾಗಬಹುದಾದ ಸಾಧ್ಯತೆ ಇರುವುದರಿಂದ ಸರ್ಕಾರದಿಂದ ಬರ ಪರಿಹಾರಕ್ಕೆಂದು ಬಿಡುಗಡೆಯಾದ ಅನುದಾನದ ಉಳಿದ ಹಣವನ್ನು ಬಳಸಿಕೊಳ್ಳುವಂತೆ ಸೂಚಿಸಲಾಯಿತು.

(ಕ್ರಮ: ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾಧಿಕಾರಿಗಳು)

## 3 Fodder Bank:

ಕಳೆದ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಉಳಿದಿರುವ 2.38 ಟನ್ ಮೇವನ್ನು ಸುತ್ತ ಮುತ್ತ ಜಿಲ್ಲೆಗಳಿಗೆ ಪತ್ರ ಬರೆದು ಅವರಿಗೆ ಅವಶ್ಯಕತೆ ಇದ್ದಲ್ಲಿ ನೀಡುವಂತೆ ಸೂಚಿಸಿದ ಮೇರೆಗೆ ಉಳಿದ ಜಿಲ್ಲೆಗಳಿಗೆ ಪತ್ರ ಬರೆದಿದ್ದು, ಅವರಿಂದ ಯಾವುದೇ ಬೇಡಿಕೆ ಪತ್ರ ಬಾರದೆ ಇರುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು.

4 **ಬೆಂಗಳೂರು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯ ಅನುದಾನದ ಬಗ್ಗೆ:**

ಆನೇಕಲ್ ಪುರಸಭೆಗೆ ಕನಿಷ್ಠ 6.75 ಎಂ.ಎಲ್.ಡಿ. ನೀರಿನ ಬೇಡಿಕೆ ಇದ್ದು, ಬಿ.ಡಬ್ಲ್ಯೂಎಸ್.ಎಸ್.ಬಿ.ಯಿಂದ ಕೇವಲ 2 ಎಂಎಲ್‌ಡಿ ಸರಬರಾಜು ಆಗುತ್ತಿದ್ದು, ಇನ್ನು ಹೆಚ್ಚಿನ ಎಂಎಲ್‌ಡಿ ಸರಬರಾಜು ಮಾಡಬೇಕೆಂದು ಸಭೆಯನ್ನು ಕೋರಿದರು.

ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹರಿಸುವ ಕುರಿತು ಈಗ ಮಾಡಿಕೊಂಡಿರುವ ವ್ಯವಸ್ಥೆಯ ಬಗ್ಗೆ ಹಾಗೂ ಮುಂದಿನ ಮೂರು ತಿಂಗಳಲ್ಲಿ ಕುಡಿಯುವ ನೀರಿನ ಕೊರತೆಯನ್ನು ನೀಗಿಸಲು ಮಾಡಬಹುದಾದ ಯೋಜನೆಗಳ ಕುರಿತು ಒಂದು ಕ್ರಿಯಾ ಯೋಜನೆಯನ್ನು ರೂಪಿಸಿಕೊಂಡು, ಜಿಲ್ಲಾಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿ, ಅನುದಾನದ ಕೊರತೆ ಇದ್ದಲ್ಲಿ ಬರಪರಿಹಾರ ನಿಧಿಯಿಂದ ಬಳಸಬಹುದೆಂದು ಮಾನ್ಯ ಅಧ್ಯಕ್ಷರು ಸೂಚಿಸಿದರು.

(ಕ್ರಮ: ಡಿಯುಡಿಸಿ ಅಧಿಕಾರಿಗಳು, ಎಲ್ಲಾ ಪುರಸಭೆ/ನಗರಸಭೆ ಅಧಿಕಾರಿಗಳು ಹಾಗೂ ಅಪರ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು)

5 **ಸ್ಥಳೀಯ ಸಂಸ್ಥೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ನಿರ್ವಹಿಸಲಾಗುತ್ತಿರುವ ಟ್ಯಾಂಕರ್‌ಗಳ ಮಾಹಿತಿ:**

ಸೂರ್ಯಸಿಟಿಗೆ ಬಿಡಬ್ಲ್ಯೂಎಸ್‌ಎಸ್‌ಬಿ ವತಿಯಿಂದ ಸರಬರಾಜು ಮಾಡುವ/ಮಾಡುತ್ತಿರುವ 15 ಎಂಎಲ್‌ಡಿಯಿಂದ ಸದ್ಯಕ್ಕೆ ಚಂದಾಪುರ, ಬೊಮ್ಮಸಂದ್ರ ಇವರಿಗೆ ಸರಬರಾಜು ಮಾಡುವ ಬಗ್ಗೆ ಹಾಗೂ ಹೆಬ್ಬಗೋಡಿ ನಗರಸಭೆಗೆ 1 ಎಂಎಲ್‌ಡಿಯನ್ನು ನೀಡುವಂತೆಯೂ ಹಾಗೂ ಇದನ್ನು ನೇರವಾಗಿ ಹೆಬ್ಬಗೋಡಿ ಪೊಲೀಸ್ ಠಾಣೆಯ ಪಕ್ಕದಲ್ಲಿ ಒಂದು ಡಯಾಮೀಟರ್ ಅಳವಡಿಸುವಂತೆ ಸಭೆಯನ್ನು ಕೋರಿದರು.

6. **ನಗರ ಸ್ಥಳೀಯ ಸಂಸ್ಥೆಯಲ್ಲಿ ಉಳಿದ ಯೋಜನೆಗಳಡಿ ಆಗಿರುವ ಪ್ರಗತಿ ವಿವರಗಳು ಈ ಕೆಳಕಂಡಂತಿರುತ್ತವೆ:**

1) ಎಸ್‌ಬಿಎಂ ಯೋಜನೆಯಲ್ಲಿ 63,69 ಲಕ್ಷಗಳ ಅನುದಾನವಿದ್ದು, ಇದರಲ್ಲಿ 54.29 ಲಕ್ಷಗಳು ಖರ್ಚಾಗಿದ್ದು, ಪ್ರಗತಿಯು ಶೇಕಡ 85.11 ಸರಾಸರಿಯಾಗಿರುತ್ತದೆ.

2) ಸ್ವಚ್ಛ ಭಾರತ ಯೋಜನೆಯಡಿ ಒಟ್ಟು 622 ಶೌಚಾಲಯಗಳ ನಿರ್ಮಾಣದ ಗುರಿ ಇದ್ದು, ಇದರಲ್ಲಿ 581 ಪೂರ್ಣಗೊಂಡಿದ್ದು, 19 ಕಾಮಗಾರಿ ಪ್ರಗತಿಯಲ್ಲಿದ್ದು,14 ಕಾಮಗಾರಿಗಳನ್ನು ರದ್ದುಪಡಿಸಲು ಕ್ರಮ ವಹಿಸಲಾಗಿದ್ದು, ಇನ್ನು 8 ಕಾಮಗಾರಿಗಳು ಪ್ರಾರಂಭವಾಗಬೇಕಾಗಿದ್ದು, ಒಟ್ಟಾರೆ ಶೇಕಡಾ 93.40 ರಷ್ಟು ಪ್ರಗತಿ ಸಾಧಿಸಿದೆ.

3) ಜಲಶಕ್ತಿ ಅಭಿಯಾನದ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ನಗರಸಭೆ/ಪುರಸಭೆಗಳಿಗೆ ಅವಶ್ಯವಿರುವ ಒಟ್ಟು 61.50 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರಿಗೆ ಪತ್ರ ಬರೆದಿರುವುದಾಗಿ ಸಭೆಗೆ ತಿಳಿಸಿದರು.

4) ನಗರೋತ್ಥಾನ ಯೋಜನೆಯಡಿ 81 ಕಾಮಗಾರಿಗಳ ಭೌತಿಕ ಗುರಿ ನಿಗಧಿಯಾಗಿದ್ದು, 69 ಪೂರ್ಣಗೊಂಡಿದ್ದು, 12 ಪ್ರಗತಿಯಲ್ಲಿದ್ದು, ಒಟ್ಟಾರೆ ಶೇಕಡಾ 98ರಷ್ಟು ಪ್ರಗತಿ ಸಾಧಿಸಿರುವುದಾಗಿ ತಿಳಿಸಿದರು.

5) ಎಸ್‌ಎಫ್‌ಸಿ ಯೋಜನೆಯಡಿ 2019-20ನೇ ಸಾಲಿನಲ್ಲಿ ಶೇಕಡಾ76.40 ಪ್ರಗತಿ ಸಾಧಿಸಿರುವುದನ್ನು ಸಭೆಯಲ್ಲಿ ಗಮನಿಸಲಾಯಿತು.

6) ಮುಂದುವರೆದು ಆನೇಕಲ್ ಪುರಸಭಾ ವ್ಯಾಪ್ತಿಯಲ್ಲಿ ಒಂದು ಇಂದಿರಾ ಕ್ಯಾಂಟೀನ್ ಇದ್ದು ಇದು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡಿದರು.

7 <u>**ಸಾಮಾಜಿಕ ಭದ್ರತಾ ಯೋಜನೆಗಳು:**</u>

**ಅ) ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ:**

ಈ ಯೋಜನೆಗಳಡಿ ಬಂದಿರುವ ಅರ್ಜಿಗಳನ್ನು ಸಕಾಲದಡಿ ವಿಧಿಸಿರುವ ಕಾಲಮಿತಿಗಿಂತ ಮೊದಲೇ ಅಂದರೆ 15 ದಿನಗಳೊಳಗಾಗಿ ಬಂದ ಅರ್ಜಿಗಳನ್ನು ಬಿಟ್ಟು, ಉಳಿದವುಗಳನ್ನು ವಿಲೇವಾರಿ ಮಾಡಲು ಸೂಚಿಸಲಾಯಿತು.

ತಹಶೀಲ್ದಾರ್, ಉತ್ತರ ತಾಲ್ಲೂಕು ಇವರು ದಿನಾಂಕ:29/02/2020ರೊಳಗಾಗಿ ಇತ್ತೀಚೆಗೆ 15 ದಿನಗಳೊಳಗಾಗಿ ಬಂದ ಅರ್ಜಿಗಳನ್ನು ಉಳಿಸಿಕೊಂಡು, ವಿವಿಧ ಯೋಜನೆಗಳಡಿ ಬಾಕಿ ಇರುವ ಹಳೆಯ ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡುವಂತೆ ಜವಾಬ್ದಾರಿಯನ್ನು ನೀಡಿ, ಈ ಬಗ್ಗೆ ಮೇಲುಸ್ತುವಾರಿ ವಹಿಸುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

ಶ್ರೀ ಮಹೇಂದ್ರ, ತಹಶೀಲ್ದಾರ್ (ಗ್ರೇಡ್-2)ಇವರು ಪದೇ ಪದೇ ಕಛೇರಿಗೆ ಗೈರುಹಾಜರಾಗುವುದನ್ನು ಉಪವಿಭಾಗಾಧಿಕಾರಿಗಳು, ಉತ್ತರ ಉಪವಿಭಾಗ ಇವರು ಸಭೆಯಲ್ಲಿ ತಿಳಿಸಿದಾಗ, ಅವರ ಗೈರು ಹಾಜರಿ ಬಗ್ಗೆ ಜಿಲ್ಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಬೇಕೆಂದು, ಈ ಬಗ್ಗೆ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಲಾಯಿತು.

(ಕ್ರಮ: ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು, ಉಪವಿಭಾಗಾಧಿಕಾರಿಗಳು, ಉತ್ತರ ಉಪವಿಭಾಗ ಮತ್ತು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ)

**ಆ) ಸಂಧ್ಯಾ ಸುರಕ್ಷಾ ಯೋಜನೆ, ಮನಸ್ವಿನಿ ಯೋಜನೆ, ಮೈತ್ರಿ ಯೋಜನೆ, ಆದರ್ಶ ವಿವಾಹ ಯೋಜನೆ ಮತ್ತು ರೈತ ಪತ್ನಿ ವಿಧವಾ ವೇತನ, ಆಸಿಡ್ ದಾಳಿಗೆ ಒಳಗಾದ ಮಹಿಳೆ/ಹೆಣ್ಣುಮಕ್ಕಳ ಸಹಾಯಧನ ಯೋಜನೆ:**

ಮೇಲ್ಕಂಡ ವಿವಿಧ ಯೋಜನೆಗಳಡಿ ಉಳಿದಿರುವ ಬಾಕಿ ಅರ್ಜಿಗಳನ್ನು ದಿನಾಂಕ:29/02/2020 ರೊಳಗಾಗಿ ವಿಲೇವಾರಿ ಮಾಡುವಂತೆ ಎಲ್ಲಾ ತಾಲ್ಲೂಕು ತಹಶೀಲ್ದಾರ್‌ಗಳಿಗೆ ತಿಳಿಸುತ್ತಾ, ಈ ಬಗ್ಗೆ ಮೇಲುಸ್ತುವಾರಿ ವಹಿಸುವಂತೆ ಎರಡು ಉಪವಿಭಾಗದ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು. 2020ರ ಮಾರ್ಚ್ ಮೊದಲ ವಾರದಲ್ಲಿ ಈ ಬಗ್ಗೆ ವರದಿ ನೀಡುವಂತೆ ಅಪರ ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ನೀಡಲಾಯಿತು.

(ಕ್ರಮ: ಅಪರ ಜಿಲ್ಲಾಧಿಕಾರಿಗಳು, ಎಲ್ಲಾ ತಾಲ್ಲೂಕು ತಹಶೀಲ್ದಾರ್‌ಗಳು)

**ಇ) ಅಂತ್ಯ ಸಂಸ್ಕಾರ ಯೋಜನೆ**

ನಗರ ವ್ಯಾಪ್ತಿಯಲ್ಲಿ ಮರಣ ಹೊಂದಿದ ವ್ಯಕ್ತಿಗಳಿಗೆ ಬಿಬಿಎಂಪಿ ವತಿಯಿಂದ ನೀಡುವ ಮರಣ ಪ್ರಮಾಣ ಪತ್ರವನ್ನು ಪಡೆದು ಅದನ್ನು ತಾಲ್ಲೂಕು /ನಾಡ ಕಛೇರಿಯಲ್ಲಿರುವ ದಾಖಲೆಗಳನ್ನು ಪರಿಶೀಲಿಸಿ, ಲಿಂಕ್ ಮಾಡಿದಲ್ಲಿ ಮರಣಹೊಂದಿದ ವ್ಯಕ್ತಿಯು ಬಿಪಿಎಲ್ ಕಾರ್ಡ್‌ದಾರರ ವಿಳಾಸದಲ್ಲಿ ಕಂಡು ಬಂದಲ್ಲಿ, ಅವರ ಆಧಾರ ಸಂಖ್ಯೆಯನ್ನು, ಓಟರ್ ಕಾರ್ಡ್ ನಂಬರ್‌ನ್ನು ಹೊಂದಾಣಿಕೆ ಮಾಡಿಕೊಂಡು ಅಂತಹವರಿಗೆ

ಸರ್ಕಾರದಿಂದ ನೀಡಬಹುದಾದ ಅಂತ್ಯ ಸಂಸ್ಕಾರದ ಹಣವನ್ನು ಆರ್‌ಟಿಜಿಎಸ್ ಮುಖಾಂತರ ಅವರ ಬ್ಯಾಂಕ್ ಖಾತೆಗೆ ಪಾವತಿಸುವ ಬಗ್ಗೆ ಮುಂದಿನ ದಿನಗಳಲ್ಲಿ ಕ್ರಮ ವಹಿಸಬೇಕೆಂದು, ಈ ಬಗ್ಗೆ ಜಿಲ್ಲಾಧಿಕಾರಿಗಳು, ಎಲ್ಲಾ ತಾಲ್ಲೂಕು ಅಧಿಕಾರಿಗಳು ಬಿಬಿಎಂಪಿ ಅಧಿಕಾರಿಗಳೊಂದಿಗೆ ಸಮನ್ವಯ ಸಭೆಯನ್ನು ಕರೆದು ಪ್ರಗತಿಯನ್ನು ಸಾಧಿಸಬೇಕೆಂದು ಸೂಚಿಸಲಾಯಿತು.

( ಕ್ರಮ: ಎಲ್ಲಾ ತಹಶೀಲ್ದಾರ್, ಬಿಬಿಎಂಪಿ ಅಧಿಕಾರಿಗಳು, ಜಿಲ್ಲಾಧಿಕಾರಿಗಳು)

**ಈ) ರಾಷ್ಟ್ರೀಯ ಕುಟುಂಬ ನೆರವು ಯೋಜನೆ;**

ಈ ಯೋಜನೆಯಲ್ಲಿ ರೂ.28 ಲಕ್ಷಗಳು ಬಾಕಿ ಇದ್ದು, ಇದನ್ನು ಅಂತ್ಯ ಸಂಸ್ಕಾರ ಯೋಜನೆಯಲ್ಲಿ ಈಗಾಗಲೇ ನೀಡಿರುವಂತಹ ಸಲಹೆಗಳನ್ನು ಅಳವಡಿಸಿಕೊಂಡು, ಡೇಟಾ ಬೇಸ್ ಲಿಂಕಿಂಗ್ ಮಾಡುವಂತೆ ಸೂಚನೆಯನ್ನು ನೀಡಿದರು. ಇದರಿಂದ ಕುಟುಂಬಕ್ಕೆ ಆಧಾರ್‌ವಾಗಿದ್ದ ವ್ಯಕ್ತಿ ಮೃತಪಟ್ಟಲ್ಲಿ ಅಂತಹವರ ಪತ್ನಿಗೆ ವಿಧವಾ ವೇತನ ನೀಡುವ ಅವಕಾಶವಿದ್ದು, ಮುಂದಿನ ಸಭೆಯೊಳಗೆ ಈ ಸಲಹೆಗಳನ್ನು ಕಾರ್ಯಗತ ಮಾಡುವ ಬಗ್ಗೆ ಕ್ರಮ ವಹಿಸಬೇಕೆಂದು ಸೂಚಿಸಲಾಯಿತು.

(ಕ್ರಮ: ಎಲ್ಲಾ ತಹಶೀಲ್ದಾರ್, ಉಪವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು)

7 **ಬೆಂಗಳೂರು ನಗರ ಜಿಲ್ಲೆಯ ಆರ್.ಟಿ.ಸಿ.3 ಮತ್ತು 9 ಮಿಸ್‌ಮ್ಯಾಚ್:**

ದಿನಾಂಕ: 26/02/2020 ರವರೆಗೆ ಸುಮಾರು 21,106 ಅರ್ಜಿಗಳು ಬಾಕಿ ಇರುವುದನ್ನು ಗಮನಿಸಿ, ವಾರಕ್ಕೆ 100 ಪ್ರಕರಣಗಳನ್ನು ಕಡ್ಡಾಯವಾಗಿ ಮಾಡುವ ಗುರಿಯನ್ನು ನಿಗದಿಪಡಿಸುವಂತೆ, ಅದರಂತೆ ಅಗತ್ಯ ಕ್ರಮ ಕೈಗೊಳ್ಳಲು ಎಲ್ಲಾ ಉಪವಿಭಾಗಾಧಿಕಾರಿಗಳಿಗೆ ಸೂಚನೆ ನೀಡಲಾಯಿತು.

(ಕ್ರಮ: ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಮತ್ತು ದಕ್ಷಿಣ ಉಪವಿಭಾಗ)

8 **ಬೆಂಗಳೂರು ನಗರ ಜಿಲ್ಲೆಯ ಪೈಕಿ ಆರ್‌ಟಿಸಿ ಬಗ್ಗೆ:**

ಪೈಕಿ ಆರ್‌ಟಿಸಿಯಲ್ಲಿ ಎಲ್ಲಾ ತಹಶೀಲ್ದಾರ್‌ಗಳಿಗೆ ಗುರಿಯನ್ನು ನಿಗಧಿಪಡಿಸಲಾಗಿದ್ದು, ಈ ಮಾಹೆಯಲ್ಲಿ ಒಟ್ಟು 12442 ಮಾತ್ರ ಬಾಕಿ ಇರುವುದನ್ನು ಗಮನಿಸಿದ ಸಭೆಯು ಇವುಗಳನ್ನು ಸಹ ಆದ್ಯತೆಯ ಮೇರೆಗೆ ಕ್ರಮವಹಿಸುವಂತೆ ಸೂಚಿಸಲಾಯಿತು.

(ಕ್ರಮ: ಅಪರ ಜಿಲಾಧಿಕಾರಿಗಳು ಮತ್ತು ಎಲ್ಲಾ ತಹಶೀಲ್ದಾರ್‌ಗಳು, ಉಪವಿಭಾಗಾಧಿಕಾರಿಗಳು)

9 **ಬಾಕಿಯಿರುವ ಎಲ್ಲಾ ಪೋಡಿ ಪ್ರಕರಣಗಳ ವಿಲೇವಾರಿ:**

ಪೋಡಿ ಪ್ರಕರಣಗಳ ವಿಲೇವಾರಿಯ ಬಗ್ಗೆ ಪ್ರತಿ ಸರ್ವೇಯರಾ ತಿಂಗಳಲ್ಲಿ 20 ಪ್ರಕರಣಗಳನ್ನು ಮಾಡಲು ಸೂಚಿಸಲಾಯಿತು.

ತಾಲ್ಲೂಕಿನಲ್ಲಿ ಲಭ್ಯವಿರುವ ಸರ್ವೇಯರ್‌ಗಳಲ್ಲಿ ಇಬ್ಬರನ್ನು ತಹಶೀಲ್ದಾರ್‌ರವರು ಸೂಚಿಸುವ ಸರ್ವೆ ಕಾರ್ಯಗಳನ್ನು ಆದ್ಯತೆ ಮೇರೆಗೆ ನಿರ್ವಹಿಸುವಂತೆ ಸೂಚಿಸಲಾಯಿತು. ಮುಂದುವರೆದು ಈ ಬಗ್ಗೆ ಜಿಲ್ಲಾಧಿಕಾರಿಗಳು ಒಂದು ಆದೇಶವನ್ನು ಹೊರಡಿಸಬೇಕೆಂದು ಸಹ ತಿಳಿಸಲಾಯಿತು.

(ಕ್ರಮ: ಭೂ ದಾಖಲೆಗಳ ಉಪನಿರ್ದೇಶಕರು, ಜಿಲ್ಲಾಧಿಕಾರಿಗಳು)

ಸುಮಾರು 311 ಕೆರೆಗಳ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಈಗಾಗಲೇ ಸರ್ವೆ ಕಾರ್ಯ ಮುಗಿದಿದ್ದು, ಬೌಂಡರಿ ಗುರುತಿಸಿ, ಹದ್ದುಬಸ್ತು ಮಾಡುವ ವೇಳೆಯಲ್ಲಿ ತಹಶೀಲ್ದಾರ್ ಲಭ್ಯವಿಲ್ಲದೆ ಇದ್ದಲ್ಲಿ ಆಯಾ ಹೋಬಳಿಯ ರಾಜಸ್ವ ನಿರೀಕ್ಷಕರಾಗಲಿ, ಗ್ರಾಮ ಲೆಕ್ಕಿಗರಾಗಲಿ ಹಾಜರಿರುವ ಬಗ್ಗೆ ಕ್ರಮ

ವಹಿಸಬೇಕೆಂದು ಎಲ್ಲಾ ತಹಶೀಲ್ದಾರ್‌ಗಳಿಗೆ ಸಭೆಯಲ್ಲಿ ಸೂಚಿಸಲಾಯಿತು.

ಪ್ರತಿ ಮಾಹೆ ಒಟ್ಟು 10-15 ಕೆರೆಗಳ ಒತ್ತುವರಿಯನ್ನು ತಾಲ್ಲೂಕುವಾರು 2-3 ಕೆರೆಗಳನ್ನು ಗುರುತಿಸಿ, ಕೆರೆ ಒತ್ತುವರಿ ತೆರವುಗೊಳಿಸುವ ಕಾರ್ಯ ಕೈಗೊಳ್ಳಬೇಕೆಂದು ಜಿಲ್ಲಾ ಪಂಚಾಯತ್ ಅಧಿಕಾರಿಗಳಿಗೆ ಸಭೆಯಲ್ಲಿ ಸೂಚನೆ ನೀಡಲಾಯಿತು.

(ಕ್ರಮ: ಎಲ್ಲಾ ತಹಶೀಲ್ದಾರ್‌ಗಳು, ಜಿಲ್ಲಾ ಪಂಚಾಯತ್‌ನ ಸಂಬಂಧಪಟ್ಟ ಅಧಿಕಾರಿಗಳು)

**10 ಪರವಾನಗಿ ಹೊಂದಿದ ಭೂ ಮಾಪಕರಿಂದ ಮುಟೇಷನ್ ಸ್ಕೆಚ್ -11 ಇ:**

55 ಪರವಾನಗಿ ಹೊಂದಿದ ಭೂಮಾಪಕರಲ್ಲಿ ಯಾರು ಮೋಜಣಿ ಕರ್ತವ್ಯವನ್ನು ಮಂದಗತಿಯಲ್ಲಿ ಮಾಡುತ್ತಾರೋ ಅಂತಹ ಸರ್ವೇಯರ್‌ಗಳ ಮೂರು ತಿಂಗಳ ಕೆಲಸಗಳ ಸರಾಸರಿಯನ್ನು ಲೆಕ್ಕಾಚಾರ ಮಾಡಿ, ಅಂತಹವರ ಪರವಾನಗಿಯನ್ನು ರದ್ದುಗೊಳಿಸುವಂತೆ ಆಯುಕ್ತರಿಗೆ ಪತ್ರ ಬರೆಯಬೇಕೆಂದು, ಇದರಿಂದ ಮೋಜಣಿದಾರರ ಸಂಖ್ಯೆ ಕಡಿಮೆಯಾಗಿ ಕಾರ್ಯಕ್ಷಮತೆಯನ್ನು ಹೆಚ್ಚಿಸಬಹುದೆಂದು ಸಭೆಯಲ್ಲಿ ತಿಳಿಸಲಾಯಿತು.

ಉಪನಿರ್ದೇಶಕರು ಈ ಬಗ್ಗೆ ಕ್ರಮ ವಹಿಸುತ್ತಿರುವುದಾಗಿ ಸಭೆಗೆ ತಿಳಿಸಿದರು.

(ಕ್ರಮ: ಅಪರ ಜಿಲ್ಲಾಧಿಕಾರಿಗಳು ಮತ್ತು ಭೂ ದಾಖಲೆಗಳ ಉಪನಿರ್ದೇಶಕರು)

**11 ನ್ಯಾಯಾಲಯಗಳ ಪ್ರಕರಣಗಳ ಬಗ್ಗೆ:**

ಈಗಾಗಲೇ ನಿಗದಿಪಡಿಸಿರುವ ಗುರಿಯಂತೆ ಪ್ರಕರಣಗಳನ್ನು ಇತ್ಯರ್ಥಪಡಿಸಬೇಕೆಂದು ಹಾಗೂ ಹಲವಾರು ವರ್ಷಗಳಿಂದ ಬಾಕಿ ಇರುವ 79 ಎ ಬಿ ಪ್ರಕರಣಗಳನ್ನು ಆದ್ಯತೆ ಮೇರೆಗೆ ಕೈಗೆತ್ತಿಕೊಂಡು ಇತ್ಯರ್ಥಗೊಳಿಸುವ ಬಗ್ಗೆ ಕ್ರಮ ವಹಿಸಲು ಸೂಚಿಸಿದರು.

(ಕ್ರಮ: ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಉತ್ತರ/ದಕ್ಷಿಣ ಹಾಗೂ ಎಲ್ಲಾ ತಹಶೀಲ್ದಾರ್‌ಗಳು)

**12 ಸ್ವಚ್ಛ ಭಾರತ್ ಮಿಷನ್:**

ಈಗಾಗಲೇ 9 ಕಡೆಗಳಲ್ಲಿ ಜಾಗಗಳನ್ನು ನೀಡಿದ್ದು, ಉಳಿದ ಕಡೆಗಳಲ್ಲಿ 1 ತಿಂಗಳ ಒಳಗಾಗಿ ನೀಡಲು ಸಂಬಂಧಪಟ್ಟ ತಹಶೀಲ್ದಾರ್‌ರವರಿಗೆ ಸೂಚನೆ ನೀಡಿ, ಅವರಿಂದ ಪ್ರಸ್ತಾವನೆ ಬಂದ ತಕ್ಷಣ ಕಲಂ 71ರಡಿ ಜಾಗವನ್ನು ಕಾಯ್ದಿರಿಸುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಯಿತು.

(ಕ್ರಮ: ಎಲ್ಲಾ ತಹಶೀಲ್ದಾರ್‌ಗಳು, ಉಪವಿಭಾಗಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಅಪರ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು)

**13 ರಕ್ಷಣಾ ಇಲಾಖೆಗೆ ಭೂಮಿಯನ್ನು ನೀಡುವ ಬಗ್ಗೆ:**

ಈ ಬಗ್ಗೆ ಎಲ್ಲಾ ತಹಶೀಲ್ದಾರ್‌ಗಳು ರಕ್ಷಣಾ ಇಲಾಖೆಗೆ ಜಾಗವನ್ನು ನೀಡುವ ಬಗ್ಗೆ ರಕ್ಷಣಾ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯ ಮಾಡಿಕೊಂಡು, ಅವರಿಗೆ ಅವಶ್ಯವಿರುವ ಜಾಗವನ್ನು ಗುರುತಿಸಿ ನೀಡುವಲ್ಲಿ ಹೆಚ್ಚಿನ ಗಮನಹರಿಸಿ, ಪ್ರಸ್ತಾವನೆಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕೆಂದು ಸಭೆಯಲ್ಲಿ ಸೂಚಿಸಲಾಯಿತು.

(ಕ್ರಮ: ಎಲಾ ತಹಶೀಲ್ದಾರ್‌ಗಳು, ಜಿಲ್ಲಾಧಿಕಾರಿಗಳು)

**14 ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ:**

ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ಅವಶ್ಯವಾದ 8 ನಿವೇಶಗಳನ್ನು ಗುರುತಿಸಿ, ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಎಲ್ಲಾ ತಹಶೀಲ್ದಾರ್‌ಗಳಿಗೆ ಸೂಚನೆಯನ್ನು ನೀಡಲಾಯಿತು.

ಮುಂದಿನ ಸಭೆಗೆ ಬಿಬಿಎಂಪಿಯ ಮುಖ್ಯ ಆರೋಗ್ಯಾಧಿಕಾರಿಗಳು ಹಾಜರಾಗುವಂತೆ ಕ್ರಮ ವಹಿಸಲು ಅಪರ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಯಿತು.

(ಕ್ರಮ: ಎಲ್ಲಾ ತಹಶೀಲ್ದಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮತ್ತು ಅಪರ ಜಿಲ್ಲಾಧಿಕಾರಿಗಳು)

**15 ಶಿಕ್ಷಣ ಇಲಾಖೆ:**

ಮುಂಬರಲಿರುವ ಪಿ.ಯು.ಸಿ.. ಮತ್ತು ಎಸ್.ಎಸ್.ಎಲ್.ಸಿ ಪರೀಕ್ಷೆಗಳ ಕುರಿತು ಸ್ಕ್ವಾಡ್‌ಗಳ ರಚನೆಯ ಬಗ್ಗೆ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ, ವಿವಿಧ ಇಲಾಖೆಗಳ ಗ್ರೇಡ್-2 ಅಧಿಕಾರಿಗಳನ್ನು ಅಬ್‌ಸರ್ವರ್ ಆಗಿ ನೇಮಿಸುವ ಕುರಿತು ಕ್ರಮ ವಹಿಸುವಂತೆ ಹಾಗೂ ಮೊಬೈಲ್ ಸ್ಕ್ವಾಡ್‌ಗಳ ಕುರಿತು ನಿರ್ದಿಷ್ಟವಾದ ಕ್ರಮಗಳನ್ನು ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಲಾಯಿತು.

ಬೆಂಗಳೂರು ನಗರ ಜಿಲ್ಲೆಗೆ ಪಿ.ಯು.ಸಿ ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ ತರಲು ಶಿಕ್ಷಣ ಇಲಾಖೆಯವರಿಗೆ ಸೂಕ್ತ ಕ್ರಮವಹಿಸಲು ಸೂಚಿಸಲಾಯಿತು.

(ಕ್ರಮ: ಡಿಡಿಪಿಐ, ಉತ್ತರ ಮತ್ತು ದಕ್ಷಿಣ, ಶಿಕ್ಷಣ ಇಲಾಖೆ, ಅಪರ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು)

ಅಂತಿಮವಾಗಿ ಮುಂದಿನ ಸಭೆಗೆ ಎಲ್ಲಾ ಜಿಲ್ಲಾ ಅಧಿಕಾರಿಗಳು ತಪ್ಪದೆ ಹಾಜರಾಗುವಂತೆ ಸೂಚಿಸಿ, ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

(ತುಷಾರ್ ಗಿರಿನಾಥ್)

**ಮಾನ್ಯ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು**
**ಮತ್ತು ಒಳಚರಂಡಿ ಮಂಡಳಿ ಹಾಗೂ**
**ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,**
**ಬೆಂಗಳೂರು ನಗರ ಜಿಲ್ಲೆ.**

**ಜಿಲ್ಲಾ ಉಸ್ತುವಾರಿಕಾರ್ಯದರ್ಶಿಯಿಂದ ಪ್ರತೀ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ**

**-:ಮೈಸೂರು ಜಿಲ್ಲೆ:-**

| ಕ್ರ. ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ಮೈಸೂರು |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ: ಜಿ. ಕಲ್ಪನ, ಭಾ.ಆ.ಸೇ., |
| 3 | ಭೇಟಿಯಾದ / ಪ್ರವಾಸದ ದಿನಾಂಕ | 12-02-2020 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | • ದಿನಾಂಕ 12-02-2020 ರಂದು ಮೈಸೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆಯ ಸುವರ್ಣ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಆಯೋಜಿಸಲಾಗಿದ್ದ "ಯುವ ಜನತೆ" ಕುರಿತಂತೆ ಉಪನ್ಯಾಸ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಾಯಿತು.<br>• ಈ ಕಾರ್ಯಕ್ರಮದಲ್ಲಿ ಯುವ ಜನತೆಗೆ ಕೌಶಲ್ಯ ಅಭಿವೃದ್ಧಿಯಡಿ ತರಬೇತಿ ನೀಡುವ ಮೂಲಕ ಸ್ವ-ಉದ್ಯೋಗ ಮತ್ತು ಸ್ವಾವಲಂಬನೆ ಹೊಂದುವ ಬಗ್ಗೆ ಉಪಯುಕ್ತ ಸಲಹೆಗಳನ್ನು ನೀಡಲಾಯಿತು. |

Kalpana G

(ಡಾ. ಜಿ. ಕಲ್ಪನ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

## ದಿನಾಂಕ: 25.02.2020 ರಂದು ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಸಭಾ ನಡವಳಿ

ಮಾನ್ಯ ಜಿಲ್ಲಾಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಚಾಮರಾಜನಗರ ರವರನ್ನು ಮತ್ತು ವಿವಿಧ ಅಧಿಕಾರಿಗಳನ್ನು ಸ್ವಾಗತಿಸಿ ಸಭೆ ನಡೆಸಿಕೊಡುವಂತೆ ಕೋರಿದರು.

**<u>ಇ-ಆಫೀಸ್ ಅನುಷ್ಠಾನದ ಬಗ್ಗೆ</u> :**

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಇ-ಆಫೀಸ್ ಅನುಷ್ಠಾನದ ಬಗ್ಗೆ ಚರ್ಚಿಸಲಾಗಿ, ಜಿಲ್ಲಾ ಪಂಚಾಯತ್ ಚಾಮರಾಜನಗರ, ಜಿಲ್ಲಾ ವ್ಯಾಪ್ತಿಯಲ್ಲಿನ ಅರಣ್ಯ ಇಲಾಖೆ, ಹಾಗೂ ಪೊಲೀಸ್ ಇಲಾಖೆಯಲ್ಲಿ ಇ-ಆಫೀಸ್ ತಂತ್ರಾಂಶವನ್ನು ಅನುಷ್ಠಾನಗೊಳಿಸಿರುವ ಕುರಿತು ಮಾಹಿತಿ ನೀಡಿದರು.

- ಕಛೇರಿಯಲ್ಲಿನ ಪತ್ರ ವ್ಯವಹಾರಗಳನ್ನು ಭೌತಿಕವಾಗಿ ವ್ಯವಹರಿಸುವುದನ್ನು ಕಡಿಮೆ ಮಾಡಿ ಇ-ತಂತ್ರಾಂಶದ ಮೂಲಕ ಪತ್ರಗಳನ್ನು ಮಾರ್ಚ್ 31ರೊಳಗಾಗಿ ಪೂರ್ಣ ಪ್ರಮಾಣದಲ್ಲಿ ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಅನುಷ್ಠಾನಗೊಳಿಸಲು ಗಡುವು ನೀಡಿ, ಎಪ್ರಿಲ್ 2020 ರಿಂದ ಕಚೇರಿ ಕಾರ್ಯವಿಧಾನಗಳಂತೆ ಇ-ಆಫೀಸ್ ಅನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದರು.
- ಸರ್ಕಾರಿ ಕಚೇರಿಗಳಲ್ಲಿ ಬೇಡವಾದ ತ್ಯಾಜ್ಯ ವಸ್ತುಗಳು ಅಂದರೆ ಅವಧಿ ಮೀರಿದ ಹಳೆ ಕಡತಗಳು, ವಾಹನಗಳು, ಇತರೆ ಸಾಮಾಗ್ರಿಗಳು ಕಚೇರಿ ಆವರಣದಲ್ಲಿ ಕಂಡುಬಂದಿರುತ್ತವೆ. ಇವುಗಳನ್ನು ತಮ್ಮ ಕಚೇರಿಗಳಲ್ಲಿ ಗುರುತಿಸಿ ಅವುಗಳನ್ನು ಮಾರ್ಚ್-31 ರೊಳಗಾಗಿ ಶೀಘ್ರವಾಗಿ ವಿಲೇವಾರಿ ಮಾಡಲು ಕ್ರಮವಹಿಸಿ, ಅಗತ್ಯ ಕ್ರಮವಹಿಸಿದ ಬಗ್ಗೆ ಮಾಹಿತಿ ನೀಡುವಂತೆ ಹಾಗೂ ಕಚೇರಿ ಆವರಣವನ್ನು ಶುಚಿಯಾಗಿ ಇಡುವಂತೆ ಸಭೆಯಲ್ಲಿ ಎಲ್ಲಾ ಅಧಿಕಾರಿಗಳಿಗೆ ತಿಳಿಸಿದರು.

**( ಕ್ರಮ: ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು)**

➢ **<u>ಕೃಷಿ ಇಲಾಖೆ</u> :**

- ರಬಿ ಸಮೀಕ್ಷೆ ಕಾರ್ಯವು ಶೇಕಡ 91% ರಷ್ಟು ಮುಕ್ತಾಯಗೊಂಡಿದ್ದು ಉಳಿದ ಸಮೀಕ್ಷಾ ಕಾರ್ಯವನ್ನು ಎರಡು ಮೂರು ದಿನಗಳೊಳಗೆ ಮುಕ್ತಾಯಗೊಳಿಸಬೇಕೆಂದು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದರು.

➢ **<u>ಬೆಳೆ ಸಮೀಕ್ಷೆ</u>**

- ಬೆಳೆ ಸಮೀಕ್ಷಾ ಅಂಕಿ ಅಂಶಗಳನ್ನು ತಾಳೆ ಮಾಡಿಕೊಳ್ಳುವ ಕುರಿತು ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕುವಾರು, ಗ್ರಾಮವಾರು, ಹೋಬಳಿವಾರು ಕೆಲವೊಂದು ಅಪ್‌ಲೋಡ್ ಮಾಡಿರದ ಜಮೀನುಗಳನ್ನು ಮೊಬೈಲ್ ಆಪ್‌ನಲ್ಲಿ ಸೇರಿಸಲು ಕಂದಾಯ ಇಲಾಖೆ, ಕೃಷಿ ಇಲಾಖೆಯವರು ಅಂಕಿಅಂಶಗಳನ್ನು ತಾಳೆ ಮಾಡಿಕೊಂಡು ಉಪವಿಭಾಗಾಧಿಕಾರಿಗಳ ಮಟ್ಟದಲ್ಲಿ ಪ್ರಗತಿ ಪರಿಶೀಲಿಸಿ ಕ್ರಮವಹಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

➢ **<u>ಎಸ್‌ಸಿಪಿ/ಟಿಎಸ್‌ಪಿ ಯೋಜನೆ</u> :**

- ಎಸ್‌ಸಿಪಿ/ಟಿಎಸ್‌ಪಿ ಯೋಜನೆ ಬಗ್ಗೆ ಚರ್ಚಿಸಲಾಗಿ, ಸಂಬಂಧಪಟ್ಟ ಇಲಾಖಾವಾರು ಯೋಜನೆಗಳನ್ನು ನಿಗಧಿತ ನಮೂನೆಯಲ್ಲಿ ವಿವಿಧ ಇಲಾಖೆಗಳಿಂದ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ವರದಿಯನ್ನು ಪ್ರತಿ ಮಾಹೆಯ 10ನೇ ದಿನಾಂಕದೊಳಗೆ Google Spread Sheet ಅನ್ನು ಅಪ್‌ಲೋಡ್ ಮಾಡಿ ಆಗಿಂದಾಗ್ಗೆ ಕಾಲೋಚಿತಗೊಳಿಸಲು ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸುತ್ತೋಲೆಯನ್ನು ಹೊರಡಿಸಿ ಅಗತ್ಯ ಕ್ರಮವಹಿಸುವಂತೆ ಸಭೆಯಲ್ಲಿ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

**(ಕ್ರಮ: ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು)**

➢ **<u>ಕಾವೇರಿ ನೀರಾವರಿ ನಿಗಮ ನಿಯಮಿತ</u> :**

- ಉತ್ತೂರು ಏತ ನೀರಾವರಿ ಯೋಜನೆ, ಗಾಂಧಿಗ್ರಾಮ ಏತ ನೀರಾವರಿ ಯೋಜನೆ ಮತ್ತು ಸುತ್ತೂರು ಏತ ನೀರಾವರಿ ಯೋಜನೆಯ ವಿವಿಧ ನೀರಾವರಿ ಕಾಮಗಾರಿಗಳ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ಮಾರ್ಚ್-2020 ಮಾಹೆಯ ಅಂತ್ಯದೊಳಗೆ ಮುಕ್ತಾಯಗೊಳಿಸುವಂತೆ ಮಾನ್ಯ ಜಿಲ್ಲಾ ಉಸುವಾರಿ ಕಾರ್ಯದರ್ಶಿಗಳು, ಹಾಗೂ ಜಿಲ್ಲಾಧಿಕಾರಿಗಳು ಇಲಾಖಾಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ : ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ ನಿಯಮಿತ ನಂಜನಗೂಡು)**

➢ <u>ಆಹಾರ ಇಲಾಖೆ (ಬೆಂಬಲ ಬೆಲೆ ಯೋಜನೆ) :</u>

- 2019-20ನೇ ಸಾಲಿನಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಕನಿಷ್ಠ ಬೆಂಬಲ ಯೋಜನೆಯಡಿ 6 ಕೇಂದ್ರಗಳನ್ನು ತೆರೆಯಲಾಗಿರುತ್ತದೆ.
- ರಾಗಿ ಬೆಳೆಗೆ ಸಂಬಂಧಿಸಿದಂತೆ ಅತಿ ಕಡಿಮೆ ರೈತರು ನೊಂದಾವಣೆಯಾಗಿರುವುದಾಗಿ ಆನ್‌ಲೈನ್ ತಂತ್ರಾಂಶದಲ್ಲಿ ಸಮಸ್ಯೆ /ಆಕ್ಷೇಪಣೆಗಳು ಇದ್ದುದರಿಂದ ಕಾಲೋಚಿತಗೊಳಿಸಿರುವುದಿಲ್ಲವೆಂದು ಸಭೆಯಲ್ಲಿ ಆಹಾರ ಇಲಾಖೆಯ ಉಪನಿರ್ದೇಶಕರು ತಿಳಿಸಿದರು.
- ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಕೆಲವೊಂದು ರೈತರು ನೊಂದಣಿ ಆಗದಿದ್ದ ಪಕ್ಷದಲ್ಲಿ ಸಮಯಾವಕಾಶ ನೀಡಿ ಖರೀದಿಸಲು ಕ್ರಮವಹಿಸುವಂತೆ ಸೂಚಿಸಿದರು.
- ಮಾರುಕಟ್ಟೆ ಬೆಲೆ ಹಾಗೂ ಬೆಂಬಲ ಬೆಲೆಯಲ್ಲಿ ವ್ಯತ್ಯಾಸವಾಗಿ ಬೆಂಬಲ ಬೆಲೆ ಹೆಚ್ಚಾಗಿದ್ದ ಸಂದರ್ಭದಲ್ಲಿ ಲೋಪ ಉಂಟಾಗುವ ಸಂಭವವಿದ್ದು, ಪರಿಶೀಲನಾ ಸಂದರ್ಭದಲ್ಲಿ ಅಧಿಕಾರಿ ವರ್ಗದವರು ಗಮನಿಸಬೇಕಾಗಿರುವುದಾಗಿ ಸಭೆಯಲ್ಲಿ ತಿಳಿಸುತ್ತಾ, ತಾಲ್ಲೂಕುವಾರು ಗ್ರಾಮಗಳಲ್ಲಿ ಈ ಬಗ್ಗೆ ಅಂತಿಮ ದಿನಾಂಕ:29.02.2020ರೊಳಗಾಗಿ ಸಂಬಂಧಪಟ್ಟ ನೊಂದಾಯಿತ ರೈತ ಸಂಪರ್ಕ ಕೇಂದ್ರಗಳಲ್ಲಿ ನೊಂದಣಿ ಮಾಡಿ ಆಕ್ಷೇಪಣೆ/ತಗಾದೆಗಳನ್ನು ಇತ್ಯರ್ಥಗೊಳಿಸಲು ಸೂಚಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಚಾಮರಾಜನಗರ, ಎಲ್ಲಾ ತಹಶೀಲ್ದಾರ್)**

➢ **<u>ಬಹು ಗ್ರಾಮಗಳ ಕುಡಿಯುವ ನೀರಿನ ಯೋಜನೆ :</u>**

- ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಮುಂದಿನ ದಿನಗಳಲ್ಲಿ ಬೇಸಿಗೆ ಕಾಲ ಪ್ರಾರಂಭವಾಗುವುದರಿಂದ ಕುಡಿಯುವ ನೀರಿಗೆ ಸಮಸ್ಯೆ ಉಂಟಾಗುವ ಸಂಭವವಿದ್ದಲ್ಲಿ ಮುಂಜಾಗ್ರತಾ ಕ್ರಮವಹಿಸಲು ಅಂತಹ ಗ್ರಾಮಗಳನ್ನು ಗುರುತಿಸಿ, ಪ್ರಸ್ತಾವನೆ ಸಲ್ಲಿಸಲು ತಿಳಿಸಿದರು .
- ಬಹುಗ್ರಾಮ ಯೋಜನೆಯ ಉಮ್ಮತ್ತೂರು ಗ್ರಾಮದ ಶುದ್ಧೀಕರಣದ ಘಟಕದ ಬಳಿ ಶೇಖರಣೆಯಾಗುತ್ತಿರುವ ಶೇ 5%ರಷ್ಟು ತ್ಯಾಜ್ಯ ನೀರನ್ನು ಸೂಕ್ತ ರೀತಿಯಲ್ಲಿ ಮರುಬಳಕೆ ಮಾಡಿ ಗ್ರಾಮೀಣ ಜನತೆಗೆ ಅವಶ್ಯವಿರುವಂತೆ ಹೆಚ್ಚುವರಿ ನೀರೊದಗಿಸಲು ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದರು.
- ತ್ಯಾಜ್ಯ ನೀರಿನ ಮರುಬಳಕೆ ಮಾಡಲು ಸರ್ಕಾರದಿಂದ ಒಪ್ಪಿಗೆಯಾಗಿರುವ ಏಜೆನ್ಸಿ ಯವರಿಂದ ಯೋಜನಾ ವರದಿಯನ್ನು ತಯಾರಿಸಬೇಕಾಗಿದ್ದು, ಪ್ರಸ್ತುತ ಸಭೆಯಲ್ಲಿ ಅನುಮತಿ ನೀಡಲಾಗಿರುತ್ತದೆಂದು ಭಾವಿಸಿ, ತುರ್ತಾಗಿ ತಯಾರಿಸಲು ಸೂಚಿಸಿದರು.
- ಶುದ್ಧೀಕರಣ ಘಟಕವನ್ನು ಇಲಾಖೆಯ ಜೊತೆಗೆ ಭೂ ಸೇನಾ ನಿಗಮ (ಕೆ.ಆರ್.ಐ.ಡಿ.ಎಲ್) ಹಾಗೂ ಕೋ-ಆಪರೇಟಿವ್ ಸೊಸೈಟಿಯ ವತಿಯಿಂದ ಒಟ್ಟಾರೆ 211 ಘಟಕ ಮಂಜೂರಾಗಿದ್ದು, ಕಾರಣಾಂತರಗಳಿಂದ 26 ಘಟಕಗಳನ್ನು ಪ್ರಾರಂಭಿಸದಿರುವ ಬಗ್ಗೆ ವಿವಿಧ ಏಜೆನ್ಸಿ ರವರ ವಿವರಗಳೊಂದಿಗೆ ಪೂರ್ಣ ಮಾಹಿತಿ ಸಲ್ಲಿಸಲು ಸೂಚಿಸಿದರು.

**(ಕ್ರಮ: ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಾಮರಾಜನಗರ)**

➢ **<u>ಪಿ.ಎಂ.ಕಿಸಾನ್ ಯೋಜನೆ:</u>**

- ಪಿ.ಎಂ.ಕಿಸಾನ್ ಯೋಜನೆಯಡಿ ರೈತ ಫಲಾನುಭವಿಗಳಿಗೆ ಒಟ್ಟು 10000 ರೂಗಳನ್ನು ನೀಡಲಾಗುತ್ತಿದೆ. ಕೃಷಿ ಅಧಿಕಾರಿಗಳು ತಹಶೀಲ್ದಾರ್ ಲಾಗಿನ್‌ನಲ್ಲಿ ಬಾಕಿ ಇರುವ ಅರ್ಜಿಗಳನ್ನು ತುರ್ತಾಗಿ ವಿಲೇವಾರಿಗೊಳಿಸುವುದು ಹಾಗೂ ಈಗಾಗಲೇ ಅರಣ್ಯ ಹಕ್ಕು ಕಾಯ್ದೆಯಡಿ ಬೇಸಾಯಗಾರರಾಗಿರುವ ಆದಿವಾಸಿಗಳನ್ನು ಗುರುತಿಸಿ, ಪಿ.ಎಂ. ಕಿಸಾನ್ ಯೋಜನೆಯ ಫಲಾನುಭವಿಗಳಾಗಿ ನಮೂದು ಮಾಡಲು ಉಪವಿಭಾಗಾಧಿಕಾರಿಗಳು, ಕೃಷಿ ಅಧಿಕಾರಿಗಳು, ಹಾಗೂ ಅರಣ್ಯಾಧಿಕಾರಿಗಳೊಂದಿಗೆ ಚರ್ಚಿಸಿ, ಕ್ರಮವಹಿಸುವಂತೆ ಸೂಚಿಸಿದರು.

**( ಕ್ರಮ: ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ನಿರ್ದೇಶಕರು, ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ, ಅರಣ್ಯ ಸಂರಕ್ಷಣಾಧಿಕಾರಿಗಳು, ಮತ್ತು ಕ್ಷೇತ್ರ ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ, ಉಪವಿಭಾಗಾಧಿಕಾರಿಗಳು, ಕೊಳ್ಳೇಗಾಲ ಉಪವಿಭಾಗ, ಕೊಳ್ಳೇಗಾಲ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಲೈ ಮಹದೇಶ್ವರ ವನ್ಯ ಜೀವಿ ವಿಭಾಗ, ಹನೂರು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕಾವೇರಿ ವನ್ಯ ಜೀವಿ ವಿಭಾಗ ಕೊಳ್ಳೇಗಾಲ, ಎಲ್ಲಾ ತಹಶೀಲ್ದಾರ್)**

➢ <u>ಆಯುಷ್ಮಾನ್ ಭಾರತ್:</u>

- ಆಯುಷ್ಮಾನ್ ಭಾರತ್ ಯೋಜನೆಯು ಸರ್ಕಾರದ ಬಹುಮುಖ್ಯ ಯೋಜನೆಯಾಗಿದ್ದು , ಸೇವಾ ಸಿಂಧು ಕೇಂದ್ರಗಳಲ್ಲಿ ಹಾಗೂ ಗ್ರಾಮ ಪಂಚಾಯಿತಿಗಳ ಸಹಯೋಗದೊಂದಿಗೆ ಕಾರ್ಡಗಳನ್ನು ವಿತರಿಸಲು ದಿನಾಂಕ ನಿಗಧಿಗೊಳಿಸಿ ಕಾರ್ಯಕ್ರಮ ರೂಪಿಸಿ ಕ್ಯಾಂಪ್‌ಗಳನ್ನು ನಡೆಸುತ್ತಿರುವುದಾಗಿ ಹಾಗೂ ಗ್ರಾಮೀಣಾ ಪ್ರದೇಶಗಳಲ್ಲಿ ಅನುಕೂಲವಾಗುವಂತೆ ಪ್ರಸ್ತುತ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಬಾಪೂಜಿ ಸೇವಾ ಕೇಂದ್ರದಲ್ಲಿಯು ಅನುಷ್ಟಾನಗೊಳಿಸುತ್ತಿರುವುದಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ತಿಳಿಸಿದರು.
- ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಆರೋಗ್ಯ ಕಾರ್ಡ್‌ಗಳನ್ನು ವಿತರಿಸುವ ಯೋಜನೆಗಳ ಬಗ್ಗೆ ನಗರ ಪ್ರದೇಶಗಳಲ್ಲಿ ಅರಿವಿದ್ದು, ಗ್ರಾಮೀಣಾ ಪ್ರದೇಶಗಳಲ್ಲಿ ಹೆಚ್ಚಿನ ರೀತಿಯಲ್ಲಿ ಪ್ರಚುರಪಡಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು.

**(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಆರೋಗ್ಯ ಇಲಾಖೆ, ಚಾಮರಾಜನಗರ)**

➢ <u>ಸ್ವಚ್ಚ ಭಾರತ್ ಅಭಿಯಾನ್:</u>

- ಸ್ವಚ್ಚ ಭಾರತ್ ಅಭಿಯಾನ್ ಯೋಜನೆಯಡಿ ಮುಖ್ಯವಾಗಿ ಶೌಚಾಲಯಗಳ ನಿರ್ಮಾಣದ ಕುರಿತು ಚಾಮರಾಜನಗರ ಜಿಲ್ಲೆಯು, ಪಟ್ಟಿಯಲ್ಲಿ ಕೊನೆಯ ನಾಲ್ಕನೆ ಸ್ಥಾನದಲ್ಲಿದ್ದು, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಅಗತ್ಯ ಶೌಚಾಲಯಗಳನ್ನು ತ್ವರಿತಗತಿಯಲ್ಲಿ ನಿರ್ಮಿಸಲು ಕ್ರಮವಹಿಸುವಂತೆ ಸೂಚಿಸಿದರು.

➢ <u>ವಸತಿ ಯೋಜನೆಯ ಫಲಾನುಭವಿಗಳ ಮನೆಗಳನ್ನು ಸ್ಥಳ ಪರಿಶೀಲನೆ ನಡೆಸುವುದರ ಕುರಿತು :</u>

- ಸರ್ಕಾರದ ಯೋಜನೆಯಡಿ ನಿರ್ಗತಿಕ ಬಡವರಿಗೆ ವಸತಿ/ನಿವೇಶನ ಕಲ್ಪಿಸುವ ಸಲುವಾಗಿ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬಿಡುಗಡೆಯಾಗಿರುವ 316 ಫಲಾನುಭವಿಗಳ ಮನೆಗಳನ್ನು ವಸತಿ ವಿಜಿಲ್ ಆಪ್ ಮೂಲಕ ಸ್ಥಳ ಪರಿಶೀಲನೆಯನ್ನು ಮಾರ್ಚ್ 15 –2020 ರೊಳಗಾಗಿ ಪೂರ್ಣಗೊಳಿಸಲು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಭೆಯಲ್ಲಿ ನಿರ್ದೇಶಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಇಲಾಖೆ, ಚಾಮರಾಜನಗರ)**

- ಗ್ರಾಮೀಣ ಪ್ರದೇಶಗಳಲ್ಲಿ ಮೊದಲನೆ ಹಂತದಲ್ಲಿ 1352 ಮನೆಗಳ ಪರಿಶೀಲನಾ ಕಾರ್ಯ ಮುಕ್ತಾಯಗೊಂಡಿದ್ದು, 2ನೇ ಹಂತದಲ್ಲಿ 5184 ಮನೆಗಳ ಗುರಿ ನಿಗಧಿಗೊಳಿಸಿದ್ದು, 1ನೇ ಮತ್ತು 2ನೇ ಹಂತದ ಮನೆಗಳ ಪರಿಶೀಲನಾ ಕಾರ್ಯವು ಮುಕ್ತಾಯಗೊಳ್ಳದೇ ಇರುವುದರಿಂದ ಈ ಕುರಿತು ಗ್ರಾಮಲೆಕ್ಕಾಧಿಕಾರಿಗಳೊಂದಿಗೆ ಜಂಟಿ ಪರಿಶೀಲನಾ ಕಾರ್ಯಗಳನ್ನು ಕೈಗೊಂಡು, ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳು ಸ್ಥಳ ಪರಿಶೀಲನೆ ಕಾರ್ಯವನ್ನು ದಿನಾಂಕ : 15–03–2020 ರೊಳಗಾಗಿ ಪೂರ್ಣಗೊಳಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ನಿರ್ದೇಶಿಸಿದರು.

**( ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ್, ಚಾಮರಾಜನಗರ)**

➢ <u>ಗಣಿ ಮತ್ತು ಭೂವಿಜ್ಞಾನ ಇಲಾಖೆ :</u>

- ಚಾಮರಾಜನಗರ ಜಿಲ್ಲೆಯಾದ್ಯಾಂತ ಜಂಟಿ ಮೋಜಣಿ ನಡೆಸಿ, ಅನಧಿಕೃತ ಗಣಿಗಾರಿಕೆ ಕಂಡು ಬಂದಲ್ಲಿ, ಅಕ್ರಮವಾಗಿ ಗಣಿ ಗಾರಿಕೆ ನಡೆಸುತ್ತಿರುವುದನ್ನು ಪರಿಶೀಲಿಸಿ, ಅಂತಹ ಪ್ರದೇಶಗಳನ್ನು ತೆರವುಗೊಳಿಸಲು ಕಟ್ಟುನಿಟ್ಟಾಗಿ ಕ್ರಮವಹಿಸುವಂತೆ ಹಾಗೂ ಎಲ್ಲಾ ಸರ್ವೆ ಕಾರ್ಯಗಳನ್ನು ಮಾರ್ಚ್ ಮಾಹೆಯ ಅಂತ್ಯದೊಳಗೆ ಮುಕ್ತಾಯಗೊಳಿಸುವಂತೆ ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಚಾಮರಾಜನಗರ, ಮತ್ತು ಭೂದಾಖಲೆಗಳ ಉಪನಿರ್ದೇಶಕರು, ಚಾಮರಾಜನಗರ)**

➢ <u>ಜಿಲ್ಲೆಯ ವಸತಿ ನಿಲಯ/ಶಾಲೆಗಳಿಗೆ ಅಧಿಕಾರಿಗಳು ಭೇಟಿ ನೀಡುವ ಬಗ್ಗೆ:</u>

- ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಆಶ್ರಮ ಶಾಲೆಗಳಿಗೆ ಅಧಿಕಾರಿಗಳು ಭೇಟಿ ನೀಡುವ ಬಗ್ಗೆ ಚರ್ಚಿಸಲಾಗಿ ಪ್ರಸ್ತುತ ಸಂಬಂಧಪಟ್ಟ ಇಲಾಖೆಯ ಇಲಾಖಾಧಿಕಾರಿಗಳಲ್ಲದೇ ಇತರೆ ಇಲಾಖೆಗಳ ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಶಾಲೆಗಳಿಗೆ ಪ್ರತಿ ಮಾಹೆಯಲ್ಲಿ ಒಂದು ವಸತಿ ಶಾಲೆಗೆ ಭೇಟಿ ನೀಡಿ ಕುಂದುಕೊರತೆಗಳನ್ನು ಆಲಿಸುವಂತೆ ಸೂಚಿಸಿದರು.

- ಪರಿಶಿಷ್ಟ ಜಾತಿ/ಪಂಗಡದ ವಸತಿ ನಿಲಯಗಳಲ್ಲಿ ಸೌಲಭ್ಯಗಳ ಬಗ್ಗೆ ಪರಿಶೀಲನೆ ಮಾಡಿ ಪಟ್ಟಿ ಸಲ್ಲಿಸಿ, ಕೆಲವು ಕಾಡಂಚಿನ ಗ್ರಾಮದ ಆಶ್ರಮ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದು, ಈ ಕುರಿತು ಪೋಷಕರೊಂದಿಗೆ ಚರ್ಚಿಸಿ, ಮಕ್ಕಳನ್ನು ಶಾಲೆಗೆ ದಾಖಲಾತಿ ಮಾಡಲು ಕ್ರಮವಹಿಸುವಂತೆ ಸೂಚಿಸಿದರು.
- ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ವಸತಿ ನಿಲಯಗಳಿಗೆ ಕೊಳ್ಳೇಗಾಲ ಮತ್ತು ಹನೂರು ತಾಲ್ಲೂಕುಗಳಲ್ಲಿ ಬೇಡಿಕೆ ಇರುವುದನ್ನು ಗಮನಕ್ಕೆ ತರಲಾಗಿ, ಅಗತ್ಯ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಕಾರ್ಯದರ್ಶಿಗಳು ಸೂಚಿಸಿದರು.

**(ಕ್ರಮ : ಜಿಲ್ಲಾ ಅಧಿಕಾರಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಚಾಮರಾಜನಗರ)**

➢ **ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ:**

- ಚಾಮರಾಜನಗರ ಜಿಲ್ಲೆಯ ನಗರ ಪ್ರದೇಶದಲ್ಲಿ ಅಂಗನವಾಡಿ ಕೇಂದ್ರಗಳಿಗೆ ಅವಶ್ಯವಿರುವ ನಿವೇಶನಗಳನ್ನು ಒದಗಿಸಲು ಚೂಡಾ ವ್ಯಾಪ್ತಿಯಲ್ಲಿರುವ ಸಿ.ಎ ನಿವೇಶನಗಳನ್ನು ನೀಡುವ ಬಗ್ಗೆ ಕ್ರಮವಹಿಸುವಂತೆ ಸೂಚಿಸಿದರು.

  **(ಕ್ರಮ: ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಚಾಮರಾಜನಗರ ಹಾಗೂ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ, ಚಾಮರಾಜನಗರ ಜಿಲ್ಲೆ,)**

- ಕೃಷಿ ಇಲಾಖಾ ವತಿಯಿಂದ ಆರೋಗ್ಯ ಇಲಾಖೆಗೆ ಅವಶ್ಯಕವಿರುವ ಶಸ್ತ್ರ ಚಿಕಿತ್ಸಾ ಸಲಕರಣೆಗಳು ಹಾಗೂ ಪ್ರಯೋಗಾಲಯಕ್ಕೆ ಬೇಕಾಗಿರುವ ಪರಿಕರಗಳನ್ನು ಖರೀದಿಸಲು ರೂ. 50.00 ಲಕ್ಷದ ಅನುದಾನವನ್ನು ಮಂಜೂರಾತಿ ಮಾಡಲು ಪೂರಕ ದಾಖಲಾತಿಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

  **(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಆರೋಗ್ಯ ಇಲಾಖೆ, ಚಾಮರಾಜನಗರ)**

➢ **ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ:**

ಕೈಗಾರಿಕೆ ವಾಣಿಜ್ಯ ಇಲಾಖೆಯ ವತಿಯಿಂದ ಅಭಿವೃದ್ದಿ ಬಗ್ಗೆ ಚರ್ಚಿಸಲಾಗಿ, ಚಾಮರಾಜನಗರ ಜಲ್ಲೆಯನ್ನು ನಿಟ್‌ವೇರ್ ಕೇಂದ್ರವಾಗಿ ಬೆಳೆಸಲು ಕ್ರಮವಹಿಸಲಾಗಿದೆ. ಕೈಗಾರಿಕೆಗಳ ಅನುಷ್ಠಾನ ಕುರಿತು ಏಕಗವಾಕ್ಷಿ ಮೂಲಕ 240 ಯೋಜನೆಗಳು ಅನುಮೋದನೆಗೊಂಡಿದ್ದು, ಹೂಡಿಕೆದಾರರ ಸಭೆಯನ್ನು ಸದ್ಯದಲ್ಲಿಯೇ ಆಯೋಜಿಸಿ ಕ್ರಮವಹಿಸುವುದಾಗಿ ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದರು.

ಅಂತಿಮವಾಗಿ ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಯಾವುದೇ ಲೋಪದೋಷಗಳಿಗೆ ಆಸ್ಪದ ನೀಡದೇ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಭೆಯಲ್ಲಿ ನಿರ್ದೇಶಿಸಿರುವ ಅಂಶಗಳು ಹಾಗೂ ನೀಡಲಾಗಿರುವ ಗುರಿಯನ್ನು ತಲುಪಲು ಅಗತ್ಯ ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿ, ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ರಾಜೇಂದರ್ ಕುಮಾರ್ ಕಟಾರಿಯಾ)**
ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ
ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ
ಕಾರ್ಯದರ್ಶಿಗಳು, ಚಾಮರಾಜನಗರ

**ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 26.02.2020 ರಂದು ಜರುಗಿದ ಉಡುಪಿ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆ ಮತ್ತು ಮರಳು ಸಮಸ್ಯೆ ಬಗ್ಗೆ ಜಿಲ್ಲಾಧಿಕಾರಿಗಳು ಉಡುಪಿ ಜಿಲ್ಲೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಡನೆ ನಡೆದ ಸಭೆಯ ನಡವಳಿ:**

**ಸಮಯ: ಪೂರ್ವಾಹ್ನ 10.00 ಗಂಟೆ** **ಸ್ಥಳ: ಜಿಲ್ಲಾಧಿಕಾರಿ ಕಛೇರಿ ಸಭಾಂಗಣ**

**ಉಪಸ್ಥಿತರು:**

1) ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು
2) ಶ್ರೀ ಜಿ.ಜಗದೀಶ, ಭಾ.ಆ.ಸೇ. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
3) ಶ್ರೀಮತಿ ಪ್ರೀತಿ ಗೆಹಲೋತ್,ಭಾ.ಆ.ಸೇ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ
4) ಶ್ರೀ ವಿಷ್ಣುವರ್ಧನ್, ಭಾ.ಪೊಸೇ. ಪೊಲೀಸ್ ಅಧೀಕ್ಷಕರು, ಉಡುಪಿ ಜಿಲ್ಲೆ
5) ಶ್ರೀ ಬಿ.ಸದಾಶಿವ ಪ್ರಭು. ಕ.ಆ.ಸೇ. ಅಪರ ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
6) ಶ್ರೀ ಕೆ.ರಾಜು, ಕ.ಆ.ಸೇ, ಸಹಾಯಕ ಕಮೀಷನರು, ಕುಂದಾಪುರ
   ಹಾಗೂ ಹಾಜರಿಯಲ್ಲಿ ಸಹಿ ಮಾಡಿದವರು

**********

ಸಭೆಯ ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿಯವರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು, ಜಿಲ್ಲಾಧಿಕಾರಿಯವರನ್ನು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಯವರನ್ನು ಸ್ವಾಗತಿಸಿ ಪರಿಶೀಲನಾ ಸಭೆಯನ್ನು ನಡೆಸಿಕೊಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಕೋರಿದರು.

ಮೊದಲಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ದಿನಾಂಕ 30.01.2020 ರಂದು ಮಾನ್ಯರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸೂಚಿಸಿದ ಅಂಶಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಬಗ್ಗೆ ಪರಿಶೀಲನೆಯನ್ನು ನಡೆಸಿದರು.

**<u>ಸಭೆಯಲ್ಲಿ ಚರ್ಚಿಸಲಾದ ಪ್ರಮುಖ ವಿಷಯಗಳು:</u>**

ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಸಂಭವಿಸಿದ ನೆರೆಯಿಂದಾಗಿ ಹಾನಿಯಾಗಿರುವ A Category ಮತ್ತು B Category ಸಂತ್ರಸ್ಥರಿಗೆ ಮನೆಗಳ ಪುನರ್ ನಿರ್ಮಾಣ ಹಾಗೂ ರಿಪೇರಿಯ ಬಗ್ಗೆ ಚರ್ಚಿಸಲಾಗಿ, ರಾಜೀವ ಗಾಂಧೀ ತಂತ್ರಾಂಶದಲ್ಲಿ ಪ್ರಸ್ತುತ ಬಿ Category ಯ ಮನೆಗಳಿಗೆ ಮಾತ್ರ Repair & Reconstruction ಗೆ ಅವಕಾಶ ನೀಡಲಾಗಿದ್ದು, ಎ Category ಯ ಮನೆಗಳಿಗೂ ಸಹ ಈ ತಂತ್ರಾಂಶದಲ್ಲಿ Repair & Reconstruction ಗೆ ಅವಕಾಶವನ್ನು ಕಲ್ಪಿಸುವಂತೆ ತಹಶೀಲ್ದಾರರುಗಳು ಸಭೆಯಲ್ಲಿ ತಿಳಿಸಿದರು. ಹಾಗೂ ಹಾನಿಯಾಗಿರುವ ಮನೆಗಳ ಪುನರ್ ನಿರ್ಮಾಣ ಹಾಗೂ ರಿಪೇರಿಯ ವರದಿಯನ್ನು ಈ ಕೆಳಕಂಡಂತೆ ತಹಶೀಲ್ದಾರರು ಸಭೆಯಲ್ಲಿ ನೀಡಿದ್ದು,

| ಕ್ರ. ಸಂ. | ಜಿಲ್ಲೆ | ಜಿಲ್ಲಾಧಿಕಾರಿಗಳಿಂದ ಅನುಮೋದಿಸಲ್ಪಟ್ಟ ಮನೆಗಳ ಸಂಖ್ಯೆ | | | ದುರಸ್ಥಿ ಮಾಡಿರುವ ಮನೆಗಳ ಸಂಖ್ಯೆ | ಮನೆಗಳ ಮರುನಿರ್ಮಾಣ ಮಾಡುವ ಸಂಖ್ಯೆ | ತಳಪಾಯ (Foundation) | ಗೋಡೆ (Lintal) | ಪುನರ್ ನಿರ್ಮಾಣ ಮಾಡಲು ಬಾಕಿ ಇರುವ ಮನೆಗಳ ಸಂಖ್ಯೆ |
|---|---|---|---|---|---|---|---|---|---|
| | | ಸಂಪೂರ್ಣ ಹಾನಿಗೊಳಗಾದ ಮನೆ (A) | ಭಾಗಶಃ ಹಾನಿಗೊಳಗಾದ ಮನೆ (B) | ಒಟ್ಟು (A+B) | | | | | |
| 1 | Udupi | 6 | 32 | 38 | 31 | 7 | 3 | 0 | 4 |
| 2 | Kudapura | 11 | 15 | 26 | 5 | 21 | 6 | 9 | 6 |
| 3 | Karkal | 1 | 9 | 10 | 9 | 1 | 0 | 1 | 0 |
| 4 | Brhamvara | 16 | 20 | 36 | 23 | 13 | 6 | 4 | 3 |
| 5 | Byndoor | 4 | 7 | 11 | 4 | 7 | 6 | 1 | 0 |
| 6 | Kapu | 6 | 28 | 34 | 21 | 13 | 8 | 2 | 3 |
| 7 | Hebri | 0 | 12 | 12 | 5 | 7 | 7 | 0 | 0 |
| **Total** | | **44** | **123** | **167** | **98** | **69** | **36** | **17** | **16** |

ಈ ಬಗ್ಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಪುನರ್ ನಿರ್ಮಾಣ ಮಾಡುವಂತಹ ಮನೆಗಳನ್ನು ಶೀಘ್ರವಾಗಿ ನಿರ್ಮಿಸಲು ಕ್ರಮವಹಿಸುವಂತೆ ಎಲ್ಲಾ ತಹಶೀಲ್ದಾರರಿಗೆ ಸೂಚಿಸಿದರು.

**(ಕ್ರಮ : ತಹಶೀಲ್ದಾರರು ಉಡುಪಿ, ಕುಂದಾಪುರ, ಕಾರ್ಕಳ, ಬ್ರಹ್ಮಾವರ, ಬೈಂದೂರು, ಕಾಪು, ಹೆಬ್ರಿ)**

- ಪ್ರಾಕೃತಿಕ ವಿಕೋಪದ ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿಗಳ ಬಗ್ಗೆ ಚರ್ಚಿಸಲಾಗಿ, ಪಂಚಾಯತ್ ರಾಜ್ ಇಲಾಖೆಗೆ 2018-19 ನೇ ಸಾಲಿನಲ್ಲಿ ಒಟ್ಟು 259 ಕಾಮಗಾರಿಗಳಿಗೆ ರೂ.606.47 ಲಕ್ಷ ಮೊತ್ತ ಮಂಜೂರಾಗಿದ್ದು, ಅವುಗಳಲ್ಲಿ 128 ಕಾಮಗಾರಿಗಳು ಪೂರ್ಣಗೊಂಡಿದ್ದು, 88 ಕಾಮಗಾರಿಗಳು ಪ್ರಗತಿಯಲ್ಲಿದ್ದು, 43 ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿದ್ದು ಅವುಗಳಲ್ಲಿ 43 ಕಾಮಗಾರಿಗಳಲ್ಲಿ 40 ಕಾಮಗಾರಿಗಳು ಬದಲಿ ಹಾಗೂ ತಾಂತ್ರಿಕ ತೊಂದರೆಗಳಿರುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಲಾಖೆ ಇವರು ತಿಳಿಸಿದರು ಹಾಗೂ 2019-20 ನೇ ಸಾಲಿನಲ್ಲಿ ಒಟ್ಟು 494 ಕಾಮಗಾರಿಗಳಿಗೆ ರೂ.1299.15 ಲಕ್ಷ ಮೊತ್ತ ಮಂಜೂರಾಗಿದ್ದು, ಅವುಗಳಲ್ಲಿ 259 ಕಾಮಗಾರಿಗಳು ಪೂರ್ಣಗೊಂಡಿದ್ದು 193 ಕಾಮಗಾರಿಗಳು ಪ್ರಗತಿಯಲ್ಲಿದ್ದು, 42 ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿರುವುದಾಗಿ, ಈ 42 ಕಾಮಗಾರಿಗಳಲ್ಲಿ 20 ಕಾಮಗಾರಿಗಳು ಬದಲಿ ಹಾಗೂ ತಾಂತ್ರಿಕ ತೊಂದರೆಗಳಿರುವುದರಿಂದ ಪ್ರಾರಂಭಿಸಲಾಗಿರುವುದಿಲ್ಲ ಎಂಬುದಾಗಿ ಸಭೆಯಲ್ಲಿ ತಿಳಿಸಿದ್ದು, ಎಲ್ಲಾ 2018-19 ಹಾಗೂ 2019-20 ನೇ ಸಾಲಿನ ಕಾಮಗಾರಿಗಳನ್ನು ಶೀಘ್ರವಾಗಿ ಮುಕ್ತಾಯಗೊಳಿಸುವಲ್ಲಿ ಕ್ರಮ ಕೈಗೊಳ್ಳಲು ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಉಡುಪಿ )**

- ಲೋಕೋಪಯೋಗಿ ಇಲಾಖೆಗೆ ಪ್ರಾಕೃತಿಕ ವಿಕೋಪದಡಿ ಒಟ್ಟು ರೂ. 15.77 ಕೋಟಿ ಮೊತ್ತದ 34 ಕಾಮಗಾರಿಗಳು ಮಂಜೂರಾಗಿದ್ದು, ಅದರಲ್ಲಿ 26 ಕಾಮಗಾರಿಗಳು ಮುಗಿದಿದ್ದು, 8 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ, ರೂ. 654.50 ಲಕ್ಷ ಈವರೆಗೆ ವೆಚ್ಚವಾಗಿದ್ದು, ರೂ. 398.10 ಲಕ್ಷ ಮೊತ್ತದ ಬಿಲ್ಲುಗಳು ಪಾವತಿಗೆ ಬಾಕಿ ಇರುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಡುಪಿ ಇವರು ಸಭೆಯಲ್ಲಿ ತಿಳಿಸಿದರು. ಹಾಗೂ ಪೆರ್ಡೂರು-ಹರಿಖಂಡಿಕೆ-ಪೆರ್ಡೂರು-ಹರಿಖಂಡಿಕೆ-ದೊಂಡರಂಗಡಿ 1.70 ರಲ್ಲಿ ಸೇತುವೆ ಮರುನಿರ್ಮಾಣ ಕಾಮಗಾರಿಯ ಟೆಂಡರನ್ನು ತೆರೆಯಲಾಗಿದ್ದು, ಸೇತುವೆ ಕಾಮಗಾರಿಯನ್ನು ಪ್ರಾರಂಭಿಸಿರುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಡುಪಿ ಇವರು ಸಭೆಯಲ್ಲಿ ತಿಳಿಸಿದರು. ಎಲ್ಲಾ ಕಾಮಗಾರಿಗಳನ್ನು ಉತ್ತಮ ಗುಣಮಟ್ಟದೊಂದಿಗೆ ಶೀಘ್ರವಾಗಿ ಮುಕ್ತಾಯಗೊಳಿಸಲು ಕ್ರಮವಹಿಸುವಂತೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಬಂದು ಮತ್ತು ಒಳನಾಡು ಜಲಸಾರಿಗೆ ಇಲಾಖೆ)**

- ನಿರ್ಮಿತಿ ಕೇಂದ್ರ ಉಡುಪಿ ಇಲ್ಲಿನ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಗಿ, ಪ್ರಾಕೃತಿಕ ವಿಕೋಪ ಯೋಜನೆಯಡಿಯಲ್ಲಿ 2018-19 ನೇ ಸಾಲಿನ ಮಂಜೂರಾದ ಒಟ್ಟು 273 ಕಾಮಗಾರಿಗಳಲ್ಲಿ 189 ಕಾಮಗಾರಿಗಳು ಮುಕ್ತಾಯವಾಗಿದ್ದು, 52 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ, 32 ಕಾಮಗಾರಿಗಳು ಪ್ರಾರಂಭವಾಗಬೇಕಾಗಿರುವುದಾಗಿ, 2019-20 ನೇ ಸಾಲಿನಲ್ಲಿ ಮಂಜೂರಾದ ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಯೋಜನಾ ಅಭಿಯಂತರರು ನಿರ್ಮಿತಿ ಕೇಂದ್ರ ಇವರು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಎಲ್ಲಾ ಕಾಮಗಾರಿಗಳನ್ನು ಶೀಘ್ರವಾಗಿ ಮುಕ್ತಾಯಗೊಳಿಸಿ ಬಿಲ್ಲನ್ನು ಸಲ್ಲಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ಉಡುಪಿ)**

- ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಗಿ, 2019-20 ನೇ ಸಾಲಿನಲ್ಲಿ ಒಟ್ಟು 130 ಕಾಮಗಾರಿಗಳು ಮಂಜೂರಾಗಿದ್ದು, 47 ಕಾಮಗಾರಿಗಳು ಮುಕ್ತಾಯವಾಗಿದ್ದು, 83 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರವರು ಸಣ್ಣ ನೀರಾವರಿ ಇಲಾಖೆ ಇವರು ಸಭೆಯಲ್ಲಿ ತಿಳಿಸಿದರು. ಎಲ್ಲಾ ಕಾಮಗಾರಿಗಳನ್ನು ಶೀಘ್ರವಾಗಿ ಮುಕ್ತಾಯಗೊಳಿಸುವಂತೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು. ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗಳಲ್ಲಿ pitching ಸರಿ ಇಲ್ಲವಾಗಿ ಅನೇಕ ದೂರುಗಳು ಬರುತ್ತಿರುವ ಬಗ್ಗೆ ಉಸ್ತುವಾರಿ ಕಾರ್ಯದರ್ಶಿಯವರು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಯವರನ್ನು ತರಾಟೆಗೆ ತೆಗೆದುಕೊಂಡರು. Contractor ಗಳಿಗೆ ಈ ಬಗ್ಗೆ ಎಚ್ಚರಿಕೆ ನೀಡಲು ಸೂಚಿಸಿದರು. ಇನ್ನು ಮುಂದೆ ಕಾಮಗಾರಿಗಳ ಗುಣಮಟ್ಟದ ಬಗ್ಗೆ ಯಾವುದಾದರೂ ದೂರು ಬಂದಲ್ಲಿ ಈ ಬಗ್ಗೆ ನೇರವಾಗಿ ಲೋಕಾಯುಕ್ತರಿಗೆ ದೂರು ಸಲ್ಲಿಸುವುದಾಗಿ ಉಸ್ತುವಾರಿ ಕಾರ್ಯದರ್ಶಿಯವರು ಸಣ್ಣ ನೀರಾವರಿಯ ಅಧಿಕಾರಿಯವರಿಗೆ ಎಚ್ಚರಿಕೆ ನೀಡಿದರು.

**(ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರವರು ಸಣ್ಣ ನೀರಾವರಿ ಇಲಾಖೆ, ಉಡುಪಿ)**

- ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕಾಮಗಾರಿಗಳ ಪ್ರಗತಿಯ ಬಗ್ಗೆ ಪರಿಶೀಲಿಸಲಾಗಿ, ಕುಂದಾಪುರದ ಪ್ಲೈ ಓವರ್, ಪಡುಬಿದ್ರಿ ಬ್ರಿಡ್ಜ್ , ಪಡುಬಿದ್ರಿ ಪೇಟೆಯಲ್ಲಿನ ಕಾಮಗಾರಿ ಹಾಗೂ ಬಸ್ರೂರು ಮೂರುಕೈ ಅಂಡರ್ ಪಾಸ್ ಈ ಎಲ್ಲಾ ಕಾಮಗಾರಿಗಳನ್ನು ಮಾರ್ಚ್ ಅಂತ್ಯದೊಳಗೆ ಮುಕ್ತಾಯಗೊಳಿಸಿ ವರದಿ ನೀಡಬೇಕಾಗಿ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು ,** ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI )

- ಕಳೆದ ಬೇಸಿಗೆಯಲ್ಲಿ ಉಡುಪಿ ನಗರಸಭಾ ವ್ಯಾಪ್ತಿಯಲ್ಲಿ ಉಂಟಾದ ನೀರಿನ ಸಮಸ್ಯೆಯ ಕುರಿತು ಚರ್ಚಿಸಲಾಗಿ, ಈ ಬೇಸಿಗೆಯಲ್ಲಿ ಮೇ ಅಂತ್ಯದವರೆಗೂ ನೀರಿನ ಸಮಸ್ಯೆ ತಲೆದೋರದಂತೆ ಅಗತ್ಯ ಮುನ್ನಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಪೌರಾಯುಕ್ತರು ನಗರಸಭೆ ಉಡುಪಿ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು. ನೀರನ್ನು ಕಡಿತಗೊಳಿಸುವ ನಿರ್ಣಯವನ್ನು ಕೈಗೊಳ್ಳುವ ಮೊದಲು ಜಿಲ್ಲಾದಿಕಾರಿಯವರೊಂದಿಗೆ ಚರ್ಚಿಸುವಂತೆ ಸೂಚಿಸಿದರು. ಸಾರ್ವಜನಿಕರಿಗೆ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ , ಯಾವುದೇ ದೂರುಗಳಿಗೆ ಆಸ್ಪದ ನೀಡದಂತೆ ಕಾರ್ಯಪ್ರವೃ ರಾಗಬೇಕಾಗಿ ಹಾಗೂ ಈ ಬಗ್ಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಸಭೆಯನ್ನು ಕರೆದು ಕ್ರಮ ಕೈಗೊಳ್ಳಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಪೌರಾಯುಕ್ತರಿಗೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯತ್ ಉಡುಪಿ ಇವರಿಗೆ ಸೂಚಿಸಿದರು.

**(ಕ್ರಮ : ಪೌರಾಯುಕ್ತರು, ನಗರಸಭೆ ಉಡುಪಿ / ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯತ್ ಉಡುಪಿ)**

- ಕುಡಿಯುವ ನೀರಿನ ಸಮಸ್ಯೆಗೆ ಸ್ಪಂದಿಸಲು ಕಾಲ್ ಸೆಂಟರ್ ತೆರೆಯುವಂತೆ ತಿಳಿಸಿದರು, ಈ ಬಗ್ಗೆ ಈಗಾಗಲೇ ಬೇಸಿಗೆಯ ಸಮಯದಲ್ಲಿ ಜಿಲ್ಲೆಯ ಗ್ರಾಮಾ0ತರ ಪ್ರದೇಶದಲ್ಲಿ ಟ್ಯಾಂಕರ್ ಮೂಲಕ ನೀರು ವಿತರಿಸುವ ಅಭಿವೃದ್ಧಿ ಪಡಿಸುವ ಕುರಿತಂತೆ ಆ್ಯಪ್ ಅಭಿವೃದ್ಧಿಪಡಿಸಲಾಗಿದ್ದು, ಇದರ ಪ್ರಾಯೋಗಿಕ ಬಳಕೆಯ ಕುರಿತು ಜಿಲ್ಲೆಯ ಎಲ್ಲಾ ತಹಶೀಲ್ದಾರರಿಗೆ ತರಬೇತಿಯನ್ನು ನೀಡಿರುವುದಾಗಿ ಜಿಲ್ಲಾಧಿಕಾರಿಯವರು ಸಭೆಯಲ್ಲಿ ತಿಳಿಸಿದರು.

**(ಕ್ರಮ : ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ )**

- ಅನಗತ್ಯ ನೀರು ಪೋಲಾಗುವುದನ್ನು ತಡೆಗಟ್ಟುವ ಬಗ್ಗೆ ಚರ್ಚಿಸಲಾಗಿ, ನದಿ ದಂಡೆಯಲ್ಲಿನ ರೈತರಿಗೆ ನದಿಯ ನೀರು ಬಳಸುವುದರ ಬದಲು ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳುವ ಕುರಿತಂತೆ ಅರಿವು ನೀಡುವ ಸಲುವಾಗಿ ಕೃಷಿ ಮತ್ತು ತೋಟಗಾರಿಕಾ ಇಲಾಖೆಗಳ ಅಧಿಕಾರಿಗಳು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ರೈತರ ಸಭೆಯನ್ನು ಕರೆದು ರೈತರಿಗೆ ಈ ಬಗ್ಗೆ ಅರಿವು ನೀಡುವಲ್ಲಿ ಕ್ರಮಕೈಗೊಳ್ಳುವಂತೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಪೌರಾಯುಕ್ತರು, ನಗರಸಭೆ ಉಡುಪಿ / ಜಂಟಿ ಕೃಷಿ ನಿರ್ದೇಶಕರು, ಉಡುಪಿ / ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ ಉಡುಪಿ )**

• ಉಡುಪಿ ಜಿಲ್ಲಾ ಆಸ್ಪತ್ರೆಯ ಉಪಕರಣಗಳ ತಪಾಸಣೆಯ ಬಗ್ಗೆ ಚರ್ಚಿಸಲಾಗಿ, ಜಿಲ್ಲಾ ಆಸ್ಪತ್ರೆ ಉಡುಪಿ ಇಲ್ಲಿಯ ಉಪಕರಣಗಳ ಕಾರ್ಯ ನಿರ್ವಹಣೆ ಹಾಗೂ ತಪಾಸಣೆ ಬಗ್ಗೆ ಕೆ.ಎಚ್.ಎಸ್.ಆರ್.ಡಿ.ಪಿ ತಾಂತ್ರಿಕ ಇಂಜಿನಿಯರ್ ರವರ ಅಭಿಪ್ರಾಯ ಪಡೆಯಲಾಗಿದ್ದು, ತಪಾಸಣೆಯನ್ನು ತುರ್ತಾಗಿ ಮೂರನೇ ಸಂಸ್ಥೆಯವರಿಂದ ಮಾಡಿಸಲು ಕ್ರಮ ಕೈಗೊಳ್ಳಲಾಗಿರುವುದಾಗಿ ಜಿಲ್ಲಾ ಸರ್ಜನ್ ಸಭೆಯಲ್ಲಿ ತಿಳಿಸಿದರು. ಜಿಲ್ಲಾ ಆಸ್ಪತ್ರೆಯಲ್ಲಿ ಪ್ರಸ್ತುತ ಇರುವ ಉಪಕರಣಗಳ ಸಂಖ್ಯೆ, ಯಾವ ವರ್ಷ ಬಂದಿದೆ, ಎಷ್ಟು ವರ್ಷ work ಆಗಿದೆ ಎಂಬ ಬಗ್ಗೆ ತಪಾಸಣೆಯನ್ನು ನಡೆಸಿ ವರದಿಯನ್ನು ನೀಡುವಂತೆ ಜಿಲ್ಲಾ ಸರ್ಜನ್ ಜಿಲ್ಲಾ ಆಸ್ಪತ್ರೆ ಉಡುಪಿ ಇವರಿಗೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಜಿಲ್ಲಾ ಸರ್ಜನ್ ಜಿಲ್ಲಾ ಆಸ್ಪತ್ರೆ ಉಡುಪಿ)**

• ಜಿಲ್ಲಾ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಗೆ ಹೆಚ್ಚಿನ ಬೇಡಿಕೆ ಇದ್ದು, ಪ್ರಸ್ತುತ 90 ಮಂದಿ ಡಯಲಿಸಿಸ್ ಗೆ ಒಳಪಡುತ್ತಿದ್ದು, 50 ಮಂದಿ ಕಾಯುವಿಕೆ ಪಟ್ಟಿಯಲ್ಲಿ ಇದ್ದು , ಈ ಸಮಸ್ಯೆಯನ್ನು ಸರಿಪಡಿಸುವಂತೆ ಹಾಗೂ ಕಾರ್ಕಳದ ನೂತನ ಆಸ್ಪತ್ರೆಯಲ್ಲಿ ಒಟ್ಟು 5 ಡಯಾಲಿಸಿಸ್ ಯಂತ್ರ ಅಳವಡಿಸುವಂತೆ ಜಿಲ್ಲಾ ಸರ್ಜನ್ ಉಡುಪಿ ಇವರಿಗೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಜಿಲ್ಲಾ ಸರ್ಜನ್ ಜಿಲ್ಲಾ ಆಸ್ಪತ್ರೆ ಉಡುಪಿ)**

• ಜಿಲ್ಲಾ ಆಸ್ಪತ್ರೆಯಲ್ಲಿ MRI ಮತ್ತು City Scan ಉಪಕರಣಗಳ ಲಭ್ಯತೆಯ ಬಗ್ಗೆ ಪರಿಶೀಲಿಸಲಾಗಿ, MRI ಉಪಕರಣಗಳು ಜಿಲ್ಲಾ ಆಸ್ಪತ್ರೆಗೆ ಈವರೆಗೆ ಬಂದಿಲ್ಲವಾಗಿ City Scan ಉಪಕರಣಗಳು ಬಂದಿರುವುದಾಗಿ ಜಿಲ್ಲಾ ಸರ್ಜನ್ ಉಡುಪಿ ಇವರು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಜಿಲ್ಲಾ ಆಸ್ಪತ್ರೆಯಲ್ಲಿ MRI ಉಪಕರಣವನ್ನು ತರಿಸುವಲ್ಲಿ ಕ್ರಮ ಕೈಗೊಳ್ಳುವಂತೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಜಿಲ್ಲಾ ಸರ್ಜನ್ ಜಿಲ್ಲಾ ಆಸ್ಪತ್ರೆ ಉಡುಪಿ )**

• ಜಿಲ್ಲೆಯಲ್ಲಿನ ಪ್ರವಾಸೋದ್ಯಮ ಅಭಿವೃದ್ಧಿಯ ಕುರಿತು ಚರ್ಚಿಸಲಾಗಿ, ಮಲ್ಪೆ Sea walk ಬಳಿಯ ಅಭಿವೃದ್ಧಿ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ಪ್ರವಾಸೋದ್ಯಮ ಇಲಾಖೆಗೆ ಸಲ್ಲಿಸಿದ್ದು, ಕಾಮಗಾರಿಯನ್ನು ಈಗಾಗಲೇ ಪ್ರಾರಂಭಿಸಿರುವುದಾಗಿ ಯೋಜನಾ ನಿರ್ದೇಶಕರು ನಿರ್ಮಿತಿ ಕೇಂದ್ರ ಇವರು ಸಭೆಯಲ್ಲಿ ತಿಳಿಸಿದರು. ಕಾಪು ಲೈಟ್ ಹೌಸ್‌ನ ಬಳಿಯ ಅಭಿವೃದ್ಧಿ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಪ್ರವಾಸೋದ್ಯಮ ಇಲಾಖೆಗೆ ಶೀಘ್ರವಾಗಿ ಸಲ್ಲಿಸುವಂತೆ ಯೋಜನಾ ನಿರ್ದೇಶಕರು ನಿರ್ಮಿತಿ ಕೇಂದ್ರ ಉಡುಪಿ ಇವರಿಗೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಯೋಜನಾ ನಿರ್ದೇಶಕರು ನಿರ್ಮಿತಿ ಕೇಂದ್ರ ಉಡುಪಿ)**

• ತ್ರಾಸಿ ಬೀಚ್ ಅಭಿವೃದ್ಧಿ ಕಾಮಗಾರಿಯ ಬಗ್ಗೆ ಚರ್ಚಿಸಲಾಗಿ, ಈಗಾಗಲೇ 5 ಕೋಟಿ ಬಿಡುಗಡೆಯಾಗಿರುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಇವರಿಗೆ ಇವರು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಶೀಘ್ರವಾಗಿ ಸದರಿ ಕಾಮಗಾರಿಯನ್ನು ಮುಕ್ತಾಯಗೊಳಿಸುವಂತೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು0.

**(ಕ್ರಮ : ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಉಡುಪಿ)**

* ಸೋಮೇಶ್ವರ ಬೀಚ್ ಅಭಿವೃದ್ಧಿ ಕಾಮಗಾರಿಯ ಬಗ್ಗೆ ಚರ್ಚಿಸಲಾಗಿ, ಸದರಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಾಂತ್ರಿಕ ಅನುಮೋದನೆಗೆ ಸಲ್ಲಿಸಿರುವುದಾಗಿ, ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ರೂರಲ್ ಇನ್ ಫ್ರಾಸ್ಟ್ರಕ್ಚರ್ ಡೆವಲಪ್ ಮೆಂಟ್ ಲಿಮಿಟೆಡ್, ಉಡುಪಿ ಇವರು ಸಭೆಯಲ್ಲಿ ತಿಳಿಸಿದ್ದು, ತಾಂತ್ರಿಕ ಅನುಮೋದನೆ ದೊರೆತ ತಕ್ಷಣ ಕಾಮಗಾರಿಯನ್ನು ಕೈಗೊಂಡು ಶೀಘ್ರವಾಗಿ ಕಾಮಗಾರಿಯನ್ನು ಮುಕ್ತಾಯಗೊಳಿಸುವಂತೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ರೂರಲ್ ಇನ್ ಫ್ರಾಸ್ಟ್ರಕ್ಚರ್ ಡೆವಲಪ್ ಮೆಂಟ್ ಲಿಮಿಟೆಡ್, ಉಡುಪಿ)**

* ಜಿಲ್ಲೆಯಲ್ಲಿ ಮಲೇರಿಯಾ, ಕೊರೋನಾ ಹಾಗೂ ಇನ್ನಿತರ ಸಾಂಕ್ರಮಿಕ ರೋಗ ಹರಡುವಿಕೆಯನ್ನು ತಡೆಗಟ್ಟಲು ಹಾಗೂ ನಿಯಂತ್ರಿಸಲು ಹೆಚ್ಚಿನ ಅರಿವು ಕಾರ್ಯಕ್ರಮಗಳನ್ನು ಆಯೋಜಿಸಬೇಕಾಗಿ ಹಾಗೂ ರೋಗ ಹರಡದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲು ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು. ಹೊಸ ಕಟ್ಟಡ ಪರವಾನಿಗೆಯನ್ನು ನೀಡುವ ಸಮಯದಲ್ಲೇ ಸ್ವಚ್ಚತೆಯ ಬಗ್ಗೆ ಷರತ್ತುಗಳನ್ನು ವಿಧಿಸಿ ಪರವಾನಿಗೆಯನ್ನು ನೀಡಬೇಕಾಗಿ ಸೂಚಿಸಿದರು. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ನೀರು ನಿಲ್ಲದಂತೆ ಮುನ್ನೆಚ್ಚರಿಕೆ ವಹಿಸದ ಕಟ್ಟದ ಮಾಲಕರಿಗೆ ಕಾನೂನಿನ ಪ್ರಕಾರ ಹೆಚ್ಚಿನ ಪ್ರಮಾಣದ ದಂಡ ವಿಧಿಸಿ ಕಾನೂನು ರೀತಿಯ ಕ್ರಮಗಳನ್ನು ಕೈಗೊಳ್ಳಬೇಕಾಗಿ ಸೂಚಿಸಿದರು ಹಾಗೂ ಈ ಬಗ್ಗೆ ನಗರಸಭೆಯ ಅಧಿಕಾರಿಗಳ ತಂಡ ನಿಯಮಿತವಾಗಿ ಎಲ್ಲಾ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕಾಗಿ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಪೌರಾಯುಕ್ತರು, ನಗರಸಭೆ ಉಡುಪಿ/ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಧಿಕಾರಿ, ಉಡುಪಿ ಜಿಲ್ಲೆ)**

* ಎಲ್ಲೆಂದರಲ್ಲಿ ಎಳನೀರು ಸಿಪ್ಪೆಯನ್ನು ಬಿಸಾಡಿ ಅದರಲ್ಲಿ ನೀರು ತುಂಬಿ ಸಾಂಕ್ರಾಮಿಕ ರೋಗ ಹರಡುವುದನ್ನು ತಡೆಗಟ್ಟಲು, ಎಳನೀರು ಸಿಪ್ಪೆಯನ್ನು ಬಿಸಾಡುವ ಬದಲು ಅದರ ಮೌಲ್ಯವರ್ಧನೆ ಮಾಡುವ ಕುರಿತು ಪರಿಶೀಲಿಸುವಂತೆ ಹಾಗೂ ಜಿಲ್ಲೆಯಲ್ಲಿ ಇಂತಹ ಹೊಸ ಕೈಗಾರಿಕೋದ್ಯಮಗಳಿಗೆ ಪ್ರೋತ್ಸಾಹವನ್ನು ನೀಡುವಂತೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ ಉಡುಪಿ/ ಜಂಟಿ ನಿರ್ದೇಶಕರು ಕೈಗಾರಿಕಾ ಇಲಾಖೆ ಉಡುಪಿ )**

* ಸಹಕಾರಿ ಸಂಘಗಳ liquidation ಬಗ್ಗೆ ಚರ್ಚಿಸಲಾಗಿ, ಸಹಕಾರಿ ಸಂಸ್ಥೆಗಳ auction ಕರೆದು liquidation ಮಾಡಲು ಸೂಚಿಸಿದರು. ಈ ಬಗ್ಗೆ Liquidator ಗಳ ಸಭೆ ನಡೆಸಲು ಸೂಚಿಸಿದರು. ಹಾಗೂ 6 ತಿಂಗಳಲ್ಲಿ 4 ಸಹಕಾರಿ ಸಂಸ್ಥೆಗಳ liquidation ಆದರೂ ಆಗಬೇಕಾಗಿ ಈ ನಿಟ್ಟಿನಲ್ಲಿ ಕ್ರಮಕೈಗೊಳ್ಳಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಸಹಕಾರಿ ಸಂಘಗಳ ಉಪನಿಂಬಂಧಕರು, ಉಡುಪಿ )**

- ಯಾಂತ್ರಿಕೃತ ಮೀನುಗಾರಿಕೆ ದೋಣಿಗಳಿಗೆ ನೀಡಲಾಗುತ್ತಿರುವ ಡೀಸೇಲ್ ಮೇಲಿನ ರಾಜ್ಯ ಮಾರಾಟಕರ ಸಹಾಯಧನದಿಂದ Tracking Device ನ್ನು ಕಡ್ಡಾಯವಾಗಿ ಎಲ್ಲಾ ದೋಣಿಗಳಿಗೆ ಅಳವಡಿಸುವ ಬಗ್ಗೆ ಸರ್ಕಾರದ ನಿರ್ದೇಶನ ಪಡೆದು ಕ್ರಮ ಕೈಗೊಳ್ಳಲು ಉಪನಿರ್ದೇಶಕರು ಮೀನುಗಾರಿಕಾ ಇಲಾಖೆ ಉಡುಪಿ ಇವರಿಗೆ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಉಪನಿರ್ದೇಶಕರು, ಮೀನುಗಾರಿಕಾ ಇಲಾಖೆ ಉಡುಪಿ )**

- Capture Fisheries ನಿಂದ ಮೀನುಗಾರಿಕಾ ಉತ್ಪಾದನೆಯು ಕಡಿಮೆಯಾಗುತ್ತಿರುವುದನ್ನು ಗಮನಿಸಿ, ಪಂಜರಕೃಷಿ (Cage Culture) ಮೂಲಕ ಉತ್ಪಾದನೆ ಹೆಚ್ಚಿಸುವ ಬಗ್ಗೆ ಕ್ರಮಕೈಗೊಳ್ಳಲು ಹಾಗೂ ಇದಕ್ಕೆ ಬೇಕಾಗುವ ಅನುದಾನವನ್ನು ರಾಷ್ಟ್ರೀಯ ಕೃಷಿ ವಿಕಾಸ (RKVY) ಯೋಜನೆಯಡಿ ಬಳಸಿಕೊಳ್ಳುವ ಬಗ್ಗೆ ಪರಿಶೀಲಿಸಲು ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಉಪನಿರ್ದೇಶಕರು, ಮೀನುಗಾರಿಕಾ ಇಲಾಖೆ ಉಡುಪಿ )**

- ವಿವಿಧ ವಸತಿ ಯೋಜನೆಗಳಡಿ ಆಯ್ಕೆ ಆಗಿರುವ ಫಲಾನುಭವಿಗಳಿಗೆ ಅನುದಾನ ಪಾವತಿ ಕುರಿತು ಚರ್ಚಿಸಲಾಗಿ ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ 1529 ಮನೆಗಳಿಗೆ ವಿಜಿಲ್ ಮೊಬೈಲ್ ಆಪ್ ಮೂಲಕ ಪರಿಶೀಲಿಸಿ ಅನುದಾನ ಬಿಡುಗಡೆ ಮಾಡಲು ಬಾಕಿ ಇರುತ್ತದೆ. ಈ ಬಗ್ಗೆ ಶೀಘ್ರವಾಗಿ ಎಲ್ಲಾ 1529 ಮನೆಗಳನ್ನು ವಿಜಿಲ್ ಮೊಬೈಲ್ ಆಪ್ ಮೂಲಕ ಪರಿಶೀಲಿಸಿ ಅನುದಾನ ಬಿಡುಗಡೆ ಮಾಡಲು ಜಿಪಿಎಸ್ ಅಳವಡಿಸಲು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಉಡುಪಿ ಜಿಲ್ಲೆ, ಉಡುಪಿ)**

ಕೊನೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಂ.ಮಹೇಶ್ವರ್ ರಾವ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ದಿನಾಂಕ:11.02.2020 ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ತುಮಕೂರು ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ನಡೆಸಲಾದ ತುಮಕೂರು ಜಿಲ್ಲಾ ಕಂದಾಯ ಅಧಿಕಾರಿಗಳ ಸಭೆಯ ನಡವಳಿಗಳು.**

**ಹಾಜರಾತಿ:**

1. ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು
2. ಅಪರ ಜಿಲ್ಲಾಧಿಕಾರಿಯವರು,ತುಮಕೂರು ಜಿಲ್ಲೆ, ತುಮಕೂರು.
3. ಜಿಲ್ಲೆಯ ಎಲ್ಲಾ ಉಪವಿಭಾಗಾಧಿಕಾರಿಗಳು
4. ಜಿಲ್ಲೆಯ ಎಲ್ಲಾ ತಾಲ್ಲೂಕು ತಹಶೀಲ್ದಾರರು
5. ಕಛೇರಿ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ತುಮಕೂರು
6. ಜಿಲ್ಲಾಧಿಕಾರಿಗಳ ಕಛೇರಿಯ ಎಲ್ಲಾ ಶಿರಸ್ತೇದಾರರು.

ಸಭೆಯ ಪ್ರಾರಂಭದಲ್ಲಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರನ್ನು ಸಭೆಗೆ ಸ್ವಾಗತಿಸಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಜಿಲ್ಲಾ ಕಾರ್ಯದರ್ಶಿಗಳಿಗೆ ತಮ್ಮ ಪರಿಚಯ ಮಾಡಿಕೊಂಡರು.

ಮೊದಲಿಗೆ. ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ ಸಾಮಾಜಿಕ ಭದ್ರತಾ ಯೋಜನೆಯಡಿ ಫಲಾನುಭವಿಗಳಿಗೆ ನಿಗಧಿತ ಅವಧಿಯಲ್ಲಿ ಪಿಂಚಣಿ ತಲುಪಿಸಲಾಗುತ್ತಿದೆಯೇ ಎಂಬ ಬಗ್ಗೆ ಪ್ರಸ್ತಾಪಿಸಲಾಯಿತು.

1) ಮಾನ್ಯ ಕಾರ್ಯದರ್ಶಿ ಮಾತನಾಡಿ ಸಾಮಾಜಿಕ ಭದ್ರತಾ ಯೋಜನೆಯಡಿ ಮಂಜೂರಾದ ಪಿಂಚಣಿಗಳು ಎಲ್ಲಾ ಫಲಾನುಭವಿಗಳಿಗೆ ತಲುಪುತ್ತಿದೆಯೇ? ಮರಣ ಹೊಂದಿದ ಫಲಾನುಭವಿಗಳನ್ನು ಹಾಗೂ ಅನರ್ಹ ಫಲಾನುಭವಿಗಳನ್ನು ಗುರುತಿಸಿ ಪಿಂಚಣಿ ನಿಲ್ಲಿಸಲು ಕ್ರಮವಹಿಸಲಾಗುತ್ತಿದೆಯೇ? ಎಂದು ತಹಸೀಲ್ದಾರ್ ರವರಿಂದ ವಿವರಣೆ ಪಡೆಯಲಾಯಿತು.

ಮರಣ ಹೊಂದಿದ ಫಲಾನುಭವಿಗಳನ್ನು ಮರಣ ನೋಂದಣಿ ರಿಜಿಸ್ಟರ್ ಪರಿಶೀಲಿಸಿ ಕ್ರಮ ವಹಿಸಲು ಸೂಚಿಸಲಾಯಿತು. ಪೋಸ್ಟಲ್ ಎಂ.ಓ ಮುಖಾಂತರ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳಿಗೆ ಕೂಡಲೇ ಬ್ಯಾಂಕ್/ಪೋಸ್ಟಲ್ ಬ್ಯಾಂಕ್ ಖಾತೆ ತೆರೆಯಲು ಕ್ರಮ ವಹಿಸುವಂತೆ ಸೂಚಿಸಲಾಯಿತು. ಪಿಂಚಣಿದಾರರಿಗೆ ಸಕಾಲದಲ್ಲಿ ಪಿಂಚಣಿ ದೊರಕುವಂತೆ ಕ್ರಮ ವಹಿಸಲು ಸೂಚಿಸಲಾಯಿತು.

**(ಕ್ರಮ: ಜಿಲ್ಲೆಯ ಎಲ್ಲಾ ತಾಲ್ಲೂಕು ತಹಸೀಲ್ದಾರ್)**

2) **ಸಾರ್ವಜನಿಕ ರುದ್ರಭೂಮಿ ಸೌಲಭ್ಯ ಒದಗಿಸುವ ಬಗ್ಗೆ:-**

ತುಮಕೂರು ಜಿಲ್ಲೆಯಲ್ಲಿ ಒಟ್ಟು 2729 ಗ್ರಾಮಗಳಿದ್ದು ಈ ಪೈಕಿ 1790 ಗ್ರಾಮಗಳಲ್ಲಿ ಸ್ಮಶಾನದ ಉದ್ದೇಶಕ್ಕಾಗಿ ಜಮೀನು ಕಾಯ್ದಿರಿಸಲಾಗಿದ್ದು ಉಳಿಕೆ 683 ಗ್ರಾಮಗಳು ಬಾಕಿ ಇರುತ್ತದೆ.ಈ ಬಗ್ಗೆ ಜಿಲ್ಲೆಯ ಎಲ್ಲಾ ತಹಶೀಲ್ದಾರ್ ರವರುಗಳು ವೈಯಕ್ತಿಕ ಗಮನ ಹರಿಸಿ ಕೂಡಲೇ ಸರ್ಕಾರಿ ಜಮೀನನ್ನು ಕಾಯ್ದಿರಿಸಲು ಕ್ರಮ ವಹಿಸಲು ಸೂಚಿಸಲಾಯಿತು ಹಾಗೂ ಸರ್ಕಾರಿ ಜಮೀನುಗಳು ಲಭ್ಯವಿಲ್ಲದಿದ್ದಲ್ಲಿ ಖಾಸಗಿಯವರಿಂದ ಖರೀದಿಸಲು ಕ್ರಮ ವಹಿಸುವಂತೆ ಸೂಚಿಸಲಾಯಿತು.

(ಕ್ರಮ: ಜಿಲ್ಲೆಯ ಎಲ್ಲಾ ತಾಲ್ಲೂಕು ತಹಸೀಲ್ದಾರ್)

3) **ಸರ್ಕಾರಿ ವಿದ್ಯಾರ್ಥಿ ನಿಲಯ/ ವಸತಿ ನಿಲಯಗಳಿಗೆ ಜಮೀನು ಮಂಜೂರು ಮಾಡುವ ಬಗ್ಗೆ..**

ತುಮಕೂರು ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ವಿದ್ಯಾರ್ಥಿ ನಿಲಯಕ್ಕೆ 1 ನಿವೇಶನ ನೀಡಲು, ಹಿಂದುಳಿದ ವರ್ಗಗಳ ಇಲಾಖೆ ವಿದ್ಯಾರ್ಥಿ ನಿಲಯಕ್ಕೆ 2 ನಿವೇಶನ ಹಾಗೂ ಅಲ್ಪ ಸಂಖ್ಯಾತ ಇಲಾಖೆ ವಿದ್ಯಾರ್ಥಿ ನಿಲಯಕ್ಕೆ 1 ನಿವೇಶನ ಒಟ್ಟು 4 ನಿವೇಶನ ನೀಡಲು ಬಾಕಿ ಇದ್ದು ತಹಶೀಲ್ದಾರ್ ಹಾಗೂ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಕ್ರಮ ವಹಿಸಲು ಸೂಚಿಸಲಾಯಿತು.

**(ಕ್ರಮ: ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಹಾಗೂ ಸಂಬಂಧಿಸಿದ ತಾಲ್ಲೂಕು ತಹಸೀಲ್ದಾರ್**

4) **ರೈಲ್ವೇ, ರಸ್ತೆ, ಏರ್‌ಪೋರ್ಟ್ ಮತ್ತು ಇತರೆ ಮೂಲಭೂತ ಸೌಕರ್ಯ ಯೋಜನೆಗಳಿಗೆ ಅವಶ್ಯವಿರುವ ಭೂಮಿಗಾಗಿ ಭೂಸ್ವಾಧೀನ ಪ್ರಗತಿ**

ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ **ತುಮಕೂರು – ರಾಯದುರ್ಗ ರೈಲ್ವೇ ಯೋಜನೆ**ಯಡಿ ಒಟ್ಟು 77 ಗ್ರಾಮಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿ ಇದ್ದು 718–16.04 ಎ/ಗುಂಟೆ ಜಮೀನು ಭೂಸ್ವಾಧೀನಗೊಳಿಸುವ ಪ್ರಕ್ರಿಯೆ ಬಾಕಿ ಇರುತ್ತದೆ.

**ತುಮಕೂರು – ದಾವಣಗೆರೆ ರೈಲ್ವೇ ಯೋಜನೆ**ಯಡಿ ಒಟ್ಟು 47 ಗ್ರಾಮಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿ ಇರುತ್ತದೆ.

**ತುಮಕೂರು – ಅರಸೀಕೆರೆ ರೈಲ್ವೇ ದ್ವಿಪಥ ಯೋಜನೆ**ಯಡಿ ಒಟ್ಟು ವಿವಿಧ ಗ್ರಾಮಗಳಲ್ಲಿ 29–11 ಎ/ಗು ಜಮೀನು ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿ ಇರುತ್ತದೆ.

**ಎತ್ತಿಹೊಳೆ ಯೋಜನೆ**:ಒಟ್ಟು 61 ಗ್ರಾಮಗಳ ಪೈಕಿ 52 ಗ್ರಾಮಗಳಲ್ಲಿ ಭೂಸ್ವಾದೀನ ಪ್ರಕ್ರಿಯೆ ಪ್ರಗತಿಯಲ್ಲಿ ಇರುತ್ತದೆ.

**ರಾಷ್ಟ್ರೀಯ ಹೆದ್ದಾರಿ 206** ತುಮಕೂರು ಜಿಲ್ಲೆ ವ್ಯಾಪ್ತಿಗೆ ಸಂಬಂಧಿಸಿದಂತೆ 89 ಗ್ರಾಮಗಳಲ್ಲಿ 77 ಗ್ರಾಮಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದು 12 ಗ್ರಾಮಗಳಲ್ಲಿ ಬಾಕಿ ಇರುತ್ತದೆ.

ಮೇಲ್ಕಂಡ ಎಲ್ಲಾ ಯೋಜನೆಗಳಲ್ಲಿ ಆದ್ಯತೆ ಮೇರೆಗೆ ಶೀಘ್ರವಾಗಿ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಲು ತಿಳಿಸಲಾಯಿತು.

**(ಕ್ರಮ:ಜಿಲ್ಲೆಯ ಜಿಲ್ಲಾಧಿಕಾರಿಗಳು, ಎಲ್ಲಾ ಭೂಸ್ವಾಧೀನಾಧಿಕಾರಿಗಳು, ಹಾಗೂ ಎಲ್ಲಾ ಉಪವಿಭಾಗಾಧಿಕಾರಿಗಳು)**

5) **ಸರ್ಕಾರಿ ಭೂಮಿ ಒತ್ತುವರಿ ತೆರವುಗೊಳಿಸುವ ಬಗ್ಗೆ**. ತುಮಕೂರು ಜಿಲ್ಲೆಯಲ್ಲಿ ಒಟ್ಟು 447154.09 ಎಕರೆ ವಿಸ್ತೀರ್ಣದ ಸರ್ಕಾರಿ ಭೂಮಿ ಇದ್ದು ಈ ಪೈಕಿ 13062–06 ಎ/ಗು ಜಮೀನು ಒತ್ತುವರಿಯಾಗಿರುತ್ತದೆ ನ್ಯಾಯಾಲಯ ಪ್ರಕರಣ, ನಮೂನೆ –50,53, 94ಸಿ ಹೊರತು ಪಡಿಸಿ 11111.01 ಎಕರೆ ವಿಸ್ತೀರ್ಣ ತೆರವು ಗೊಳಿಸಬೇಕಾಗಿರುತ್ತದೆ ಈ ಪೈಕಿ 9682–13 ಎ/ಗು ಜಮೀನು ತೆರವುಗೊಳಿಸಲಾಗಿದ್ದು 2428–28 ಎ/ಗು

ತೆರವುಗೊಳಿಸಲು ಬಾಕಿ ಇರುತ್ತದೆ. ಪಾವಗಡ ತಾಲ್ಲೂಕಿನಲ್ಲಿ 5-10 ಎಕರೆ ಹಾಗೂ 10 ಎಕರೆ ಮೇಲ್ಪಟ್ಟು 9 ಪ್ರಕರಣಗಳು ಇದ್ದು ಕೂಡಲೇ ತೆರವುಗೊಳಿಸಲು ಸೂಚಿಸಲಾಯಿತು.

**(ಕ್ರಮ: ಜಿಲ್ಲೆಯ ಎಲ್ಲಾ ತಾಲ್ಲೂಕು ತಹಸೀಲ್ದಾರ್)**

6) **ಸರ್ಕಾರಿ ಜಮೀನುಗಳಲ್ಲಿ ಅನಧೀಕೃತವಾಗಿ ದಾರ್ಮಿಕ ಕಟ್ಟಡಗಳು ನಿರ್ಮಿಸಿದ್ದು ತರವುಗೊಳಿಸುವ ಬಗ್ಗೆ**

ತುಮಕೂರು ಜಿಲ್ಲೆಯಲ್ಲಿ ದಿನಾಂಕ 21-09-2009 ಕ್ಕೆ ಮುಂಚಿತವಾಗಿ 129 ಪ್ರಕರಣಗಳನ್ನು ಗುರುತಿಸಲಾಗಿದ್ದು ಈ ಪೈಕಿ 122 ಪ್ರಕರಣಗಳಲ್ಲಿ ತೆರವುಗೊಳಿಸಲಾಗಿದ್ದು ನಂತರ ನಿರ್ಮಿತವಾದ ಕಟ್ಟಡಗಳ ಸರ್ವೇ ಕಾರ್ಯ ನಡೆಸಿ ಸರ್ಕಾರಕ್ಕೆ ವರದಿ ನೀಡಲಾಗುವುದು. ಸಕಾರದ ನಿರ್ದೇಶನದಂತೆ ಸೂಕ್ತ ಕ್ರಮ ವಹಿಸಲು ಸೂಚಿಸಲಾಯಿತು.

**(ಕ್ರಮ: ಎಲ್ಲಾ ನಗರಸಭೆ/ನಗರ ಪಾಲಿಕೆ ಆಯುಕ್ತರು/ಮುಖ್ಯಾಧಿಕಾರಿಗಳು ಹಾಗೂ ಎಲ್ಲಾ ತಾಲ್ಲೂಕು ತಹಶೀಲ್ದಾರ್ ರವರು)**

7) **ಭೂಸುಧಾರಣಾ ಕಾಯ್ದೆ 79ಎ &ಬಿ ಅಡಿ ದಾಖಲಾಗಿರುವ ಪ್ರಕರಣಗಳು ಪ್ರಗತಿ:**

ತುಮಕೂರು ಜಿಲ್ಲೆಯ ವಿವಿಧ ಉಪವಿಭಾಗದಲ್ಲಿ ಒಟ್ಟು 287 ಪ್ರಕರಣಗಳು ಬಾಕಿ ಇದ್ದು 93 ಪ್ರಕರಣಗಳು ಒಂದು ವರ್ಷದೊಳಗೆ, 100 ಪ್ರಕರಣಗಳು 1-2 ವರ್ಷದೊಳಗೆ ಮತ್ತು 94 ಪ್ರಕರಣಗಳು 2-5 ವರ್ಷದೊಳಗೆ ಇರುತ್ತದೆ ಆದ್ಯತೆ ಮೇರೆಗೆ 2-5 ವರ್ಷದಲ್ಲಿ ಇರುವ ಪ್ರಕರಣಗಳನ್ನು ಕೂಡಲೇ ಇತ್ಯರ್ಥಗೊಳಿಸಲು ಸೂಚಿಸಲಾಯಿತು.

**(ಕ್ರಮ: ಎಲ್ಲಾ ಉಪವಿಭಾಗಾಧಿಕಾರಿಗಳು)**

**08) ಕಂದಾಯ ನ್ಯಾಯಾಲಯ ಪ್ರಕರಣಗಳ ವಿಲೇವಾರಿ.:**

ತುಮಕೂರು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ವಿವಿಧ ವಿಭಾಗಗಳಲ್ಲಿ ಒಟ್ಟು 2212 ನ್ಯಾಯಾಲಯ ಪ್ರಕರಣಗಳು ಬಾಕಿ ಇರುತ್ತದೆ, ಉಪವಿಭಾಗಾಧಿಕಾರಿಗಳು, ತಹಶೀಲ್ದಾರ್ ನ್ಯಾಯಾಲಯ ಸೇರಿ ಒಟ್ಟು 20670 ಪ್ರಕರಣಗಳು ಬಾಕಿ ಇರುತ್ತದೆ ನ್ಯಾಯಾಲಯದ ಇತ್ತೀಚಿನ ವರದಿಯಂತೆ 3 ತಿಂಗಳೊಳಗಾಗಿ ಕಂದಾಯ ನ್ಯಾಯಾಲಯ ಪ್ರಕರಣಗಳನ್ನು ಇತ್ಯರ್ಥಗೊಳಿಸಬೇಕೆಂದು ಅಭಿಪ್ರಾಯಪಟ್ಟಿದ್ದು ಅದರಂತೆ ಶೀಘ್ರವಾಗಿ ಇತ್ಯರ್ಥಗೊಳಿಸಲು ಸೂಚಿಸಲಾಯಿತು.

**(ಕ್ರಮ: ಜಿಲ್ಲಾಧಿಕಾರಿಗಳು, ಎಲ್ಲಾ ಉಪವಿಭಾಗಾಧಿಕಾರಿಗಳು, ಎಲ್ಲಾ ತಾಲ್ಲೂಕು ತಹಸೀಲ್ದಾರರು)**

**09)** ಸ್ಮಾರ್ಟ್‌ಸಿಟಿ ಯೋಜನೆಗೆ ಸಂಬಂಧಿಸಿದಂತೆ ಆಯುಕ್ತರಿಂದ ಮಾಹಿತಿ ಪಡೆಯಲಾಯಿತು ಸ್ಮಾರ್ಟ್ ಸಿಟಿಗೆ ಸಂಬಂಧಿಸಿದ ಕಾಮಗಾರಿಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಲು ಕ್ರಮವಹಿಸುವಂತೆ ಸೂಚಿಸಲಾಯಿತು

ಚರ್ಚಿಸಲು ಇತರೆ ವಿಷಯಗಳು ಇಲ್ಲವಾದ್ದರಿಂದ ಸಭೆ ಮುಕ್ತಾಯಗೊಳಿಸಲಾಯಿತು.

(ರಾಕೇಶ್ ಸಿಂಗ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಹಾಗೂ ತುಮಕೂರು ಜಿಲ್ಲಾ
ಉಸ್ತುವಾರಿ ಕಾರ್ಯದರ್ಶಿಗಳು

ಪ್ರತಿಯನ್ನು:-
1 ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ರವರಿಗೆ
2.ಜಿಲ್ಲೆಯ ಎಲ್ಲಾ ಉಪವಿಭಾಗಾಧಿಕಾರಿಗಳು, ತುಮಕೂರು ಜಿಲ್ಲೆ.
3.ಜಿಲ್ಲೆಯ ಎಲ್ಲಾ ತಾಲ್ಲೂಕು ತಹಸೀಲ್ದಾರ್.
4.ಉಪನಿರ್ದೇಶಕರು, ಭೂಮಾಪನಾ ಇಲಾಖೆ, ತುಮಕೂರು.
5.ಕಛೇರಿ ಪ್ರತಿ

**ದಿನಾಂಕ: 13-02-2020 ರಂದು ಮಧ್ಯಾಹ್ನ 12-00 ಗಂಟೆಗೆ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಕರ್ನಾಟಕ ಸರಕಾರ ಬೆಂಗಳೂರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡುವಳಿಗಳು**

ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಧಾರವಾಡರವರು ಸಭೆಯ ಅಧ್ಯಕ್ಷತೆ ವಹಿಸಿರುವ **ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರಿಗೆ,** ಜಿಲ್ಲಾಧಿಕಾರಿಯವರಿಗೆ, ಆಯುಕ್ತರು. ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ, ಉಪ ವಿಭಾಗಾಧಿಕಾರಿಯವರಿಗೆ ಮತ್ತು ವಿವಿಧ ಇಲಾಖಾ ಮುಖ್ಯಸ್ಥರಿಗೆ ಹಾಗೂ ಸಭೆಗೆ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರಿದರು.

ಸಭೆಯಲ್ಲಿ ಅತಿವೃಷ್ಟಿಯಿಂದ ಹಾನಿಯಾದ ಮನೆಗಳಿಗೆ ಸಂಬಂಧಿಸಿದಂತೆ ಎ ಮತ್ತು ಬಿ ಕೆಟಗರಿ ಮನೆಗಳ ಕಾಮಗಾರಿಗಳ ಕುರಿತು ಈ ಕೆಳಗಿನಂತೆ ಚರ್ಚಿಸಲಾಯಿತು.

- ಎ ವರ್ಗಕ್ಕೆ ಸಂಬಂಧಿಸಿದಂತೆ ಧಾರವಾಡ ಜಿಲ್ಲೆಯ 128 ಮನೆಗಳು ಅನುಮೋದಿಸಲ್ಪಟ್ಟಿದ್ದು, ಈ ಪೈಕಿ 72 ಮನೆಗಳು ತಳಪಾಯ ಹಂತದಲ್ಲಿವೆ. ಸದರಿ ಮನೆಗಳ ಫಲಾನುಭವಿಗಳಿಗೆ ರಾಜೀವಗಾಂಧಿ ವಸತಿ ನಿಗಮದಿಂದ 2 ಕಂತಿನ ಅನುದಾನ ಪ್ರತಿ ಮನೆಗೆ ರೂ. 1.00 ಲಕ್ಷ ಬಿಡುಗಡೆಯಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳವರ ಗಮನಕ್ಕೆ ತಂದರು. ಹಾಗೂ ಉಳಿದ 56 ರ ಪೈಕಿ 53 ಮನೆಗಳ ನಿರ್ಮಾಣ ಕಾರ್ಯವನ್ನು ಕೈಕೊಂಡು 2ನೇ ಕಂತಿನ ಅನುದಾನವನ್ನು ಫೆಬ್ರುವರಿ ಅಂತ್ಯದೊಳಗೆ ಬಿಡುಗಡೆ ಮಾಡಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.
- ಧಾರವಾಡ ಜಿಲ್ಲೆಯಲ್ಲಿ ಬಿ ವರ್ಗದ ಒಟ್ಟು 1686 ಮನೆಗಳು ಅನುಮೋದಿಸಲ್ಪಟ್ಟಿದ್ದು, ಈ ಪೈಕಿ 831 ಮನೆಗಳು ತಳಪಾಯ ಹಂತದಲ್ಲಿವೆ. ಸದರಿ ಮನೆಗಳ ಫಲಾನುಭವಿಗಳಿಗೆ ರಾಜೀವಗಾಂಧಿ ವಸತಿ ನಿಗಮದಿಂದ 2 ಕಂತಿನ ಅನುದಾನ ಪ್ರತಿ ಮನೆಗೆ ರೂ. 1.00 ಲಕ್ಷ ಬಿಡುಗಡೆಯಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳವರ ಗಮನಕ್ಕೆ ತಂದರು. ಉಳಿದ 855 ಮನೆಗಳ ನಿರ್ಮಾಣ ಕಾರ್ಯವನ್ನು ಕೈಕೊಳ್ಳಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದಾಗ ಇದರಲ್ಲಿ ಕೆಲವು ಮನೆಗಳ ನಿರ್ಮಾಣ ಕಾರ್ಯ ಪ್ರಾರಂಭಿಸಲು ತಾಂತ್ರಿಕ ತೊಂದರೆ ಇರುವುದಾಗಿ ಅಧಿಕಾರಿಗಳು ತಿಳಿಸಿದರು. ತಾಂತ್ರಿಕ ತೊಂದರೆ ಇರುವ ಮನೆಗಳನ್ನು ಹೊರತುಪಡಿಸಿ, ಉಳಿದ ಮನೆಗಳ ನಿರ್ಮಾಣ ಕಾರ್ಯ ಕೈಕೊಂಡು 2ನೇ ಕಂತಿನ ಅನುದಾನವನ್ನು ಫೆಬ್ರವರಿ ಅಂತ್ಯದೊಳಗೆ ಬಿಡುಗಡೆ ಮಾಡಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.
- **ತಹಶೀಲ್ದಾರ ಧಾರವಾಡ ಹಾಗೂ ತಹಶೀಲ್ದಾರ ಅಳ್ನಾವರ** ಇವರುಗಳು ಗ್ರಾಮೀಣ ಭಾಗದ ಎ ವರ್ಗದ 41 ಮನೆಗಳಿಗೆ ಸಂಬಂಧಿಸಿದಂತೆ ಮಾತನಾಡಿ 15 ಮನೆಗಳು ತಳಪಾಯ ಹಂತದಲ್ಲಿವೆ. ಸದರಿಯ ಫಲಾನುಭವಿಗಳಿಗೆ 1ನೇ ಕಂತಿನ ಅನುದಾನವನ್ನು ಈಗಾಗಲೇ ನೀಡಲಾಗಿದ್ದು, ಫೆಬ್ರವರಿ ತಿಂಗಳ ಅಂತ್ಯದೊಳಗಾಗಿ 39 ಮನೆಗಳನ್ನು ನಿರ್ಮಾಣದ ಕಾರ್ಯವನ್ನು ಪ್ರಾರಂಭಿಸುವುದಾಗಿ ಸಭೆಯ ಗಮನಕ್ಕೆ ತಂದರು ಹಾಗೂ ಬಿ ವರ್ಗದ 844 ಮನೆಗಳ ಪೈಕಿ ಈಗಾಗಲೇ 471 ಮನೆಗಳು ತಳಪಾಯ ಹಂತದಲ್ಲಿದ್ದು, ಫೆಬ್ರವರಿ ಅಂತ್ಯಕ್ಕೆ ಒಟ್ಟು 800 ಮನೆಗಳ ನಿರ್ಮಾಣದ ಕಾರ್ಯವನ್ನು ಪ್ರಾರಂಭಿಸಲಾಗುವುದು ಎಂದು ತಹಶೀಲ್ದಾರರು ಸಭೆಯ ಗಮನಕ್ಕೆ ತಂದರು. ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಕೂಡಲೇ ಸದರಿ ಮನೆಗಳ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಸೂಚಿಸಿದರು.
- **ತಹಶೀಲ್ದಾರ ಅಳ್ನಾವರ** ಇವರು ಮಾತನಾಡಿ (ನಗರ) ತಾಲ್ಲೂಕಿನ 58 ಮನೆಗಳಲ್ಲಿ 40 ಜಿ.ಪಿ.ಎಸ್. ಮತ್ತು ಅಡಿಟ್ ಮಾಡಲಾಗಿದ್ದು, ತಾಂತ್ರಿಕ ತೊಂದರೆಯಿಂದ 1ನ್ನು ಕೈಬಿಟ್ಟಿದ್ದು, ಅದನ್ನು ಸರಿಪಡಿಸಿ ಆದಷ್ಟು ಬೇಗನೇ ಸದರಿ ಕಾರ್ಯದ ಕಾಮಗಾರಿಯನ್ನು ಪ್ರಾರಂಭಿಸಲಾಗುವುದೆಂದು ಸಭೆಯ ಗಮನಕ್ಕೆ ತಂದರು. ಬಿ ವರ್ಗದ 1ನೇ ಹಂತದ 11 ಮನೆಗಳಲ್ಲಿ, ಅಳ್ನಾವರ ತಾಲ್ಲೂಕಿನಲ್ಲಿ 6 ಮನೆಗಳು ಅಡಿಟ್ ಮಾಡಲು ಬಾಕಿ ಉಳಿದಿರುತ್ತವೆ.

ಒಂದು ವಾರದಲ್ಲಿ ಎಲ್ಲಾ ಮನೆಗಳ ಪ್ಲಿಂತ್ ಹಂತದ ಜಿ ಪಿ ಎಸ್ ಮಾಡಲು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

- **ತಹಶೀಲ್ದಾರ ಕಲಘಟಗಿ** ಇವರು ಮಾತನಾಡಿ ಗ್ರಾಮೀಣ ಹಾಗೂ ನಗರಕ್ಕೆ ಸಂಬಂಧಿಸಿದಂತೆ ಎ ವರ್ಗದ ಮನೆಗಳಲ್ಲಿ 5 ಮನೆಗಳ ಪೈಕಿ 3 ಮನೆಗಳು ತಳಪಾಯ ಹಂತದಲ್ಲಿವೆ ಹಾಗೂ ಬಿ ವರ್ಗದ (ಗ್ರಾಮೀಣ) ಮನೆಗಳ ಪೈಕಿ 113 ಮನೆಗಳಲ್ಲಿ, 44 ಮನೆಗಳು ಪ್ರಗತಿ ಹಂತದಲ್ಲಿವೆ. ನಗರ ಪ್ರದೇಶದ ಬಿ ವರ್ಗದ 12 ಮನೆಗಳು ಪ್ರಾರಂಭವಾಗಿರುವುದಿಲ್ಲ ಮತ್ತು ಗ್ರಾಮೀಣ ಪ್ರದೇಶದ 69 ಫಲಾನುಭವಿಗಳು ಮನೆಯ ನಿರ್ಮಾಣವನ್ನು ಪ್ರಾರಂಭಿಸಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಕೂಡಲೇ ಎಲ್ಲಾ ಮನೆಗಳ ಕಾಮಗಾರಿಯನ್ನು ಪ್ರಾರಂಭಿಸಲು ಫೆಬ್ರವರಿ ಅಂತ್ಯದ ಗಡುವು ನೀಡಿದರು.

- **ತಹಶೀಲ್ದಾರ ಕುಂದಗೋಳ** ಇವರು ಮಾತನಾಡಿ ಎ ವರ್ಗಕ್ಕೆ ಸಂಬಂಧಿಸಿದಂತೆ 8 ಮನೆಗಳ ಪೈಕಿ 1 ಮನೆಯು ತಳಪಾಯ ಹಂತದಲ್ಲಿದೆ. ಫೆಬ್ರುವರಿ ಅಂತ್ಯದೊಳಗೆ 6 ಮನೆಗಳ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು ಮತ್ತು ಗ್ರಾಮೀಣ ಪ್ರದೇಶದ ಬಿ ವರ್ಗದ 79 ಮನೆಗಳಲ್ಲಿ 36 ಮನೆಗಳನ್ನು ಜಿ.ಪಿ.ಎಸ್/ ಹಾಗೂ 34 ಮನೆಗಳನ್ನು ಅಡಿಟ್ ಮಾಡಲಾಗಿದ್ದು, ಯಾವುದೇ ಮನೆಗಳು ಮೇಲ್ಛಾವಣಿ ಹಾಗೂ ಮುಕ್ತಾಯ ಹಂತದಲ್ಲಿ ಇರದೇ ಇರುವುದರಿಂದ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಲಾಯಿತು ಹಾಗೂ ನಗರ ಪ್ರದೇಶದ 25 ಬಿ ವರ್ಗದ ಮನೆಗಳಲ್ಲಿ 9 ಮನೆಗಳನ್ನು ಪ್ರಾರಂಭಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಫೆಬ್ರವರಿ ಅಂತ್ಯದೊಳಗೆ 13 ಮನೆಗಳನ್ನು ಪ್ರಾರಂಭಿಸುವಂತೆ ಸೂಚಿಸಿದರು.
- **ತಹಶೀಲ್ದಾರ ಹುಬ್ಬಳ್ಳಿ** ಇವರು ಮಾತನಾಡಿ ಎ ವರ್ಗದ ಮನೆಗಳಲ್ಲಿ 4 ಮನೆಗಳನ್ನು ಪ್ರಾರಂಭಿಸಲಾಗಿದ್ದು, 1 ಮನೆಯನ್ನು ರಾಜೀವ ಗಾಂಧಿ ವಸತಿ ನಿಗಮದಿಂದ ಬ್ಲಾಕ್ ಮಾಡಲಾಗಿದೆ ಹಾಗೂ ಬಿ ವರ್ಗದ 41 ಮನೆಗಳ ಪೈಕಿ 11 ಮನೆಗಳ ಕಾಮಗಾರಿ ಪ್ರಾರಂಭವಾಗಿದ್ದು, 4 ಮನೆಗಳ ಕಾಮಗಾರಿಯು ಲಿಂಟಲ್ ಹಂತಕ್ಕೆ ಬಂದಿದೆ ಎಂದು ತಿಳಿಸಿದರು. 28 ಮನೆಗಳನ್ನು ಫೆಬ್ರವರಿ ಅಂತ್ಯದೊಳಗೆ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು
- ನವಲಗುಂದ/ಅಣ್ಣಿಗೇರಿ ತಾಲೂಕಿನ ಗ್ರಾಮೀಣ ಪ್ರದೇಶದ ಬಿ ವರ್ಗದ 48 ಮನೆಗಳಲ್ಲಿ, 15 ಮನೆಗಳು ಜಿ.ಪಿ.ಎಸ್/ಅಡಿಟ್ ಕಾರ್ಯ ಮುಕ್ತಾಯಗೊಂಡಿದ್ದು, 30 ಮನೆಗಳ ನಿರ್ಮಾಣ ಕಾರ್ಯವನ್ನು ಫೆಬ್ರವರಿ ಅಂತ್ಯದೊಳಗಾಗಿ ಪೂರ್ಣಗೊಳಿಸಲು ಮಾನ್ಯರು ತಿಳಿಸಿದರು.
- ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಗೆ ಸಂಬಂಧಿಸಿದಂತೆ ಒಟ್ಟು ಬಿ ವರ್ಗದ 456 ಮನೆಗಳಲ್ಲಿ, 221 ಮನೆಗಳ ಜಿ.ಪಿ.ಎಸ್. ಮಾಡಲಾಗಿರುತ್ತದೆ ಮತ್ತು ತಾಂತ್ರಿಕ ತೊಂದರೆಯಿಂದ 150 ಮನೆಗಳು ಪ್ರಾರಂಭವಾಗಿರುವುದಿಲ್ಲ. ಇನ್ನುಳಿದಂತೆ ಪ್ರಾರಂಭದ ಹಂತದಲ್ಲಿರುವ 292 ಮನೆಗಳನ್ನು ಫೆಬ್ರವರಿ ತಿಂಗಳ ಅಂತ್ಯಕ್ಕೆ ಮುಕ್ತಾಯ ಮಾಡುವುದಾಗಿ ಪಾಲಿಕೆಯ ಆಯುಕ್ತರು ತಿಳಿಸಿದರು.
- **ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ ಧಾರವಾಡ** ಇವರನ್ನು ಕೇಳಲಾಗಿ ಈಗಾಗಲೇ 265 ಶಾಲಾ ಕಟ್ಟಡಗಳಲ್ಲಿ 257 ಕಟ್ಟಡ ಕಾಮಗಾರಿಗಳು ಮುಕ್ತಾಯಗೊಂಡಿದ್ದು, ಇನ್ನು 8 ಕಾಮಗಾರಿಗಳು ಬಾಕಿ ಇವೆ. ಸದರಿ ಕಾಮಗಾರಿಗಳನ್ನು 7 ದಿನಗಳಲ್ಲಿ ಮುಕ್ತಾಯಗೊಳಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.
- ರಸ್ತೆ ದುರಸ್ತಿಗೆ ಸಂಬಂಧಿಸಿದಂತೆ 398 ಕಾಮಗಾರಿಗಳು ಪೂರ್ಣಗೊಂಡಿದ್ದು, 8 ಕಾಮಗಾರಿ ಬಾಕಿ ಇದ್ದು, ಸದರಿ ಕಾಮಗಾರಿಗಳನ್ನು 7 ದಿನಗಳಲ್ಲಿ ಮುಕ್ತಾಯಗೊಳಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

- ಕುಡಿಯುವ ನೀರಿನ ಟ್ಯಾಂಕ್ ರಿಪೇರಿಗೆ ಸಂಬಂಧಿಸಿದಂತೆ 51 ಟ್ಯಾಂಕ್ ರಿಪೇರಿ ಇದ್ದು, 47 ಟ್ಯಾಂಕ್ ದುರಸ್ತಿ ಕಾರ್ಯ ಪೂರ್ಣಗೊಳಿಸಲಾಗಿದ್ದು, ಉಳಿದ 4 ಟ್ಯಾಂಕ್‌ಗಳ ದುರಸ್ತಿ ಕಾರ್ಯ ಬಾಕಿ ಇರುವುದಾಗಿ ಕಾರ್ಯಪಾಲಕ ಅಭಿಯಂತರರು ತಿಳಿಸಿದರು. ಸದರಿ ಕಾಮಗಾರಿಗಳನ್ನು 7 ದಿನಗಳಲ್ಲಿ ಮುಕ್ತಾಯಗೊಳಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.
- **ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ** 161 ಕಾಮಗಾರಿಗಳ ಪೈಕಿ 119 ಕಾಮಗಾರಿಗಳು ಪೂರ್ಣಗೊಂಡಿದ್ದು, 40 ಕಾಮಗಾರಿಗಳು ಪ್ರಗತಿ ಹಂತದಲ್ಲಿರುತ್ತವೆ. ಹಾಗೂ 2 ಕಾಮಗಾರಿಗಳು ಟೆಂಡರ್ ಹಂತದಲ್ಲಿರುತ್ತವೆ ಎಂದು ಕಾರ್ಯಪಾಲಕ ಅಭಿಯಂತರರು ಸಭೆಯ ಗಮನಕ್ಕೆ ತಂದರು.
- **ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗಕ್ಕೆ ಸಂಬಂಧಿಸಿದಂತೆ** ರೂ. 14.00 ಕೋಟಿ ಕಾಮಗಾರಿ ಅಂದಾಜು ವೆಚ್ಚ ಆಗಿದ್ದು, 41 ಕಾಮಗಾರಿ ಪ್ರಾರಂಭವಾಗಿದ್ದು, 106 ಕಾಮಗಾರಿಗಳ ಟೆಂಡರ್ ಹಂತದಲ್ಲಿದ್ದು, 25 ಕಾಮಗಾರಿಗಳು ಮುಕ್ತಾಯವಾಗಿರುವುದಾಗಿ ಕಾರ್ಯಪಾಲಕ ಅಭಿಯಂತರರು ತಿಳಿಸಿದರು. ಮಾನ್ಯರು ಮಾರ್ಚ್-15ರೊಳಗಾಗಿ ಎಲ್ಲಾ ಕಾರ್ಯಗಳನ್ನು ಪೂರ್ಣಗೊಳಿಸಲು ಸೂಚಿಸಿದರು.
- **ಸಣ್ಣ ನೀರಾವರಿ ಇಲಾಖೆಗೆ ಸಂಬಂಧಿಸಿದಂತೆ** 172 ಕಾಮಗಾರಿಗಳಲ್ಲಿ 16 ಕಾಮಗಾರಿಗಳು ಮುಕ್ತಾಯವಾಗಿದ್ದು, 150 ಕಾಮಗಾರಿಗಳು ಪ್ರಗತಿ ಹಂತದಲ್ಲಿದ್ದು, 6 ಕಾಮಗಾರಿಗಳು ಟೆಂಡರ್ ಹಂತದಲ್ಲಿವೆ ಎಂದು ಕಾರ್ಯಪಾಲಕ ಅಭಿಯಂತರರು ತಿಳಿಸಿದರು. ಉಳಿದ ಕಾಮಗಾರಿಗಳನ್ನು ಮಾರ್ಚ್-15 ರೊಳಗಾಗಿ ಮುಕ್ತಾಯಗೊಳಿಸುವಂತೆ ಮಾನ್ಯರು ಸೂಚಿಸಿದರು.
- ಜಿಲ್ಲೆಯಾದ್ಯಂತ ಒಟ್ಟು ಹಾನಿಯಾದ ಮನೆಗಳಿಗೆ ಹಂತ ಹಂತವಾಗಿ ಫಲಾನುಭವಿಗಳಿಗೆ ಅನುದಾನ ಬಿಡುಗಡೆಯಾಗಿರುವ ಕುರಿತು ಸಂಬಂಧಿಸಿದ ನೋಡಲ್ ಅಧಿಕಾರಿಯವರು ಪರಿಶೀಲಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದರು.

ಸರ್ಕಾರವು ನೆರೆ ಸಂತ್ರಸ್ತರಿಗೆ ಪುನರ್ ವಸತಿ ಕಲ್ಪಿಸಲು ನಿರ್ದೇಶಿಸಿದ್ದು, ನೆರೆಯಿಂದ ಹಾನಿಗೊಳಗಾದ ಎಲ್ಲಾ ಮನೆಗಳ ಪುನರ್ ನಿರ್ಮಾಣ ಕಾರ್ಯವನ್ನು ಒಂದು ವಾರದೊಳಗೆ ಆರಂಭಿಸಬೇಕು. ಈ ಬಗ್ಗೆ ಎಲ್ಲಾ ಅಧಿಕಾರಿಗಳು ವೈಯಕ್ತಿಕ ಗಮನಹರಿಸಿ ಕಾರ್ಯನಿರ್ವಹಿಸಲು ಸೂಚಿಸಿದರು. ಒಂದು ವೇಳೆ ಅಲಕ್ಷ್ಯತನ ತೋರಿದಲ್ಲಿ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಭೆಗೆ ಸೂಚಿಸಿದರು.

ವಂದನೆಗಳೊಂದಿಗೆ ಸಭೆ ಮುಕ್ತಾಯಗೊಳಿಸಲಾಯಿತು.

ಕ್ರಸಂ:ಆಡಳಿತ/ವಹಿ- /2019-20
ಧಾರವಾಡ ದಿನಾಂಕ: -02-2020

(ಗೌರವ ಗುಪ್ತ)
**ಸರಕಾರದ ಪ್ರಧಾನ ಕಾರ್ಯದರ್ಶಿಗಳು,**
**ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ,**
**ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು**

**ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 26.02.2020 ರಂದು ಜರುಗಿದ ಉಡುಪಿ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆ ಮತ್ತು ಮರಳು ಸಮಸ್ಯೆ ಬಗ್ಗೆ ಜಿಲ್ಲಾಧಿಕಾರಿಗಳು ಉಡುಪಿ ಜಿಲ್ಲೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಡನೆ ನಡೆದ ಸಭೆಯ ನಡವಳಿ:**

**ಸಮಯ: ಪೂರ್ವಾಹ್ನ 10.00 ಗಂಟೆ** **ಸ್ಥಳ: ಜಿಲ್ಲಾಧಿಕಾರಿ ಕಛೇರಿ ಸಭಾಂಗಣ**

**ಉಪಸ್ಥಿತರು:**

1) ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು
2) ಶ್ರೀ ಜಿ.ಜಗದೀಶ, ಭಾ.ಆ.ಸೇ. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
